ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 17 ಶನಿವಾರ 2022

₹4

ಸಂಪುಟ: 43 | ಸಂಚಿಕೆ: 152 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

Promotional Feature



ರಾಜ್ಯಮಟ್ಟದ 'ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕಾರ' ಪುರಸ್ಕೃತರಾದ ಮೈಸೂರಿನ ಅತ್ಯಂತ ಪ್ರಾಮಾಣಿಕ ಹಾಗೂ ಕ್ರಿಯಾಶೀಲ ತಹಶೀಲ್ದಾರರಾದ ಬಿ.ಎನ್.ಗಿರೀಶ್ ಅವರನ್ನು ಮೈಸೂರು ಜಿಲ್ಲೆಯ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್, ಕೃಷ್ಣರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಸಂತೋಷ್ (ಶಂಭು), ಬಸವ ಸೇನೆಯ ರಾಜ್ಯಾಧ್ಯಕ್ಷ ಹಾಗೂ ಕೆ.ಆರ್.ಯುವ ಮೋರ್ಚಾ ಅಧ್ಯಕ್ಷ ಮನು ಶೈವ್, ಬಿಜೆಪಿ ಮುಖಂಡರಾದ ಪ್ರದೀಪ್‌ಸಿಂಗ್, ಗುರುದತ್ ಹಾಗೂ ಬಸವಸೇನೆ ಪದಾಧಿಕಾರಿಗಳು ಆತ್ಮೀಯವಾಗಿ ಅಭಿನಂದಿಸಿದರು.

ನಾಳೆ ವಿಷ್ಣುವರ್ಧನ್ ಚಲನಚಿತ್ರ ಗೀತೆಗಳ ಗಾಯನ



ಮೈಸೂರು,ಸೆ.16(ಪಿಎಂ)– ಸಪ್ತಗಿರಿ ಮೆಲೋಡಿಸ್ ವತಿಯಿಂದ ಡಾ.ವಿಷ್ಣುವರ್ಧನ್ ಜನ್ಮದಿನದ ಅಂಗವಾಗಿ ಸೆ.18ರಂದು ವಿಷ್ಣುವರ್ಧನ್ ಅವರ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ಎಂ.ವಿ.ಗೋವಿಂದರಾಜ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ನಾದಬ್ರಹ್ಮ ಸಂಗೀತಸಭಾದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಇಳೈಆಳ್ವಾರ್ ಸ್ವಾಮೀಜಿ ಸಾನಿಧ್ಯದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೇಯರ್ ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ವೈದ್ಯೆ ಡಾ.ರೇಖಾ ಮತ್ತು ಉದ್ಯಮಿ ರವಿಗೌಡ ಅವರ ಪ್ರಾಯೋಜಕತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಪ್ರವೇಶ ಉಚಿತವಿದೆ ಎಂದರು. ಗಾಯಕರಾದ ಗುರು, ರಾಜಣ್ಣ, ಗೀತಾ, ಜಯಲಕ್ಷ್ಮೀನಾಯ್ಡು ಗೋಷ್ಠಿಯಲ್ಲಿದ್ದರು.

ಇಂದು ವಿಷ್ಣುವರ್ಧನ್ ಸಂಗೀತ ಸಂಜೆ

ಮೈಸೂರು,ಸೆ.16(ಪಿಎಂ)– ಮಹತೀ ಮ್ಯೂಸಿಕಲ್ ಗ್ರೂಪ್ ವತಿಯಿಂದ ಡಾ. ವಿಷ್ಣುವರ್ಧನ್ ಜನ್ಮದಿನದ ಅಂಗವಾಗಿ ಸೆ.17ರಂದು ವಿಷ್ಣುವರ್ಧನ್ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ಅರುಣಾ ಚಲಮ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾ



ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರಲ್ಲಿ ಕಾರ್ಯಕ್ರಮ ನಡೆಯಲಿದೆ. ಗಾಯಕರಾದ ಸುದೀಂದ್ರ, ಶ್ರೀನಿವಾಸ್, ಪೂರ್ಣಿಮಾ, ಮಮತಾ ಮತ್ತು ಸಿಂಚನಾ ಗೀತೆಗಳನ್ನು ಸಾದರಪಡಿಸಲಿದ್ದಾರೆ. ಪ್ರವೇಶ ಉಚಿತವಿದೆ ಎಂದರು. ಗಾಯಕರಾದ ಸುದರ್ಶನ, ಚಂದನ್ ಗೋಷ್ಠಿಯಲ್ಲಿದ್ದರು.

ನಾಳೆ 'ಇಳಯಗಾನ' ಗಾಯನ ಕಾರ್ಯಕ್ರಮ



ಮೈಸೂರು,ಸೆ.16(ಪಿಎಂ)– ನಿನಾದ್ ಮ್ಯೂಸಿಕಲ್ ಟ್ರಸ್ಟ್, ಪ್ರಸನ್ನ ಫಿಲಂ ಹಿಟ್ಸ್ ಗ್ರೂಪ್ ಜಂಟಿ ಆಶ್ರಯದಲ್ಲಿ ಸೆ.18ರಂದು 'ಇಳಯಗಾನ' ಶೀರ್ಷಿಕೆಯಡಿ ಇಳಿಯರಾಜ ಅವರ ಸಂಗೀತ ನಿರ್ದೇಶನದ ಕನ್ನಡ, ತಮಿಳು ಮತ್ತು ತೆಲುಗು ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಹಾಗೂ ಗಾಯಕ ಎ.ಎಸ್.ಪ್ರಸನ್ನಕುಮಾರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಜಗನ್ಮೋಹನ ಅರಮನೆಯಲ್ಲಿ ಗಾಯನ ಕಾರ್ಯಕ್ರಮ ನಡೆಯಲಿದೆ. ವಿವಿಧ ಕ್ಷೇತ್ರಗಳ ಹವ್ಯಾಸಿ ಗಾಯಕ–ಗಾಯಕಿಯರು ಗೀತೆಗಳನ್ನು ಸಾದರಪಡಿಸಲಿದ್ದಾರೆ. ಲೈವ್ ವಾದ್ಯವೃಂದದ ಮೂಲಕ ಗಾಯಕರು ಗೀತೆಗಳನ್ನು ಹಾಡಲಿದ್ದಾರೆ. ಪ್ರವೇಶ ಉಚಿತವಿದೆ ಎಂದರು. ಗಾಯಕರಾದ ಡಾ.ರೇಖಾ, ರಂಗಸ್ವಾಮಿ, ಚಂದನ್ ಗೋಷ್ಠಿಯಲ್ಲಿದ್ದರು.

ಸೆ.18ರಿಂದ 24ರವರೆಗೆ ಮೈಸೂರಲ್ಲಿ ಶ್ರವಣ ದೋಷವುಳ್ಳ ಪುರುಷರ 6ನೇ ರಾಷ್ಟ್ರೀಯ ಟಿ–20 ಕ್ರಿಕೆಟ್ ಪಂದ್ಯಾವಳಿ




ಮೈಸೂರು,ಸೆ.16(ಪಿಎಂ)– ಮೈಸೂರು ಡಿಸ್ಟ್ರಿಕ್ ಡೆಫ್ (ಶ್ರವಣ ದೋಷ) ಅಸೋಸಿಯೇಷನ್ (ಎಂಡಿಡಿಎ), ನವದೆಹಲಿಯ ಆಲ್ ಇಂಡಿಯಾ ಸ್ಪೋರ್ಟ್ಸ್ ಕೌನ್ಸಿಲ್ ಆಫ್ ದಿ ಡೆಫ್ (ಎಐಎಸ್‌ಸಿಡಿ), ಕರ್ನಾಟಕ ಸ್ಪೋರ್ಟ್ಸ್ ಫೆಡರೇಷನ್ ಆಫ್ ದಿ ಡೆಫ್ (ಕೆಎಸ್‌ಎಫ್‌ಡಿ), ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ ಮತ್ತು ಮಯೂರಿ ಸಂಯುಕ್ತಾಶ್ರಯದಲ್ಲಿ ಸೆ.18ರಿಂದ 24ರವರೆಗೆ ಮೈಸೂರಿನಲ್ಲಿ ಶ್ರವಣ ದೋಷವುಳ್ಳ ಪುರುಷರ 6ನೇ ರಾಷ್ಟ್ರೀಯ ಟಿ–20 ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗದ ಅಧ್ಯಕ್ಷ ಎಸ್.ಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಆರ್‌ಬಿಐ ಕ್ರಿಕೆಟ್ ಮೈದಾನ, ಇನ್ಫೋಸಿಸ್ ಕ್ರಿಕೆಟ್ ಮೈದಾನ ಹಾಗೂ ಎನ್‌ಐಎಫ್‌ಟಿ ಕ್ರಿಕೆಟ್ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ. ಕರ್ನಾಟಕವೂ ಸೇರಿದಂತೆ 16 ರಾಜ್ಯಗಳ 16 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿವೆ ಎಂದರು.

ದೆಹಲಿ, ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಉತ್ತರಾಖಂಡ, ಒಡಿಶಾ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತೀಸ್‌ಗಢ, ಕೇರಳ, ತಮಿಳುನಾಡು, ಪುದುಚೇರಿ, ಕರ್ನಾಟಕ ಮತ್ತು ತೆಲಂಗಾಣ ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿವೆ. ಕರ್ನಾಟಕ ತಂಡಕ್ಕೆ ಮೈಸೂರಿನ ರವಿಕಿರಣ್ ಹೆಚ್ಚುವರಿ ಆಟಗಾರರಾಗಿ ಆಯ್ಕೆಯಾಗಿದ್ದಾರೆ. ವಿಜೇತ ತಂಡಕ್ಕೆ 25 ಸಾವಿರ ರೂ., ರನ್ನರ್ ಅಪ್ ತಂಡಕ್ಕೆ 15 ಸಾವಿರ ರೂ. ಹಾಗೂ ತೃತೀಯ ಸ್ಥಾನ ಪಡೆದ ತಂಡಕ್ಕೆ 10 ಸಾವಿರ ನಗದು ಬಹುಮಾನದೊಂದಿಗೆ ಟ್ರೋಫಿಗಳನ್ನು ವಿತರಣೆ ಮಾಡಲಾಗುವುದು ಎಂದು ತಿಳಿಸಿದರು. ಸೆ.17ರಂದು ಸಂಜೆ 5.30ಕ್ಕೆ ಮಾನಸ ಗಂಗೋತ್ರಿಯ ಆಯುಷ್ ಜಮ್ನಾಸಿಯಂ ಆವರಣದಲ್ಲಿ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಅಂತಾರಾಷ್ಟ್ರೀಯ ಓಜೋನ್ ದಿನಾಚರಣೆ

ಮೈಸೂರು, ಸೆ. 16– ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ನಗರ ಘಟಕ ವಿಜ್ಞಾನ ಕೇಂದ್ರ, ಮೈಸೂರು ಹಾಗೂ ಜೆಎಸ್‌ಎಸ್ ಪ್ರೌಢಶಾಲೆ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಓಜೋನ್ ದಿನಾಚರಣೆ ಆಚರಿಸಲಾಯಿತು. ಪರಿಷತ್ತಿನ ಸಂಚಾಲಕ ಆರ್.ಅನಂತರಾಮು



ಮಾತನಾಡಿ, ನಾವೆಲ್ಲಾ ಉಸಿರಾಟಕ್ಕೆ ಆಮ್ಲಜನಕವನ್ನು ಉಪಯೋಗಿಸುತ್ತೇವೆ. ಸೌದೆ, ಪೆಟ್ರೋಲ್, ಅಡಿಗೆ ಅನಿಲ, ಇವುಗಳ ಹಹನಕ್ಕೂ ಆಮ್ಲಜನಕ ಬೇಕು. ನಮ್ಮ ದೇಶದ ಮನುಕುಲ ವಿನಾಶದ ಕಡೆ ಸಾಗುತ್ತಿದೆ. ಇಂದು ಪ್ರಪಂಚದಲ್ಲಿ ಜಾಗತಿಕ ತಾಪಮಾನ ಮಾನವ ಕುಲಕ್ಕೆ ಸವಾಲಾಗಿ ನಿಂತಿದೆ. ಇದನ್ನು ತಡೆಗಟ್ಟುವ ಕಾರ್ಯ ನಮ್ಮೆಲ್ಲರದು ಎಂದರು. ಮೈಸೂರು ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಸಂತೋಷ ಕುಮಾರ್, ದೇವರಾಜ್ ಮಾತನಾಡಿದರು.

ನಿಧನ



ಶಿವಣ್ಣ

ಮೈಸೂರು, ಸೆ.16– ಮೈಸೂರು ಪಡುವಾರಹಳ್ಳಿ ನಿವಾಸಿ ಭೋಜಣ್ಣ ಅವರ ಪುತ್ರ ಶಿವಣ್ಣ (70) ಅವರು ಇಂದು ನಿಧನರಾದರು. ಇವರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆಶಾಲತಾ



ಮೈಸೂರು, ಸೆ.16– ಮೈಸೂರಿನ ವಿಜಯಶ್ರೀಪುರ ನಿವಾಸಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ರಾಜಶೇಖರ್ ರೆಡ್ಡಿ ಅವರ ಪತ್ನಿ ಕೆ.ಆಶಾಲತಾ(57) ಶುಕ್ರವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಸೆ.17) ಬೆಳಿಗ್ಗೆ 11 ಗಂಟೆಗೆ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಕ್ಕುಪತ್ರಕ್ಕೆ ಆಗ್ರಹಿಸಿ ಏಕಲವ್ಯನಗರ ನಿವಾಸಿಗಳ ಅನಿರ್ದಿಷ್ಟಾವಧಿ ಪ್ರತಿಭಟನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಹಕ್ಕುಪತ್ರಕ್ಕೆ ಆಗ್ರಹಿಸಿ ಏಕಲವ್ಯನಗರದ ನಿವಾಸಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟ ಶುಕ್ರವಾರವೂ ಮುಂದುವರೆಯಿತು.

ಮೈಸೂರು,ಸೆ.16(ಪಿಎಂ)– ಏಕಲವ್ಯ ನಗರದಲ್ಲಿ ತಾವು ವಾಸಿಸುತ್ತಿರುವ ನಿವೇಶನಗಳಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಇಲ್ಲಿನ ಅಲೆಮಾರಿ ಸಮುದಾಯದವರು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಗುರುವಾರ ಸಂಜೆ ಜಿಲ್ಲಾಧಿಕಾರಿ ಕಚೇರಿ ಎದುರು ಆರಂಭಿಸಿದ ಅನಿರ್ದಿಷ್ಟಾವಧಿ, ಅಹೋರಾತ್ರಿ ಪ್ರತಿಭಟನೆ ಶುಕ್ರವಾರವೂ ಮುಂದುವರೆಯಿತು.

ಸುಮಾರು 20 ವರ್ಷಗಳ ಹಿಂದೆ ಮೈಸೂರಿನ ಹೆಬ್ಬಾಳ್ ಕೆರೆ ಅಂಗಳದಲ್ಲಿ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದ ನಮ್ಮನ್ನು ಕೆರೆ ಅಭಿವೃದ್ಧಿಪಡಿಸುವ ಕಾರಣ ಜಿಲ್ಲಾಡಳಿತ ಶ್ಯಾದನಹಳ್ಳಿ ಸರ್ವೆ ನಂ.53ರ ಸರ್ಕಾರಿ ಜಾಗದಲ್ಲಿ ಗುಡಿಸಲು ಹಾಕಿಕೊಂಡು ಜೀವನ ನಡೆಸಲು ಅವಕಾಶ ನೀಡಲಾಗಿತ್ತು. ಬಳಿಕ ಕೊಳಚೆ ನಿರ್ಮೂಲನಾ ಮಂಡಳಿಯು, ಪ್ರತ್ಯೇಕ ನೆಲ ಮನೆಗಳನ್ನು ನಿರ್ಮಿಸಿಕೊಡುವುದಾಗಿ ನಂಬಿಸಿ ಶ್ಯಾದನಹಳ್ಳಿ ಸರ್ವೆ ನಂ.37ರ ಸರ್ಕಾರಿ ಗೋಮಾಳಕ್ಕೆ ಸ್ಥಳಾಂತರ ಮಾಡಿತು. ಬಳಿಕ ಇಲ್ಲಿಗೆ ಏಕಲವ್ಯನಗರವೆಂದು ಹೆಸರಿಸಿ ಮೂಲಸೌಲಭ್ಯ ಕಲ್ಪಿಸಲಾಗಿದೆ. ಇಲ್ಲಿನ ನಮ್ಮ ನಿವೇಶನಗಳಿಗೆ ಹಕ್ಕು ಪತ್ರ ನೀಡಬೇಕು ಎಂದು ಒತ್ತಾಯಿಸಿದರು. ಕೊಳಚೆ ನಿರ್ಮೂಲನಾ ಮಂಡಳಿಯವರು ಮತ್ತು ಸ್ಥಳೀಯ ಕಂದಾಯ ಇಲಾಖೆಯವರು ಭೂಗಳ್ಳರೊಂದಿಗೆ ಶಾಮೀಲಾಗಿ ಜೆ ನರ್ಮ್ ಯೋಜನೆಯಡಿ ನಿರ್ಮಿಸಿರುವ ಕಳಪೆ ಗುಣಮಟ್ಟದ ಬಹುಮಹಡಿ ಕಟ್ಟಡದ ಇಂದಿರಾಗಾಂಧಿ ಬಡಾವಣೆಗೆ ಸ್ಥಳಾಂತರಿಸಲು ಮೇಲಾಧಿಕಾರಿಗಳಿಗೆ ವರದಿ ನೀಡಿದ್ದಾರೆ. ಸದರಿ ಗೋಮಾಳವು ಮೈಸೂರು ನಗರದ 10 ಕಿ.ಮೀ. ವ್ಯಾಪ್ತಿಗೆ ಒಳಪಡುವ ಕಾರಣ ವೈಯಕ್ತಿಕವಾಗಿ ಯಾರಿಗೂ ಇಲ್ಲಿ ಭೂಮಿ ಮಂಜೂರು ಮಾಡಲು ಅವಕಾಶವಿಲ್ಲ. ಆದರೂ ಖಾಸಗಿ ವ್ಯಕ್ತಿಗಳಿಗೆ ಸ್ಥಳೀಯ ಕಂದಾಯ ಅಧಿಕಾರಿಗಳು ಅಕ್ರಮವಾಗಿ ಇಲ್ಲಿಗೆ ಖಾತೆ ಮಾಡಿದ್ದಾರೆ ಎಂದು ಆರೋಪಿಸಿದರು.

ಸರ್ಕಾರದ ಅಕ್ರಮ ಸಕ್ರಮ ಯೋಜನೆಯಡಿ ಆನ್‌ಲೈನ್‌ನಲ್ಲಿ 94ಸಿ ಅಡಿಯಲ್ಲಿ ಸಲ್ಲಿಸಿದ್ದ ನಮ್ಮ ಅರ್ಜಿಗಳನ್ನು ಮೈಸೂರು ತಾಲೂಕು ಆಡಳಿತವು ವಜಾಗೊಳಿಸಿದ್ದು, ಗೋಮಾಳದ ಜಾಗವನ್ನು ಭೂಗಳ್ಳರಿಗೆ ಕೊಡಲು ಮುಂದಾಗಿದೆ ಎಂದು ದೂರಿದರು.

ಪ್ರತಿಭಟನೆ ನೇತೃತ್ವ ವಹಿಸಿರುವ ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಒಂಟಿಕೊಪ್ಪಲಿನ ಶಾಸಕ ಜಿ.ಟಿ.ದೇವೇಗೌಡ ಅವರ ನಿವಾಸದ ಎದುರು ನಿನ್ನೆ (ಗುರುವಾರ) ಬೆಳಗ್ಗೆಯಿಂದ ಸಂಜೆಯವರೆಗೆ ಪ್ರತಿಭಟನೆ ನಡೆಸಲು ಪೊಲೀಸರು ಅವಕಾಶ ನೀಡಿದ್ದರು. ಶಾಸಕರು ಅಧಿವೇಶನದಲ್ಲಿರುವ ಕಾರಣ ಈ ಸ್ಥಳದಲ್ಲಿ ಪ್ರತಿಭಟನೆ ಮುಂದುವರೆಸುವುದು ಬೇಡವೆಂದು ಪೊಲೀಸರು ಮನವೊಲಿಸಿದರು.

ಹೀಗಾಗಿ ನಿನ್ನೆ ಸಂಜೆಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ಆರಂಭಿಸಿದ್ದೇವೆ ಎಂದು ತಿಳಿಸಿದರು. ಈ ಜನರು ವಾಸ ಮಾಡುತ್ತಿರುವ ಏಕಲವ್ಯನಗರವು ಸರ್ಕಾರಿ ಗೋಮಾಳ. ಅದರಲ್ಲೂ ಇದು ಬಿ ಖರಾಬು ಭೂಮಿ. ಹೀಗಾಗಿ ವೈಯಕ್ತಿಕವಾಗಿ ಯಾರಿಗೂ ಕೊಡಲು ಬರುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಅಲ್ಲಿ ವಾಸ ಮಾಡುತ್ತಿರುವ ಈ ಜನತೆಗೆ ಕೊಡಲು ಅವಕಾಶವಿದೆ. ಈ ನಿಟ್ಟಿನಲ್ಲಿ ಕೂಡಲೇ ಹಕ್ಕುಪತ್ರ ಕೊಡಬೇಕು ಎಂದು ಆಗ್ರಹಿಸಿದರು.

ತರಾತುರಿಯಲ್ಲಿ ರಸ್ತೆ ಗುಂಡಿ ಮುಚ್ಚಿದ ಪಾಲಿಕೆ...!

ಮೈಸೂರು, ಸೆ.16(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ 'ಯುವ ಸಂಭ್ರಮ' ಸಾಂಸ್ಕೃತಿಕ ಕಾರ್ಯಕ್ರಮ ಆರಂಭಗೊಂಡ ಹಿನ್ನೆಲೆಯಲ್ಲಿ ತರಾತುರಿಯಲ್ಲಿ ರಸ್ತೆ ಗುಂಡಿ ಮುಚ್ಚಲು ನಗರಪಾಲಿಕೆ ಮುಂದಾಯಿತು. ಪಡುವಾರಹಳ್ಳಿ ಸಿಗ್ನಲ್‌ನಿಂದ ಮೈಸೂರು ವಿವಿ ಅತಿಥಿ ಗೃಹದವರೆಗಿನ ರಸ್ತೆಯಲ್ಲಿದ್ದ ಗುಂಡಿಗಳಿಗೆ ತರಾತುರಿಯಲ್ಲಿ ಜಲ್ಲಿಕಲ್ಲು ಸುರಿದು ಮುಚ್ಚಲಾಯಿತು. ಈ ವೇಳೆ ಅಲ್ಲಲ್ಲಿ ವಾಹನಗಳು ಸರಿಯಾಗಿ ಸಂಚರಿಸಲಾಗದೆ ಪರಾದಾಡುವಂತಾಯಿತು.

ತರಾತರಿಯಲ್ಲಿ ರಸ್ತೆ ಗುಂಡಿ ಮುಚ್ಚಿರುವುದನ್ನು ಗಮನಿಸಿದ ಕೆಲ ವಾಹನ ಸವಾರರು ಇಷ್ಟು ದಿನ ಎಲ್ಲಿ ಹೋಗಿದ್ದರು ಎಂದು ಕಿಡಿಕಾರಿದರಲ್ಲದೆ ಸಮಸ್ಯೆ ಕುತ್ತಿಗೆಗೆ ಬರುವವರೆಗೂ ಇವರು ಸುಮ್ಮನೆ ಇರುತ್ತಾರೆ ಎಂದು ಗೊಣಗುತ್ತಾ ಸಾಗಿದರು. ಮತ್ತೆ ಕೆಲವರು ಈಗ ಜಲ್ಲಿಕಲ್ಲು ಸುರಿದು ಮಟ್ಟ ಮಾಡಿದ್ದಾರೆ. ಮುಂದಿನ ವರ್ಷ ಡಾಂಬರ್ ಹಾಕುತ್ತಾರೆ ಎಂದು ಪಾಲಿಕೆ ಕಾರ್ಯ ವೈಖರಿಗೆ ಬೇಸರ ವ್ಯಕ್ತಪಡಿಸಿದರು.



ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಮಾರಾಟ ಪ್ರಕರಣದಲ್ಲಿ ಭಾಗಿ ಹಿನ್ನೆಲೆ ಕಾಂಗ್ರೆಸ್‌ನಿಂದ ರಾಜಾರಾಂ ವಜಾ ಸಾಧ್ಯತೆ



ಮೈಸೂರು, ಸೆ.16(ಆರ್‌ಕೆ)–ನಕಲಿ ದಾಖಲೆ ಸೃಷ್ಟಿಸಿ ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಬಂಧಿತನಾಗಿರುವ ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ರಾಜಾರಾಂನನ್ನು ಪಕ್ಷದಿಂದ ವಜಾ ಮಾಡಲು ಕಾಂಗ್ರೆಸ್ ನಿರ್ಧರಿಸಿದೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್, ವಿಷಯ ಏನಾಗಿದೆ ಎಂಬುದು ಗೊತ್ತಿರಲಿಲ್ಲ, ಈಗಷ್ಟೇ ಮಾಹಿತಿ ಬಂದಿದೆ. ಕೆಪಿಸಿಸಿ ಅಧ್ಯಕ್ಷರೊಂದಿಗೆ ಚರ್ಚಿಸಿ ರಾಜಾರಾಂ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರು ಪ್ರತಿಕ್ರಿಯಿಸಿ, ರಾಜಾರಾಂ ಬಂಧನವಾಗಿರುವ ಬಗ್ಗೆ ಕೆಪಿಸಿಸಿ ಅಧ್ಯಕ್ಷರು, ಕಾರ್ಯಾಧ್ಯಕ್ಷರಿಗೆ ಮಾಹಿತಿ ನೀಡಿದ್ದು, ಕಾಂಗ್ರೆಸ್‌ನಿಂದ ವಜಾಗೊಳಿಸುವಂತೆ ಶಿಫಾರಸು ಮಾಡಿದ್ದೇವೆ. ಇಷ್ಟರಲ್ಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ನಕಲಿ ಸೀಲು, ಸ್ಟ್ಯಾಂಪ್ ಪೇಪರ್ ಸೃಷ್ಟಿಸಿ ಖಾಸಗಿ ಹಾಗೂ ಸರ್ಕಾರಿ ಆಸ್ತಿಗಳನ್ನು ಪರಭಾರೆ ಮಾಡುತ್ತಿದ್ದ ಪ್ರಕರಣದಲ್ಲಿ ಭಾಗಿಯಾಗಿದ್ದಾನೆಂದು ಕಂಡು ಬಂದ ಹಿನ್ನೆಲೆಯಲ್ಲಿ ರಾಜಾರಾಂನನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು, ವಿಚಾರಣೆ ನಡೆಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣದಲ್ಲಿ ಒಂದು ಪ್ರತಿಷ್ಠಿತ ಸಮುದಾಯದ ಇಬ್ಬರು ಪ್ರಮುಖ ವ್ಯಕ್ತಿಗಳೂ ಸೇರಿದಂತೆ ಇನ್ನೂ ಐವರು ಭಾಗಿಯಾಗಿದ್ದಾರೆಂಬುದು ತನಿಖೆಯಿಂದ ತಿಳಿದು ಬಂದಿದ್ದು, ಪೊಲೀಸರು ಅವರಿಗಾಗಿ ಬಲೆ ಬೀಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.09.2022 ಶನಿವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ : ರೋಹಿಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ :** ವಿಶ್ವ ರೇಬೀಸ್ ದಿನದ ಅಂಗವಾಗಿ ನಾಯಿಗಳಿಗೆ (ಸಾಕುನಾಯಿ ಮತ್ತು ಬೀದಿ ನಾಯಿ) ರೇಬೀಸ್ ಲಸಿಕಾ ಅಭಿಯಾನ, ಸ್ಥಳ: ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಗಳಲ್ಲಿ, ಬೆಳಗ್ಗೆ 10 ರಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಬೆಳಗ್ಗೆ 10 ರಿಂದ.

■ **ಅಖಿಲ ಭಾರತೀಯ ತೇರಾಪಂತ್ ಯುವ ಪರಿಷದ್ :** ರಕ್ತದಾನ ಶಿಬಿರ, ಸ್ಥಳ: ತೇರಾಪಂತ್ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ :** ಅಲ್ಪಸಂಖ್ಯಾತ ಘಟಕದ ಪದಾಧಿಕಾರಿಗಳ ಪದಗ್ರಹಣ, ಉಪಸ್ಥಿತರು : ಶಾಸಕ ತನ್ವೀರ್ ಸೇಠ್, ರಾಜ್ಯ ಅಲ್ಪಸಂಖ್ಯಾತ ಕಾಂಗ್ರೆಸ್ ಘಟಕದ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ವಾಸು, ಎಂ.ಕೆ. ಸೋಮಶೇಖರ್, ಆರ್. ಮೂರ್ತಿ, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಬೆಳಗ್ಗೆ 10.30ಕ್ಕೆ.

■ **ಲಯನ್ಸ್ ಇಂಟರ್‌ನ್ಯಾಷನಲ್ :** ಲಯನ್ ಕ್ವೆಸ್ಟ್, ಉಪಾಧ್ಯಾಯರಿಗೆ ತರಬೇತಿ ಕಾರ್ಯಾಗಾರ, ಉದ್ಘಾಟನೆ : ಲಯನ್ ಎನ್. ಮೋಹನ್ ಕುಮಾರ್, ಗೌರವ ಅತಿಥಿಗಳು : ಲಯನ್ ರೇಣು ಕುಮಾರ್, ಡಾ. ನಾಗರಾಜ್ ರಾವ್, ಲಯನ್ ಕವಿತಾ ಶಾಸ್ತ್ರಿ, ಅಧ್ಯಕ್ಷತೆ : ಲಯನ್ ವಿ. ವೆಂಕಟೇಶ್, ಲಯನ್ ಎನ್. ರವಿಕುಮಾರ್, ಸ್ಥಳ: ಲಯನ್ಸ್ ವೆಸ್ಟ್ ಸೇವಾನಿಕೇತನ ಸ್ಕೂಲ್, ಗೋಕುಲಂ, ಸಂಜೆ 4ಕ್ಕೆ

■ **ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 10.30ಕ್ಕೆ.

■ **ಮಹಾರಾಜ ಕಾಲೇಜು :** ಶೈಕ್ಷಣಿಕ ಪಿಎಚ್.ಡಿ. ಕೋರ್ಸ್ ವರ್ಕ್‌ನ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಸಾಹಿತಿ ಪ್ರೊ. ಡಿ.ಕೆ. ರಾಜೇಂದ್ರ, ಅಧ್ಯಕ್ಷತೆ : ಪ್ರಾಂಶುಪಾಲ ಪ್ರೊ. ಅನಿಟ ವಿಮ್ಲ ಬ್ರ್ಯಾಗ್ಸ್, ಉಪಸ್ಥಿತರು : ಪ್ರೊ. ಜಿ.ಎಚ್. ನಾಗರಾಜ್, ಪ್ರೊ. ಡಿ. ವಿಜಯಲಕ್ಷ್ಮಿ, ಡಾ. ಎಚ್.ಆರ್. ಚೇತನ, ಡಾ. ಟಿ.ಕೆ. ಕೆಂಪೇಗೌಡ, ಡಾ. ವಿಜಯಲಕ್ಷ್ಮಿ ಮನಾಪುರ, ಸ್ಥಳ: ಪಿಎಚ್.ಡಿ ಸಂಶೋಧನಾ ಕೊಠಡಿ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ, ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು, ಇನ್ನೋವೇಟಿವ್, ಭಾರತೀ ಪ್ರಕಾಶನ :** ಯಕ್ಷಗಾನ ಚಿಂತಕ, ಹಿರಿಯ ಲೇಖಕ ಜಿ.ಎಸ್. ಭಟ್ಟ ಅವರ ಅರುಣಾಚಲದ ಸಂತ ಭಗವಾನ್ ಶ್ರೀ ರಮಣ ಮಹರ್ಷಿ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಹಿರಿಯ ಅಂಕಣಕಾರ ಎಸ್. ಷಡಕ್ಷರಿ, ಕೃತಿ ಕುರಿತು ಮಾತನಾಡುವವರು : ಅಂಕಣಕಾರ ಡಾ. ವಿ. ರಂಗನಾಥ್, ಅಧ್ಯಕ್ಷತೆ : ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್.ಸಿ. ನಾಗರಾಜು, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು, ಅನಿಕೇತನ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಶೈಕ್ಷಣಿಕ ಪಿಎಚ್.ಡಿ ಕೋರ್ಸ್ ವರ್ಕ್‌ನ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸಮಾರೋಪ ಭಾಷಣ : ವಿದ್ವಾಂಸ ಪ್ರೊ. ಆರ್ವಿಯಸ್ ಸುಂದರಂ, ಉಪಸ್ಥಿತರು : ಪ್ರೊ. ಎನ್.ಕೆ. ಲೋಲಾಕ್ಷಿ, ಡಾ. ಎಸ್.ಡಿ. ಶಶಿಕಲಾ, ಪ್ರೊ. ನಂಜಯ್ಯ ಹೊಂಗನೂರು, ಪ್ರೊ. ಬಿ.ಕೆ. ರವೀಂದ್ರನಾಥ್, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಮೈಸೂರು ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘ ಹಾಗೂ ಕೆಎಸ್‌ಸಿ–ಎಎಸ್‌ಐ :** 5ನೇ ಮಧ್ಯ ವರ್ಷದ ಸಮ್ಮೇಳನ, ಉದ್ಘಾಟನೆ : ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಉಪಸ್ಥಿತರು : ಎಎಸ್‌ಐ ರಾಷ್ಟ್ರೀಯ ಅಧ್ಯಕ್ಷ ಡಾ.ಜಿ.ಸಿದ್ದೇಶ್, ಕೆಎಸ್‌ಸಿಎಎಸ್‌ಐ ಮುಖ್ಯಸ್ಥ ಡಾ.ಬಿ.ಎನ್.ಪಾಟೀಲ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಶರಣ ಮಂಡಲಿ :** ಡಾ. ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ, ರಾಜೇಂದ್ರ ಶ್ರೀಗಳ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಶ್ರೀಗಳನ್ನು ಕುರಿತು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ನುಡಿ ನಮನ : ಕುವೆಂಪು ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಪ್ರೊ. ನೀಲಗಿರಿ ತಳವಾರ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಲಲಿಲ ಕಲಾ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಎಸ್. ಶೇಖರ್, ಅಧ್ಯಕ್ಷತೆ : ಲಲಿತ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಸಿ.ಎ. ಶ್ರೀಧರ್, ಸಂಗೀತ ಶಾಸ್ತ್ರಜ್ಞ ಡಾ. ರಾ.ಸಾ. ನಂದಕುಮಾರ್ ಅವರಿಂದ ಮತಂಗ ಮುನಿಯ ಬೃಹದ್ದೇಶಿಯ ಅವಲೋಕನ ಕುರಿತು ಉಪನ್ಯಾಸ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಶ್ವಕರ್ಮ ಜಯಂತ್ಯೋತ್ಸವ ಸಮಿತಿ :** ವಿಶ್ವಕರ್ಮ ಜಯಂತಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 12.30ಕ್ಕೆ

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್ ಕರಕುಶಲ ಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಸಂಜೆ 4ಕ್ಕೆ.

■ **ವಿಪ್ರ ಮಹಿಳಾ ಸಂಘ :** ಕೈಲಾಸ ಮಾನಸ ಸರೋವರ ಯಾತ್ರಾ ದರ್ಶನ, ಸ್ಥಳ: ಶೃಂಗೇರಿ ಶಂಕರ ಮಠದ ಆವರಣ, ಸಂಜೆ 4ಕ್ಕೆ.

■ **ರಾಗ ಮ್ಯೂಸಿಕ್ ಅಕಾಡೆಮಿ :** 90ನೇ ಮಾಸಿಕ ಸಂಗೀತ ಕಾರ್ಯಕ್ರಮ, ವಿದುಷಿ ಅಂಜನಾ ಪಿ. ರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಪೃಥ್ವಿ ಭಾಸ್ಕರ್ – ವಯೋಲಿನ್, ವಿದ್ವಾನ್ ಮಲ್ಲಾಡಿ ಶ್ರೀ ಅರವಿಂದ್ –ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 5ಕ್ಕೆ.

■ **ವಿದ್ಯುಲ್ಲಹರಿ, ಭೂಮಿಕ ಅಸೋಸಿಯೇಟ್ಸ್ :** ಮೆಲ್ಲುಸಿರೇ ಸವಿಗಾನ ಹಳೇ ಚಿತ್ರಗೀತೆಗಳ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಕಪ್ಪಡಿ ಮತ್ತು ಹೊನ್ನಾಯಕನಹಳ್ಳಿ ಮಠಾಧೀಶ್ವರರಾದ ದಿವಂಗತ ಎ.ಎಲ್. ರಾಜೇ ಅರಸ್ ಅವರ ಭಾವಚಿತ್ರ ಅನಾವರಣ, ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ಅವರಿಂದ ಜಯಂತಿ ಮಹೋತ್ಸವ, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸು, ಡಾ. ಗುರುರಾಜ ಮೈಸೂರು ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 5.30ಕ್ಕೆ

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಸುರೇಶ್ ಮೋಹನ್ ಸ್ಮರಣಾರ್ಥ ನಾದಕಿಶೋರೋತ್ಸವ, ಸಂಜೆ 4 ರಿಂದ ಗೋವಿಂದ ಮಾಧವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಪಿಟೀಲು ವಾದನ, ನಂದನ್ ಕಶ್ಯಪ್ –ಮೃದಂಗ, ಸಂಜೆ 5.30 ರಿಂದ ಎಂ.ಎಸ್. ಕೀರ್ತನ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಸಿ.ವಿ. ಶ್ರುತಿ–ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸಂಜೆ 7 ರಿಂದ ಹರಿಚರಣ್ ಹೊಸಮನೆ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ತುಮಕೂರು ಯಶಸ್ವಿ–ಪಿಟೀಲು, ವಿಕ್ರಮ್ ಭಾರದ್ವಾಜ್–ಮೃದಂಗ, ಸ್ಥಳ:ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಧ್ಯಾನದ ಘಳಿಗೆಯಲ್ಲಿ ಪುಸ್ತಕದ ಮೂಲಕ ಯೋಗ–ವೇದಾಂತದ ಸಾರದ ಅನ್ವೇಷಣೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅರಿವು ರಂಗ ತಂಡ :** ಅಬ್ದುಸ್ ಸಲಾಂ ಅವರ ಒಂದು ವಿಚಾರ ನಾಟಕ ಪ್ರದರ್ಶನ, ನಿರ್ದೇಶನ : ಯತೀಶ್ ಎಂ. ಕೊಳ್ಳೇಗಾಲ, ಸಂಗೀತ : ಸಾಯಿಶಿವು, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.40 ಭಾವಗೀತೆ–ಕೆ.ಎಸ್. ಸುರೇಖಾ, 6.45 ರೈತರಿಗೆ ಸಲಹೆ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 10.00 ಎನ್. ಚೊಕ್ಕಮ್ಮ–ವೀಣಾವಾದನ ಹಾಗೂ ಹಾಡುಗಾರಿಕೆ, 11.00 ಅಮೃತ ಸ್ವಾತಂತ್ರ್ಯ ಮಹೋತ್ಸವದ ವಿಶೇಷ ಸರಣಿ "ಸ್ವರಾಜ್" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ

ಮಧ್ಯಾಹ್ನ: 12.45ಜನಪದ ಸಂಗೀತ–ಮಾದೇವಮ್ಮ ಮತ್ತು ತಂಡ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ಶ್ರೀ ಗುರು ಕಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 4.30 ನೆನಪಿನಂಗಳ–ಹಿರಿಯ ಸಾಹಿತಿ ತ.ಸು.ಶ್ಯಾಮರಾಯರ ಸಾಹಿತ್ಯಾನುಭವದ ಮಾತುಗಳು, 6.50 ಕೃಷಿರಂಗ–ಕಿಸಾನ್ ವಾಣಿ, ತೋರಣ ಹೂರಣ –ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ ಕಥಾ ನಾಟಕ "ಅಳುವ ಕಡಲೊಳು ನಗೆಯ ಹಾಯಿದೋಣಿ, ಮೂಲಕಥೆ– ಶೀಲಾ ಸತ್ಯೇಂದ್ರ ಸ್ವಾಮಿ ಬಾನುಲಿ ರೂಪ– ಎನ್.ನಾಗಚಂದ್ರ, 9.15 ಗ್ರಾಮೀಣ ಆರೋಗ್ಯ–ನರ್ಸಿಂಗ್ ಕೌಶಲ ಕುರಿತು ಡಾ.ಎಂ.ಆರ್. ಸೀತಾರಾಂ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ವಿದ್ವಾನ್ ಈಮನಿ ಶಂಕರ ಶಾಸ್ತ್ರಿ – ವೀಣಾವಾದನ, 11.00 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 17 ಶನಿವಾರ 2022

ಸಂಪುಟ: 43 | ಸಂಚಿಕೆ: 152 | ಪುಟಗಳು: 12


ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೆಬಿಜಿಯವರ ಭೂಮಂತ್ರ... ಭೂಮಂತ್ರ...



ಅದ್ದೂರಿ ಮೈಸೂರು ದಸರಾಗೆ ಸ್ವಾಗತ

■ ಪುಟ–4

ದಸರಾ ಉತ್ಸವ ಮೊದಲ ಸಾಂಸ್ಕೃತಿಕ ಕಾರ್ಯಕ್ರಮ

'ಯುವ ಸಂಭ್ರಮ'ಕ್ಕೆ ವರ್ಣರಂಜಿತ ಚಾಲನೆ

ಯುವ ಸಮೂಹಕ್ಕೆ ಕಿಕ್‌ಕೊಟ್ಟ ಖ್ಯಾತ ನಟ ಡಾಲಿ ಧನಂಜಯ



'ಯುವ ಸಂಭ್ರಮ'ದಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ 'ಪ್ರೇಮ ಭಾರತಂ' ಶೀರ್ಷಿಕೆಯಡಿ ನೃತ್ಯ ಪ್ರದರ್ಶನ



ಮೈಸೂರು ವಿವಿ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಆಯೋಜಿಸಿರುವ ನಾಡಹಬ್ಬ ದಸರಾ 'ಯುವ ಸಂಭ್ರಮ'ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಖ್ಯಾತ ನಟ ಡಾಲಿ ಧನಂಜಯ ಚಾಲನೆ ನೀಡಿದರು. ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಉಪ ಮೇಯರ್ ಜಿ.ರೂಪ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಸ್‌ಪಿ ಚೇತನ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ ಮತ್ತಿತರರಿದ್ದರು.

ಪ್ರತಿಭೆ ಗುರುತಿಸುವ ಸದವಕಾಶ...

"ನಾಡಹಬ್ಬ ಮೈಸೂರು ದಸರಾ ಉತ್ಸವದ 'ಯುವ ಸಂಭ್ರಮ'ದಲ್ಲಿ 250ಕ್ಕೂ ಹೆಚ್ಚು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದು, ತಮ್ಮ ಪ್ರತಿಭೆಯನ್ನು ಗುರುತಿಸುವ ಸದವಕಾಶ ಇದಾಗಿದೆ. ಅತ್ಯುತ್ತಮ ಪ್ರದರ್ಶನದ ಮೂಲಕ ದಸರಾ ಆಚರಣೆಗೆ ಮೆರಗು ತನ್ನಿ. 'ಯುವ ಸಂಭ್ರಮ'ದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ. – ಎಸ್.ಟಿ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ

ಮೈಸೂರು, ಸೆ.16(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಮೊಟ್ಟ ಮೊದಲ ಸಾಂಸ್ಕೃತಿಕ ಕಾರ್ಯಕ್ರಮ 'ಯುವ ಸಂಭ್ರಮ'ಕ್ಕೆ ಶುಕ್ರವಾರ ವೈಭವದ ಚಾಲನೆ ದೊರೆಯಿತು. ಮೈಸೂರು ವಿವಿ ಮಾನಸಗಂಗೋತ್ರಿ ಬಯಲು ರಂಗ ಮಂದಿರದ ವರ್ಣರಂಜಿತ ವೇದಿಕೆಯಲ್ಲಿ ದೀಪ ಬೆಳಗಿಸಿ, ನಗಾರಿ ಬಾರಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಖ್ಯಾತ ಚಲನಚಿತ್ರ ನಟ ಡಾಲಿ ಧನಂಜಯ ಉದ್ಘಾಟಿಸಿದರು. ಬಳಿಕ ನಟ ಡಾಲಿ ಧನಂಜಯ ಮಾತನಾಡಿ,

ಸಾಂಪ್ರದಾಯಿಕ ಉಡುಪಿನಲ್ಲಿ ಗಮನ ಸೆಳೆದ ಡಾಲಿ...!

"ಬಿಳಿ ಶರ್ಟ್, ಬಿಳಿ ಪಂಚೆಯ ಸಾಂಪ್ರದಾಯಿಕ ಉಡುಪು ತೊಟ್ಟು 'ಯುವ ಸಂಭ್ರಮ' ವೇದಿಕೆಗೆ ಆಗಮಿಸಿದ ನಟ ಡಾಲಿ ಧನಂಜಯ ಎಲ್ಲರ ಗಮನ ಸೆಳೆದರಲ್ಲದೆ ಸಂಭ್ರಮಕ್ಕೆ ತಾರಾ ಮೆರಗು ನೀಡಿದರು. ಡಾಲಿ ಧನಂಜಯ ವೇದಿಕೆಗೆ ಆಗಮಿಸುತ್ತಿದ್ದಂತೆ ಬಯಲು ರಂಗಮಂದಿರದಲ್ಲಿ ಡಾಲಿ.. ಡಾಲಿ.. ಎಂಬ ಘೋಷಣೆ ಮುಗಿಲು ಮುಟ್ಟಿತು.

ಮೈಸೂರೆಂದರೆ, ಮೈಸೂರು ದಸರಾ. ಮಾನಸ ಗಂಗೋತ್ರಿ ಎಂದರೆ ಬಯಲು ರಂಗಮಂದಿರ. ಇಲ್ಲಿ ಓದುವಾಗ ಓಡಾಡಿದ ನೆನಪುಗಳ ಸರಮಾಲೆಯೇ ಇದೆ. ನಮಗೆ ಇರೋದು ಒಂದೇ ಲೈಫ್, ಸಂಭ್ರಮಿಸಬೇಕು. ನಾಡಹಬ್ಬವನ್ನು ಸೂಪರ್ ಹಿಟ್ ಮಾಡಬೇಕು. ನಾಡಹಬ್ಬ ಮೈಸೂರು ದಸರಾ ಸಂಭ್ರಮದ ಜೊತೆ ಜೊತೆಗೆ ನೀವು ಅಂದುಕೊಂಡಿರುವ ಕೆಲಸಗಳನ್ನು ಸಾಧಿಸಿದರೆ, ಸಂಭ್ರಮ ಇನ್ನಷ್ಟು ಹೆಚ್ಚಾಗುತ್ತದೆ. ಜೀವನದಲ್ಲಿ ಗುರಿ ಇಟ್ಟುಕೊಂಡು ಕೆಲಸ ಮಾಡಿ. ▶ 8ನೇ ಪುಟಕ್ಕೆ

ಶಾಲೆಗಳಲ್ಲಿ ಏಕರೂಪದ ಡ್ರೆಸ್ ಕೋಡ್ ಅರ್ಜಿ ವಜಾ

ನವದೆಹಲಿ: ದೇಶಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪದ ಡ್ರೆಸ್ ಕೋಡ್ ಜಾರಿಗೆ ತರಲು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇಂದು ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾ. ಹೇಮಂತ್ ಗುಪ್ತಾ ನೇತೃತ್ವದ ದ್ವಿಸದಸ್ಯ ಪೀಠ, ಈ ಪ್ರಕರಣವು ನ್ಯಾಯಾಲಯಕ್ಕೆ ಬರಬಾರದು. ನಾವು ದೇಶಾದ್ಯಂತ ಏಕರೂಪದ ಶಾಲಾ ಸಮವಸ್ತ್ರವನ್ನು ಹೊಂದಲು ಸಾಧ್ಯವಿಲ್ಲ ಎಂದು ಹೇಳಿದೆ.

ಹಿರಿಯ ವಕೀಲ ಮತ್ತು ಭಾರತೀಯ ಜನತಾ ಪಕ್ಷದ ವಕ್ತಾರ ಗೌರವ್ ಭಾಟಿಯಾ ನ್ಯಾಯಾಧೀಶರ ಮುಂದೆ ಹಾಜರಾಗಿ, ನ್ಯಾಯಾಲಯಕ್ಕೆ ಕೋರಿರುವುದು ಏಕರೂಪತೆ, ಕೇವಲ ಸಮವಸ್ತ್ರವಲ್ಲ ಎಂದು ತಿಳಿಸಲು ಪ್ರಯತ್ನಿಸಿದರು. ಶಿಕ್ಷಣದ ▶ 8ನೇ ಪುಟಕ್ಕೆ

ಮತಾಂತರ ವಿರೋಧಿ ಮಸೂದೆ ಅಂಗೀಕಾರ

ಬಲವಂತದ ಮತಾಂತರ ನಿಷೇಧ ಜಾರಿಗೆ ತಂದ 10ನೇ ರಾಜ್ಯ ಕರ್ನಾಟಕ

ಬೆಂಗಳೂರು: ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ತೀವ್ರ ವಿರೋಧದ ನಡುವೆ, ಬಿಜೆಪಿ ಸರ್ಕಾರವು ವಿವಾದಾತ್ಮಕ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ರಕ್ಷಣೆ ಮಸೂದೆ 2022 ಅನ್ನು ಅಂಗೀಕರಿಸಿದೆ, ಇದು ಬಲವಂತದ ಮತಾಂತರ ವಿರೋಧಿ ಮಸೂದೆ ಎಂದು ಜನಪ್ರಿಯವಾಗಿದೆ. ಜನರನ್ನು ಬಲವಂತವಾಗಿ ಮತಾಂತರಕ್ಕೆ ದೂಡಿದರೆ ಅಥವಾ ಪ್ರೇರೇಪಿಸಿದರೆ ಜಾಮೀನು ರಹಿತ ಮತ್ತು ಶಿಕ್ಷಾರ್ಹ ಅಪರಾಧವಾಗುತ್ತದೆ. ರಾಜ್ಯ ವಿಧಾನ ಪರಿಷತ್‌ನಲ್ಲಿ ನಿನ್ನೆ ಇದಕ್ಕೆ ಅಂಗೀಕಾರ ಸಿಕ್ಕಿದೆ.

ಇಂತಹ ಕಾನೂನನ್ನು ಜಾರಿಗೊಳಿಸಿದ ದೇಶದ ಹತ್ತನೇ ರಾಜ್ಯ ಕರ್ನಾಟಕವಾಗಿದೆ. ರಾಜ್ಯ ವಿಧಾನಸಭೆಯಲ್ಲಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಈ ಮಸೂದೆಗೆ ಸುಲಭವಾಗಿ ಅಂಗೀಕಾರ ಸಿಕ್ಕಿತ್ತು.

32,159 ಅತಿಥಿ ಶಿಕ್ಷಕರ ವೇತನ ಬಿಡುಗಡೆ ಮಾಡಿದ ಸರ್ಕಾರ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 32,159 ಅತಿಥಿ ಶಿಕ್ಷಕರ ವೇತನಕ್ಕಾಗಿ ರಾಜ್ಯ ಸರ್ಕಾರ 17 ಸಾವಿರದ 505.23 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಒಟ್ಟು ಮೊತ್ತದಲ್ಲಿ 13 ಸಾವಿರದ 566.33 ಲಕ್ಷ ಸರ್ಕಾರಿ ಪ್ರಾಥಮಿಕ ಶಾಲೆಗಳ 27 ಸಾವಿರ ಅತಿಥಿ ಶಿಕ್ಷಕರ ವೇತನಕ್ಕೆ ಮತ್ತು ಸರ್ಕಾರಿ ಪ್ರೌಢಶಾಲೆಗಳ ಅತಿಥಿ ಶಿಕ್ಷಕರಿಗೆ 3938.90 ಲಕ್ಷ ರೂಪಾಯಿ ವಿತರಿಸಲಾಗುತ್ತದೆ. ಈ ಸಂಬಂಧದ ಆದೇಶವನ್ನು ಜಿಲ್ಲಾ ಪಂಚಾಯತ್ ವಿಶೇಷ ಅಧಿಕಾರಿ ಮತ್ತು ಹಣಕಾಸು ಇಲಾಖೆಯ ಪದನಿಮಿತ್ತ ಜಂಟಿ ಕಾರ್ಯದರ್ಶಿ ಶ್ರೀಕೃಷ್ಣ ಎನ್ ಬುಗಟ್ಯಾಗೋಳ್ ಅವರು ಅಂಗೀಕರಿಸಿದ್ದಾರೆ. ಇದಕ್ಕೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅನುಮೋದನೆ ನೀಡಿದ್ದಾರೆ.

150 ಕ್ಷೇತ್ರ ಕಾಂಗ್ರೆಸ್‌ಗೆ ಫೇವರ್!

● ಎರಡು ಸಮೀಕ್ಷೆಯಿಂದ ಮಾಹಿತಿ ಸಂಗ್ರಹ ● ಡಿಸೆಂಬರ್‌ನಲ್ಲೇ ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ ● ಹಾಲಿ ಶಾಸಕರಿಗೆಲ್ಲಾ ಟಿಕೆಟ್ ನೀಡಲು ನಿರ್ಧಾರ

ಬೆಂಗಳೂರು, ಸೆ.16(ಕೆಎಂಶಿ)– ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಕಾಂಗ್ರೆಸ್ ಡಿಸೆಂಬರ್ ತಿಂಗಳಲ್ಲೇ 150 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಲು ನಿರ್ಧರಿಸಿದೆ. ರಾಜ್ಯದ 224 ಕ್ಷೇತ್ರಗಳಲ್ಲೂ ಎರಡು ಬಾರಿ ಸಮೀಕ್ಷೆ ನಡೆಸಿರುವ ಸುನೀಲ್ ಕನಗೋಳ್ ಹಾಲಿ ವಿಧಾನಸಭೆಯ ಪಕ್ಷದ ಎಲ್ಲಾ ಶಾಸಕರಿಗೂ ಮತ್ತೆ ಟಿಕೆಟ್ ನೀಡುವಂತೆ ಸೂಚಿಸಿದ್ದಾರೆ.

ಅಷ್ಟೇ ಅಲ್ಲ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಿಂದ ಪರಾಭವಗೊಂಡರೂ ಹಾಗೂ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳನ್ನು ಎದುರಿಸಿ, ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡ ಸದಸ್ಯರಿಗೂ ಈ ಬಾರಿ ಸ್ಪರ್ಧಿಸಲು ಅವಕಾಶ ಕೊಡುವಂತೆ ಹೇಳಿದ್ದಾರೆ.

ಆದ್ಯತೆ 150 ಕ್ಷೇತ್ರಗಳಿಗಿರಲಿ, ಉಳಿದ 74 ಕ್ಷೇತ್ರಗಳಲ್ಲಿ ಸಾಧ್ಯವಾದಷ್ಟು ವರ್ಚಸ್ವಿ ಕಾರ್ಯಕರ್ತರು, ಇಲ್ಲವೇ ಅನ್ಯ ಪಕ್ಷಗಳ ಮುಖಂಡರನ್ನು ಕರೆತಂದು ಕಣಕ್ಕಿಳಿಸುವಂತೆ ವರದಿಯಲ್ಲಿ ತಿಳಿಸಿದ್ದಾರೆ. ಹಾಲಿ ಸದಸ್ಯರಲ್ಲಿ ಶೇಕಡ 20 ರಷ್ಟು ಮಂದಿ ಗೆಲುವಿನಲ್ಲಿ ತೊಡಕುಗಳಿವೆ. ಆದರೆ ಆ ಕ್ಷೇತ್ರಗಳಲ್ಲಿ ಇವರನ್ನು ಬಿಟ್ಟರೆ ಬೇರೆ ಅಭ್ಯರ್ಥಿಗಳಿಲ್ಲ.



ಸುನೀಲ್ ಕನಗೋಳ್

ಆ ಕ್ಷೇತ್ರದಲ್ಲಿ ಸದಸ್ಯರು ಎಲ್ಲಿ ಲೋಪ ಎಸಗಿದ್ದಾರೆ ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳಬೇಕೆಂಬುದರ ಬಗ್ಗೆಯು ಕನಗೋಳ್ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಚುನಾವಣಾ ಮಾಂತ್ರಿಕ ಸಲಹೆಯಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಯ್ದ ಈ ಶಾಸಕರನ್ನು ಪ್ರತ್ಯೇಕವಾಗಿ ಕರೆದು ಕ್ಷೇತ್ರದ ಮಾಹಿತಿ ನೀಡಿ, ಚುನಾವಣಾ ವೇಳೆಗೆ ಸರಿಪಡಿಸಿಕೊಳ್ಳಿ. ನೀವೇ ಮತ್ತೆ ಕಣಕ್ಕಿಳಿಯುತ್ತೀರಿ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಯಾವ ಭಾಗದಲ್ಲಿ ನಿಮ್ಮ ವಿರುದ್ಧ ಇದ್ದಾರೂ ಅಂತಹವರ ಓಲೈಕೆಗೆ ಮೊದಲ ಆದ್ಯತೆ ನೀಡಿ ಎಂದು ಆ ಸದಸ್ಯರಿಗೆ ಉಭಯ ನಾಯಕರು ಕಿವಿಮಾತು ಹೇಳಿದ್ದಾರೆ. 140 ರಿಂದ 150 ವಿಧಾನಸಭಾ ಕ್ಷೇತ್ರಗಳನ್ನು ಎಎಎ ಎಂದು ಗುರುತಿಸಿರುವ ಚುನಾವಣಾ ▶ 8ನೇ ಪುಟಕ್ಕೆ

ಮುಖ್ಯಮಂತ್ರಿ ಸಮ್ಮತಿಸಿದರೆ ಮೈಸೂರಲ್ಲಿ ನೀರು ಸರಬರಾಜು, ಒಳ ಚರಂಡಿ ಮಂಡಳಿ ಹೆಚ್ಚುವರಿ ವಿಭಾಗ ಕಚೇರಿ

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಘೋಷಣೆ

ಬೆಂಗಳೂರು, ಸೆ.16(ಕೆಎಂಶಿ)– ಮೈಸೂರಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗದ ಕಚೇರಿಯನ್ನು ಹೆಚ್ಚುವರಿಯಾಗಿ ತೆರೆಯಲು ಮುಖ್ಯಮಂತ್ರಿ ಸಮ್ಮತಿಸಿದರೆ ಇಲಾಖೆ ಕ್ರಮ ಕೈಗೊಳ್ಳಲಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ವಿಧಾನಸಭೆಯಲ್ಲಿ ಹೇಳಿದರು.



ಪ್ರಶ್ನೋತ್ತರ ಅವಧಿಯಲ್ಲಿ ಜಿ.ಟಿ. ದೇವೇಗೌಡ ಅವರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಪ್ರಸ್ತುತ ಮೈಸೂರಿನಲ್ಲಿ ಒಂದು ವಲಯ ಹಾಗೂ ಎರಡು ವಿಭಾಗೀಯ ಕಚೇರಿಗಳಿವೆ. ಚಾಮರಾಜ

ಶಾಸಕ ಜಿ.ಟಿ.ದೇವೇಗೌಡರ ಪ್ರಸ್ತಾಪಕ್ಕೆ ಪ್ರತಿಕ್ರಿಯೆ

ನಗರ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದ್ದು, ಇದನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ. ಅಲ್ಲಿನ ಜನರ ಬೇಡಿಕೆಯ ಒತ್ತಾಸೆಯಂತೆ ಒಂದು ವಿಭಾಗೀಯ ಕಚೇರಿಯನ್ನು ಸ್ಥಳಾಂತರ ಮಾಡುತ್ತಿದ್ದೇವೆ. ಇದರಿಂದ ಯಾವುದೇ ತೊಂದರೆಯಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.



ಹಿಂದುಳಿದ ಜಿಲ್ಲೆಗಳನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿರುವುದರಿಂದ ಚಾಮರಾಜನಗರಕ್ಕೆ ಸ್ಥಳಾಂತರ ಮಾಡಿದ್ದೇವೆ. ಒಂದು ಉಪವಿಭಾಗ ಕಚೇರಿ ಸ್ಥಳಾಂತರವಾಗುವುದರಿಂದ ಸಮಸ್ಯೆ ಉದ್ಭವಿಸುವುದಿಲ್ಲ. ಒಂದು ವೇಳೆ ಹೆಚ್ಚುವರಿಯಾಗಿ ಮೈಸೂರಿನಲ್ಲಿ ವಿಭಾಗ ▶ 8ನೇ ಪುಟಕ್ಕೆ



[ಸಂಗ್ರಹ ಚಿತ್ರ]

ಅ.17ಕ್ಕೆ ಕಾವೇರಿ ತೀರ್ಥೋದ್ಭವ

ಮಡಿಕೇರಿ,ಸೆ.16– ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವಕ್ಕೆ ಮುಹೂರ್ತ ನಿಗದಿಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಅಕ್ಟೋಬರ್ 17ರಂದು ರಾತ್ರಿ 7 ಗಂಟೆ 21 ನಿಮಿಷಕ್ಕೆ ಸಲ್ಲುವ ಮೇಷ ಲಗ್ನದಲ್ಲಿ ಪವಿತ್ರ ಕಾವೇರಿ ತೀರ್ಥೋದ್ಭವವಾಗಲಿದೆ.

ಪೂಜಾ ಕಾರ್ಯಗಳು: ಕಾವೇರಿಯ ಕ್ಷೇತ್ರದಲ್ಲಿ ತುಲಾ ಸಂಕ್ರಮಣ ಜಾತ್ರೆಗೆ ಪೂರ್ವಭಾವಿಯಾಗಿ ಸೆ.27 ರಂದು ಬೆಳಗ್ಗೆ 11 ಗಂಟೆ 5 ನಿಮಿಷಕ್ಕೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ 'ಪತ್ತಾಯಕ್ಕೆ ಅಕ್ಕಿ ಹಾಕುವ' ಕಾರ್ಯಕ್ರಮ ಸಂಪ್ರದಾಯದಂತೆ ನಡೆಯಲಿದೆ. ಅ.5ರಂದು ಬೆಳಗ್ಗೆ 9 ಗಂಟೆ 35 ನಿಮಿಷಕ್ಕೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ 'ಆಜ್ಞಾ ಮುಹೂರ್ತ', ಅ.15ರಂದು ಬೆಳಗ್ಗೆ 11 ಗಂಟೆ 45 ನಿಮಿಷಕ್ಕೆ ಸಲ್ಲುವ ಧನುರ್ ಲಗ್ನದಲ್ಲಿ 'ಅಕ್ಷಯ ಪಾತ್ರೆ ಇರಿಸುವುದು' ಮತ್ತು ಸಂಜೆ 4 ಗಂಟೆ 15 ನಿಮಿಷಕ್ಕೆ ಸಲ್ಲುವ ಕುಂಭ ಲಗ್ನದಲ್ಲಿ 'ಕಾಣಿಕೆ ಡಬ್ಬಿಗಳನ್ನು ಇಡುವುದು' ಸೇರಿದಂತೆ ಕ್ಷೇತ್ರದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀ ಭಾಗಮಂಡಲ–ತಲಕಾವೇರಿ ದೇವಾಲಯ ಪ್ರಕಟಣೆ ತಿಳಿಸಿದೆ.


ಮಿನಿ ಅಂಗನವಾಡಿ ಕೇಂದ್ರಗಳ ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧ

ಬೆಂಗಳೂರು, ಸೆ.16(ಕೆಎಂಶಿ)– ಕೇಂದ್ರ ಸರ್ಕಾರ ಸಮ್ಮತಿಸಿದರೆ ರಾಜ್ಯದಲ್ಲಿರುವ ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಆಚಾರ್ ಹಾಲಪ್ಪ ವಿಧಾನಸಭೆಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಹಾಲಪ್ಪ ಹರತಾಳ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟು 3341 ಮಿನಿ ಅಂಗನವಾಡಿ ಕೇಂದ್ರಗಳಿವೆ. ಇವುಗಳಲ್ಲಿ 1002 ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವೇ ಇವುಗಳನ್ನು ಮೇಲ್ದರ್ಜೆಗೇರಿಸಬೇಕು. ▶ 8ನೇ ಪುಟಕ್ಕೆ



ಸಿಡಿಮದ್ದು ಸದ್ದಿಗೆ ಜಗ್ಗದ ದಸರಾ ಗಜಪಡೆ, ಅಶ್ವಪಡೆ

ಅರಮನೆ ನಿರ್ಮಾಣಗಳ ಸುರಕ್ಷತೆ ದೃಷ್ಟಿಯಿಂದ ದಸರಾ ವಸ್ತುಪ್ರದರ್ಶನದ ಆವರಣದ ಪಾರ್ಕಿಂಗ್ ಸ್ಥಳಕ್ಕೆ ಸಿಡಿಮದ್ದು ತಾಲೀಮು ಸ್ಥಳಾಂತರ



ದಸರಾ ವಸ್ತು ಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ಎರಡನೇ ಹಂತದ ಸಿಡಿಮದ್ದು ತಾಲೀಮು ನಡೆಸಲಾಯಿತು.

"2ನೇ ಹಂತದ ಸಿಡಿಮದ್ದು ತಾಲೀಮಿನಲ್ಲಿ ಎಲ್ಲಾ ಆನೆಗಳು ಶಬ್ಧಕ್ಕೆ ಒಗ್ಗಿಕೊಂಡಿವೆ. ಲಕ್ಷ್ಮೀ ತನ್ನ ಮರಿಯೊಂದಿಗೆ ಒಂಟಿಯಾಗಿರಲು ಬಿಡಬಾರದು ಎಂಬ ಉದ್ದೇಶದಿಂದ ಚೈತ್ರಾಳನ್ನು ಜತೆಯಲ್ಲಿರಿಸಿ ಉಳಿದ ಆನೆಗಳನ್ನು ತಾಲೀಮಿಗೆ ಕರೆತಂದಿದ್ದೆವು. ಒಂದೆರಡು ಆನೆ ಹೊರತುಪಡಿಸಿದರೆ ಉಳಿದ ಎಲ್ಲಾ ಆನೆಗಳು ಉತ್ತಮವಾಗಿ ಸಹಕರಿಸಿದವು. ಅರಮನೆಯ ನಿರ್ಮಾಣಗಳಿಗೆ ಯಾವುದೇ ಧಕ್ಕೆಯಾಗದಿರಲೆಂದು ಅರಮನೆ ಮಂಡಳಿ ಸೂಚನೆ ಮೇರೆಗೆ ವಸ್ತುಪ್ರದರ್ಶನ ಆವರಣದಲ್ಲಿ ತಾಲೀಮು ನಡೆಸಲಾಗಿದೆ. ಮುಂದಿನ ತಾಲೀಮು ಕೂಡ ಇಲ್ಲೇ ನಡೆಯುತ್ತದೆ. –ಡಾ.ವಿ. ಕರಿಕಾಳನ್, ಡಿಸಿಎಫ್

"ಗಜಪಡೆ, ಅಶ್ವಪಡೆಗೆ ಎರಡನೇ ಹಂತದ ಸಿಡಿಮದ್ದು ಸಿಡಿಸುವ ತಾಲೀಮು ಯಶಸ್ವಿಯಾಗಿ ನಡೆದಿದೆ. ಪ್ರತಿಬಾರಿ ಅರಮನೆ ಬಳಿ ಮಾಡುತ್ತಿದ್ದೆವು. ಅರಮನೆಯ ಕೆಲ ನಿರ್ಮಾಣಗಳಿಗೆ ತೊಂದರೆಯಾಗಲಿದೆ ಎನ್ನುವ ಕಾರಣಕ್ಕೆ ವಸ್ತು ಪ್ರದರ್ಶನದ ಆವರಣದಲ್ಲಿ ಮಾಡಿದ್ದೇವೆ. ಈ ಬಾರಿ ಶಬ್ಧಕ್ಕೆ ಯಾವ ಆನೆಯೂ ಕದಲಲಿಲ್ಲ. ತಾಲೀಮಿನಲ್ಲಿ 41 ಕುದುರೆಗಳು, 12 ಆನೆಗಳು ಭಾಗಿಯಾಗಿದ್ದವು. – ಶಿವರಾಜ್, ಸಿಎಆರ್, ಡಿಸಿಪಿ

ಮೈಸೂರು, ಸೆ.16(ಎಂಟಿವೈ)– ಜಂಬೂಸವಾರಿಯಲ್ಲಿ ಸಾಗುವ ಗಜಪಡೆ ಹಾಗೂ ಅಶ್ವಪಡೆಗೆ ಶುಕ್ರವಾರ ದಸರಾ ವಸ್ತು ಪ್ರದರ್ಶನದ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಎರಡನೇ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು. ಅಂತಿಮ ಸುತ್ತಿನ ಸಿಡಿಮದ್ದು ಪ್ರಯೋಗದ ವೇಳೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ 12 ಆನೆಗಳು, ಎಂತಹ ಸದ್ದಿಗೂ ನಾವು ಅಂಜಲ್ಲ ಎಂಬ ವಿಶ್ವಾಸ ಪ್ರದರ್ಶಿಸಿದವು.

ಅರಮನೆಯ ನಿರ್ಮಾಣಗಳ ಸುರಕ್ಷತೆ ದೃಷ್ಟಿಯಿಂದ ರಾಜವಂಶಸ್ಥರ ಸಲಹೆ ಮೇರೆಗೆ ಇಂದು ಎರಡನೇ ಹಂತದ ಸಿಡಿಮದ್ದು ತಾಲೀಮನ್ನು ವರಹಾ ದ್ವಾರದ ಬಳಿಯ ಕೋಟೆ ಮಾರಮ್ಮ ದೇವಾಲಯದ ಮೈದಾನದಿಂದ ದಸರಾ ವಸ್ತು ಪ್ರದರ್ಶನದ ಪಾರ್ಕಿಂಗ್ ಸ್ಥಳಕ್ಕೆ ಸ್ಥಳಾಂತರಿಸಲಾಗಿತ್ತು. ಮಧ್ಯಾಹ್ನ 11.30ಕ್ಕೆ 12 ಆನೆಗಳನ್ನು ಜಯಮಾರ್ತಾಂಡ ದ್ವಾರದಿಂದ ಬಿ.ಎನ್ ರಸ್ತೆಗೆ ಕರೆತಂದು ದಸರಾ ವಸ್ತುಪ್ರದರ್ಶನದ ಮೂಲಕ ಪಾರ್ಕಿಂಗ್ ಸ್ಥಳಕ್ಕೆ ಕರೆತರಲಾಯಿತು. ಬಳಿಕ ರಾಹುಕಾಲ ಕಳೆದ ನಂತರ ಫಿರಂಗಿ ದಳದ ಸಿಬ್ಬಂದಿ 7 ಫಿರಂಗಿ ಬಳಸಿ ತಲಾ ▶ 8ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಟೀಚರ್ : "ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?"
ಗುಂಡ : "ಬಗ್ಗುತ್ತೇ ಟೀಚರ್"
ಟೀಚರ್ : "ಹೇಗೆ?"
ಗುಂಡ : "ಸಣ್ಣ ವಯಸ್ಸಿನಲ್ಲಿ ಬಗ್ಗದ ನಮ್ಮ ಅಜ್ಜ ಈಗ ಬಗ್ಗಿದ್ದಾರೆ ಟೀಚರ್!"

ಮೈಸೂರು ಮಿತ್ರ

ಶನಿವಾರ, 17 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಆತ್ಮಸಾಕ್ಷಿಯೆಂದರೆ ನಿಮ್ಮನ್ನು ಯಾರೋ ಗಮನಿಸುತ್ತಿರುವರೆಂದು ಎಚ್ಚರಿಸುವ ಒಳದನಿ –ಮೆನ್‌ಕೆನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಳ ನೋಡಿ ಬಾವಿಗೆ ಇಳಿಯಬೇಕು. ಕುಲ ನೋಡಿ ಹೆಣ್ಣು ಕೊಡಬೇಕು

ನಿಮ್ಮ ಪತ್ರಗಳು

ಸೀಟ್ ಬೆಲ್ಟ್‌ನಿಂದ ಅಪಘಾತ ತಡೆಯಬಹುದೇ?

ಮಾನ್ಯರೆ,

ಇತ್ತೀಚೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಅವಘಡಗಳು ಹೆಚ್ಚಾಗುತ್ತಿವೆ. ರಸ್ತೆಗಳಲ್ಲಿ



ಸಂಭವಿಸುವ ಈ ರೀತಿಯ ದುರಂತಗಳು ಹೆಚ್ಚೆಂದರೆ ಸಂಬಂಧಪಟ್ಟ ಸಚಿವರ ವಿಷಾದ ಸಂತಾಪಗಳಲ್ಲಿ ಮುಗಿದುಹೋಗುತ್ತದೆ. ಸಣ್ಣಪುಟ್ಟ ಅವಘಡಗಳನ್ನು ಗಮನಿಸುವವರೇ ಇಲ್ಲ ಎನ್ನುವ ಸ್ಥಿತಿ ನಮ್ಮಲ್ಲಿದೆ. ಆದರೆ ರಸ್ತೆಗಳಲ್ಲಿ ಸಂಭವಿಸುವ ಈ ರೀತಿಯ ಸಾವು ನೋವುಗಳಲ್ಲಿ ತನ್ನ ಪಾತ್ರವೂ ಇದೆ ಎನ್ನುವುದನ್ನು ಸರ್ಕಾರ ಆತ್ಮಪೂರ್ವಕವಾಗಿ ಎಂದು ಒಪ್ಪಿಕೊಂಡಿಲ್ಲ!

ಇತ್ತೀಚೆಗೆ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಖ್ಯಾತ ಉದ್ಯಮಿ ಸೈರಸ್ ಮಿಸ್ತ್ರಿ ಅವರು ಮೃತಪಟ್ಟರು. ಈ ದುರಂತ ಹಲವು ದಿನಗಳ ಕಾಲ ಸುದ್ದಿಯೂ ಆಯಿತು. ಈ ಘಟನೆ ಸಂಭವಿಸಿದ ಹಿನ್ನೆಲೆಯಲ್ಲಿ ಕಾರಿನಲ್ಲಿರುವ ಹಿಂಬದಿಯ ಸವಾರರಿಗೂ ಸೀಟ್ ಬೆಲ್ಟ್ ಕಡ್ಡಾಯ ಮಾಡುವ ಬಗ್ಗೆ ಸರ್ಕಾರ ಹೇಳಿಕೆಯನ್ನು ಸಹ ನೀಡಿತು. ಆದರೆ ಸೀಟ್ ಬೆಲ್ಟ್ ಕಡ್ಡಾಯ ಮಾಡುವ ಮೂಲಕ ಅಪಘಾತಗಳನ್ನು ತಡೆಯಬಹುದು ಎನ್ನುವ ಹೇಳಿಕೆಯೇ ಹಾಸ್ಯಾಸ್ಪದ! ಏಕೆಂದರೆ ರಸ್ತೆ ಸುರಕ್ಷತೆ ಎನ್ನುವುದು ಕೇವಲ ಸೀಟ್ ಬೆಲ್ಟ್‌ಗಷ್ಟೇ ಸೀಮಿತವಲ್ಲ. ರಸ್ತೆಗಳ ನಿರ್ಮಾಣ, ಅದರ ವಿನ್ಯಾಸ ಹಾಗೂ ಅಪಘಾತದ ಬಳಿಕದ ತುರ್ತು ಆರೈಕೆಗಳೊಂದಿಗೆ ಸಂಬಂಧ ಹೊಂದಿರುತ್ತದೆ.

ಹೀಗಾಗಿ ಸರ್ಕಾರ ರಸ್ತೆಗಳ ಕಳಪೆ ಗುಣಮಟ್ಟ ಮತ್ತು ಕೆಟ್ಟ ವಿನ್ಯಾಸ, ಅಪಘಾತಗಳನ್ನು ತಡೆಯಲು ರಸ್ತೆ ತಿರುವುಗಳನ್ನು ಅಥವಾ ರಸ್ತೆ ವಿಭಜಕಗಳನ್ನು ನಿರ್ಮಿಸಲು ಯಾವ ಯಾವ ಪರ್ಯಾಯ ತಂತ್ರಗಳನ್ನು, ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕು? ಚಾಲನಾ ಪರವಾನಿಗೆ ಪತ್ರವನ್ನು ನೀಡುವ ಸಂದರ್ಭದಲ್ಲಿ ಏನೆಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕು? ಮದ್ಯ ಸೇವಿಸಿ ವಾಹನ ಚಲಾಯಿಸುವವರ ವಿರುದ್ಧ ಏನೆಲ್ಲಾ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು? ಇವೇ ಮೊದಲಾದ ದಿಟ್ಟ ಕ್ರಮಗಳನ್ನು ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರ ತುರ್ತಾಗಿ ಜಾರಿ ಮಾಡುವುದು ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಗ್ರಾಹಕ ವಸ್ತುಗಳ ವಿತರಕರ ಶೋಷಣೆ

ಮಾನ್ಯರೇ

ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ಸರಿ ಸುಮಾರು 700 ರಿಂದ 800 ಅಗತ್ಯ ವಸ್ತುಗಳ ವಿತರಿಕರಿದ್ದು, ಹಲವಾರು ವರ್ಷಗಳಿಂದ ಇವರು ಬಹುರಾಷ್ಟ್ರೀಯ ಹಾಗೂ ಸ್ವದೇಶಿ ಕಂಪನಿಗಳಿಂದ ಉತ್ಪಾದಿಸಲ್ಪಟ್ಟ ಪದಾರ್ಥಗಳ ಅಧಿಕೃತ ವಿತರಕರಾಗಿ ನೇಮಿಸಲ್ಪಟ್ಟಿದ್ದಾರೆ. ಗ್ರಾಹಕರ ದೈನಂದಿನ ಬದುಕಿನಲ್ಲಿ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಹಾಗೂ ಇನ್ನಿತರ ಅವಶ್ಯಕ ಗ್ರಾಹಕ ವಸ್ತುಗಳನ್ನು ನೇರವಾಗಿ ಖರೀದಿಸಿ ಎಲ್ಲಾ ಚಿಲ್ಲರೆ ಅಂಗಡಿ ಹಾಗೂ ಸೂಪರ್ ಮಾರ್ಕೆಟ್, ಔಷಧಿ ಅಂಗಡಿಗಳಿಗೆ ಸಂಬಂಧಪಟ್ಟ ಕಂಪನಿಗಳಿಂದ ನಿಗದಿಪಡಿಸಿದ ಕಮೀಷನ್ ಆಧಾರದ ಮೇಲೆ ನಿರಂತರವಾಗಿ ವಿತರಿಸುತ್ತಾ ಬರುತ್ತಿದ್ದು ಸುತ್ತಮುತ್ತಲು ಸಾವಿರಾರು ಕುಟುಂಬಗಳಿಗೆ ಉದ್ಯೋಗ ಒದಗಿಸುವ ಮೂಲಕ ಅವರುಗಳ ಜೀವನದ ಬದುಕಿಗೆ ಆಸರೆಯಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಎಷ್ಟೋ ವಿದ್ಯಾವಂತ ಯುವಕರು ಸರ್ಕಾರಿ ನೌಕರಿಯಿಂದ ವಂಚಿತರಾಗಿ ತಮ್ಮ ಬದುಕು ಕಟ್ಟಿಕೊಳ್ಳಲು ತಮ್ಮ ಕುಟುಂಬದ ಆಸ್ತಿ ಪಾಸ್ತಿಗಳನ್ನು ಬ್ಯಾಂಕ್ ಹಾಗೂ ಇನ್ನಿತರ ಹಣಕಾಸಿನ ಸಂಸ್ಥೆಗಳಲ್ಲಿ ಆಧಾರವಾಗಿರಿಸಿ ಸಾಲವನ್ನು ಪಡೆದು ಈ ವಿತರಕರ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಈ ಕಂಪನಿಗಳು ವಿತರಕರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾ ತಮ್ಮ ಪದಾರ್ಥಗಳಿಗೆ ಬಂಡವಾಳ ಹೂಡಿಕೆ ಮಾಡಲು ಪ್ರೇರೇಪಿಸಿ, ಮುಂಗಡವಾಗಿ ಹಣ ಪಡೆದು ತಮ್ಮ ಪದಾರ್ಥಗಳಿಗೆ ಮಾರುಕಟ್ಟೆ ಕುದುರಿಸಿಕೊಳ್ಳಲು ಇನ್ನಿಲ್ಲದ ಒತ್ತಡ, ಮಾರುಕಟ್ಟೆಗಳಲ್ಲಿ ಸಾಲದ ರೂಪದ ವ್ಯವಹಾರ ಮಾಡಿಸಿ ನಷ್ಟ ಅನುಭವಿಸುವ, ನೀಡುವ ಕನಿಷ್ಟ ಕಮೀಷನ್‌ನಲ್ಲೂ ಆಗಿಂದಾಗ್ಗೆ ಕಡಿತ, ಯಾವುದೇ ಸಕಾರಣವಿಲ್ಲದೆ ಆಗಿಂದಾಗ್ಗೆ ಅಧಿಕೃತ ವಿತರಕರ ಬದಲಾವಣೆ, ಕಂಪನಿಗಳಿಂದ ಬಾಕಿ ಬರಬೇಕಾದ ಹಣಕ್ಕೆ ಯಾವುದೇ ಕಾಲಮಿತಿ ನಿಗದಿಪಡಿಸದೆ ಇರುವುದು ಹೀಗೆ ನಾನಾ ಬಗೆಯ ಕಿರುಕಳ, ದಬ್ಬಾಳಿಕೆಗಳಿಂದ ಮುಂದುವರೆಯಲು ಸಾಧ್ಯವಾಗದೆ ವ್ಯವಹಾರದಲ್ಲಿ ನಷ್ಟವನ್ನು ಅನುಭವಿಸಿ ಕೊನೆಯಲ್ಲಿ ಎಲ್ಲವನ್ನೂ ಕಳೆದುಕೊಂಡು ಸಾಲಗಾರನಾಗಿ ಹೊರಬರಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಇತೀಚಿನ ದಿನಗಳಲ್ಲಿ ಇವರ ಪ್ರಮಾಣ ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿದೆ. ತನ್ನ ಕುಟುಂಬದ ಜೊತೆಗೆ ತನ್ನನ್ನು ನಂಬಿ ಜೀವನ ಸಾಗಿಸುತ್ತಿದ್ದ ಹಲವಾರು ಉದ್ಯೋಗಸ್ಥ ಕುಟುಂಬದವರ ಪರಿಸ್ಥಿತಿ ಸಹ ಬೀದಿಗೆ ಬರುವಂತಾಗಿದೆ.

ಹೀಗೆ ಒಬ್ಬ ಅಗತ್ಯ ವಸ್ತುಗಳ ವಿತರಕರನಾಗಿ ಗ್ರಾಹಕರ ದೈನಂದಿನ ಅಗತ್ಯ ವಸ್ತುಗಳು ಮಾರುಕಟ್ಟೆಗಳಲ್ಲಿ ಕಾಲಕಾಲಕ್ಕೆ ಪೂರೈಕೆ ಮಾಡುವ ಜವಾಬ್ದಾರಿ ನಿರ್ವಹಿಸುತ್ತಾ ಜೊತೆಗೆ ಸರಕಾರಕ್ಕೆ ಸಲ್ಲಬೇಕಾದ ತೆರಿಗೆ (GST), ವ್ಯಾಪಾರ ರಹದಾರಿ ಶುಲ್ಕ, ಆಹಾರ ಪದಾರ್ಥ ವ್ಯಾಪಾರ ರಹದಾರಿ ಶುಲ್ಕ ಹಾಗೂ ಆದಾಯ ತೆರಿಗೆ ಮುಂತಾದವುಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಪಾವತಿ ಮಾಡುತ್ತಿದ್ದರೂ ಸಹ ಈ ವೃತ್ತಿ ಜೀವನಕ್ಕೆ ಇದುವರೆವಿಗೂ ಯಾವುದೇ ಭದ್ರತೆ ಇಲ್ಲ. ಸಮಾಜದಲ್ಲಿ ತನ್ನ ಸ್ವಂತ ಕಾಲ ಮೇಲೆ ನಿಂತು ಒಂದು ಗೌರವಯುತವಾದ ಬದುಕನ್ನು ಕಟ್ಟಿಕೊಳ್ಳಲು ಮಹತ್ವಾಕಾಂಕ್ಷೆ ಹೊಂದಿರುವ ಯುವಕರ ಬದುಕಿಗೆ ಒಂದು ಹೊಸ ದಾರಿ ದೀಪವನ್ನು ಕಂಡುಕೊಳ್ಳಲು ಕಂಪನಿಯವರ ಸ್ವೇಚ್ಛಾಚಾರ ನಿರ್ಧಾರ ಮುಂತಾದ ತೊಂದರೆಗಳಿಂದ ಮುಕ್ತಿ ದೊರೆಯುವಂತಾಗಲು ಸಂಬಂಧಪಟ್ಟ ಇಲಾಖೆಯವರು ಆದಷ್ಟು ಬೇಗ ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವರೆಂದು ನಂಬೋಣವೆ.


–ಜಿ.ಎಸ್. ಗಣೇಶ್ ರಾವ್, ಮೈಸೂರು ಜಿಲ್ಲಾ ವಿತರಕರ (ಗ್ರಾಹಕ ವಸ್ತುಗಳ) ಸಂಘ, ಮೈಸೂರು.

ದಸರಾದಲ್ಲಿ ಹೆಚ್ಚಿನ ಭದ್ರತೆ ಒದಗಿಸಲಿ

ಮಾನ್ಯರೇ,

ಇತ್ತೀಚಿನ ದಿನಗಳಲ್ಲಿ ಕಳ್ಳತನ ಹೆಚ್ಚಾಗಿದ್ದು, ಅದರಲ್ಲೂ ಬೆಂಗಳೂರು ಮತ್ತು ಮೈಸೂರಿನಲ್ಲಿ ಮಹಿಳೆಯರ ಮಾಂಗಲ್ಯ ಸರ ಸೇರಿದಂತೆ ಇನ್ನಿತರ ಚಿನ್ನಾಭರಣಗಳನ್ನು ಹೆಚ್ಚಾಗಿ ಖದೀಮರು ಕಳ್ಳತನ ಮಾಡುತ್ತಿದ್ದಾರೆ. ಎರಡು ವರ್ಷ ಕೋವಿಡ್‌ನಿಂದ ಸ್ಥಗಿತವಾಗಿದ್ದ ದಸರಾ ಕಾರ್ಯಕ್ರಮಗಳು ಆಯೋಜನೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ದೇಶ – ವಿದೇಶಗಳಿಂದ ದಸರಾ ಅಭಿಮಾನಿಗಳು ಆಗಮಿಸುವ ವಾತಾವರಣವಿದೆ. ಆದ್ದರಿಂದ ಪೊಲೀಸ್ ಇಲಾಖೆ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗದಂತೆ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡು ಸೂಕ್ತ ಭದ್ರತೆಯನ್ನು ಒದಗಿಸಬೇಕೆಂದು ಈ ಮೂಲಕ ಮನವಿ.

–ಸಮಂತ ಸುಷ್ಮಾ, ಮಾನಸಗಂಗೋತ್ರಿ, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಅದ್ಧೂರಿ ಮೈಸೂರು ದಸರಾಗೆ ಸ್ವಾಗತ

ಈ ತಿಂಗಳ 26ರಿಂದ ಅಕ್ಟೋಬರ್ 5 ರವರೆಗೆ ಪ್ರಸಕ್ತ ಸಾಲಿನ ವಿಶ್ವವಿಖ್ಯಾತ ನಾಡಹಬ್ಬ ದಸರಾವನ್ನು ಅದ್ಧೂರಿಯಾಗಿ ಆಚರಿಸಲಾಗುವುದೆಂದು ರಾಜ್ಯ ಸರ್ಕಾರ ಘೋಷಿಸಿದೆ. ದೇಶದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಬಾರಿ ದಸರಾ ಉದ್ಘಾಟಿಸಲಿದ್ದಾರೆ ಎಂದು ಈಗಾಗಲೇ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿ, ದಸರಾ ತಯಾರಿ ತಮ್ಮ ಮೇಲುಸ್ತುವಾರಿಯಲ್ಲಿಯೇ ನಡೆಯುವುದಾಗಿಯೂ ಹೇಳಿರುವುದರಿಂದ ಸಹಜವಾಗಿಯೇ ಜನರಲ್ಲಿ ಈ ಸಲದ ದಸರಾ ಉತ್ಸವ ಭಾರೀ ನಿರೀಕ್ಷೆ ಹುಟ್ಟಿಸಿದೆ. ಕೋವಿಡ್–19 ಸಾಂಕ್ರಾಮಿಕ ರೋಗದ ಹಾವಳಿಯಿಂದ ಕಳೆದ ಎರಡು ವರ್ಷ ಕೇವಲ ಸಾಂಪ್ರದಾಯಿಕ ದಸರಾ ಆಚರಿಸಿದ್ದ ನಾವು ಅಂತೂ ಈ ಬಾರಿ ವೈಭವಯುತ ದಸರಾವನ್ನು ನೋಡಬಹುದಾಗಿದೆ.



ಮೈಸೂರು ಸಂಸ್ಥಾನದ ಕೊನೆಯ ಅರಸರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ರವರು ನಯನ ಮನೋಹರ ದಂತಗಳನ್ನು ಹೊಂದಿದ್ದ ಅಂಬಾರಿ ಆನೆಯ ಮೇಲೆ ಇರಿಸಿದಂತಹ ಚಿನ್ನದ ಅಂಬಾರಿಯಲ್ಲಿ ಕುಳಿತು ದಸರಾ ಮೆರವಣಿಗೆಯಲ್ಲಿ ಸಾಗುತ್ತಿದ್ದಕ್ಕೆ ನಾನೂ ಸಾಕ್ಷಿಯಾಗಿದ್ದೇನೆ. ಮಹಾರಾಜರು ಆಸೀನರಾಗಿರುತ್ತಿದ್ದ ಈ ಅಂಬಾರಿ ಮೆರವಣಿಗೆಯನ್ನು ಹಿಂಬಾಲಿಸಿ ಆಸ್ಥಾನಿಕರು, ಒಡ್ಡೋಲಗದವರು ಹಾಗೂ ಇತರರು ದರ್ಬಾರ್ ವೇಷದಲ್ಲಿ ಸಾಗುತ್ತಿದ್ದರು. ನಾನಾಗ ಕೊಡಗಿನ ಶಾಲೆಯೊಂದರ ವಿದ್ಯಾರ್ಥಿಯಾಗಿದ್ದೆ ಅಂದಿನ ಅದ್ಧೂರಿ ಚಿತ್ರಣ ಸ್ವಲ್ಪಮಟ್ಟಿಗೆ ಇನ್ನೂ ನನ್ನ ಮನಸ್ಸಿನಲ್ಲಿ ಉಳಿದಿದೆ. ಆ ಒಂದು ದೇವರೇ ನೋಡಬೇಕಾದ ವೈಭೋಗದ ದೃಶ್ಯವನ್ನು ನೋಡುವುದೇ ಮಾನವರ ಭಾಗ್ಯ ಎನ್ನಬಹುದು.

> “1799ರಲ್ಲಿ ಟಿಪ್ಪು ಪತನದ ಬಳಿಕ, ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಅನಾವರಣಗೊಂಡ ಧಾರ್ಮಿಕ ಶ್ರದ್ಧೆ ಮತ್ತು ಸಾಂಸ್ಕೃತಿಕ ಪುನರುತ್ಥಾನದಿಂದ ಕೂಡಿದಂತಹ ದಸರಾ ಆಚರಣೆ ಆಗಬೇಕು. ಖಂಡಿತವಾಗಿ, ಜಂಬೂಸವಾರಿ ಮೆರವಣಿಗೆಯಲ್ಲಿ, ಆನೆಯ ಮೇಲಿನ ಚಿನ್ನದ ಅಂಬಾರಿಯಲ್ಲಿ ಆಸೀನರಾಗಿ ಮಹಾರಾಜರು ಸಾಗುವುದು ವಿಸ್ಮಯಕಾರಿಯಾದರೂ, ಇದನ್ನು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯಲ್ಲಿ ಆಚರಣೆಗೆ ತರಲಾಗದು. ಆದರೆ ಈ ಶೂನ್ಯವನ್ನು ನೀಗಲು ನಮಗೆ ಮೈಸೂರಿನ ರಾಜವಂಶದ ಅಧಿದೇವತೆ ನಮ್ಮ ಚಾಮುಂಡೇಶ್ವರಿ ದೇವಿ ಇದ್ದಾಳೆ. ತಮ್ಮ ರಾಜರುಗಳಲ್ಲೇ ದೈವೀಕತೆಯನ್ನು ಕಂಡುಕೊಂಡ ಜನರು ಈಗ ಬದಲಾದ ಪ್ರಜಾಪ್ರಭುತ್ವದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಒಪ್ಪಿಕೊಳ್ಳಲೇಬೇಕು ಎಂದು ನಾನು ಅಂದುಕೊಳ್ಳುತ್ತೇನೆ. ಏಕಾಗಬಾರದು? ಚಾಮುಂಡೇಶ್ವರಿ ದೇವಿಯ ವಿಗ್ರಹವೂ ಚಿನ್ನದ ಅಂಬಾರಿಯೊಳಗೆ ಪ್ರತಿಷ್ಠಾಪಿಸಲ್ಪಟ್ಟಿರುತ್ತದೆಯಲ್ಲ.

ನಮ್ಮ ಹಿರಿಯ ಅತಿಥೇಯ ನನ್ನನ್ನು ಕುರಿತು "ನೋಡು, ಚಿನ್ನದ ಅಂಬಾರಿಯ ಮೇಲೆ ಕುಳಿತಿರುವ ಅವರೇ ಮಹಾರಾಜರು, ನಮಸ್ಕಾರ ಮಾಡು" ಎಂದು ನನಗೆ ಹೇಳಿದ್ದು, ಇನ್ನು ಜ್ಞಾಪಕವಿದೆ. ಅಂದಿನ ದಿನಗಳಲ್ಲಿ ಜಂಬೂಸವಾರಿಯನ್ನು ವೀಕ್ಷಿಸಲು ಬರುತ್ತಿದ್ದ ಪ್ರೇಕ್ಷಕರಿಗೆ ಮಹಾರಾಜರ ಬಗ್ಗೆ ಅಪಾರ ಗೌರವವಿತ್ತು.

ನನಗಿರುವ ಮಾಹಿತಿಯ ಪ್ರಕಾರ, 1969 ರಲ್ಲಿ ಜರುಗಿದ ಜಂಬೂಸವಾರಿಯಲ್ಲಿ ಆನೆಯ ಮೇಲಿನ ಚಿನ್ನದ ಅಂಬಾರಿಯಲ್ಲಿ ಕುಳಿತು ದಸರಾ ಮೆರವಣಿಗೆಯಲ್ಲಿ ಸಾಗಿದ ಕಟ್ಟ ಕಡೆಯ ಮಹಾರಾಜರೆಂದರೆ ಶ್ರೀ ಜಯಚಾಮರಾಜ ಒಡೆಯರ್. ಮೈಸೂರಿನಲ್ಲಿ ಆಚರಿಸಲಾದ ವೈಭವಯುತ ಕಟ್ಟಕಡೆಯ ದಸರಾ ಇದೇ ಆಗಿರಬಹುದು ಎಂಬುದು ನನ್ನ ಅನಿಸಿಕೆ.

ಅದು ಹಾಗಿರಲಿ. ಸರ್ಕಾರದಿಂದ ಬಿಡುಗಡೆ ಆದಂತಹ ಭಾರೀ ಹಣವನ್ನು ಖರ್ಚು ಮಾಡಿದರೆ ವೈಭವಯುತ ದಸರಾ ಆಚರಿಸಿದಂತಾಗುತ್ತದೆ ಎಂದು ನೀವು ಯೋಚಿಸಿದರೆ, ಪೆದ್ದರಾಗುತ್ತೀರಿ. ಸಾಂಪ್ರದಾಯಿಕ ಹಾಗೂ ವಿಧಿವತ್ತಾಗಿ ಆಚರಿಸುವ ಹಬ್ಬಗಳಲ್ಲಿ 'ವೈಭವ' ಎಂಬುದರ ಅರ್ಥವೇನು?

1799ರಲ್ಲಿ ಟಿಪ್ಪು ಪತನದ ಬಳಿಕ ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಅನಾವರಣಗೊಂಡ ಧಾರ್ಮಿಕ ಶ್ರದ್ಧೆ ಮತ್ತು ಸಾಂಸ್ಕೃತಿಕ ಪುನರುತ್ಥಾನದಿಂದ ಕೂಡಿದಂತಹ ದಸರಾ ಆಚರಣೆ ಆಗಬೇಕು. ಖಂಡಿತವಾಗಿ, ಜಂಬೂಸವಾರಿ ಮೆರವಣಿಗೆಯಲ್ಲಿ, ಆನೆಯ ಮೇಲಿನ ಚಿನ್ನದ ಅಂಬಾರಿಯಲ್ಲಿ ಆಸೀನರಾಗಿ ಮಹಾರಾಜರು ಸಾಗುವುದು ವಿಸ್ಮಯಕಾರಿಯಾದರೂ, ಇದನ್ನು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯಲ್ಲಿ ಆಚರಣೆಗೆ ತರಲಾಗದು. ಆದರೆ ಈ ಶೂನ್ಯವನ್ನು ನೀಗಲು ನಮಗೆ ಮೈಸೂರಿನ ರಾಜವಂಶದ ಅಧಿದೇವತೆ ನಮ್ಮ ಚಾಮುಂಡೇಶ್ವರಿ ದೇವಿ ಇದ್ದಾಳೆ.

ತಮ್ಮ ರಾಜರುಗಳಲ್ಲೇ ದೈವೀಕತೆಯನ್ನು ಕಂಡುಕೊಂಡ ಜನರು ಈಗ ಬದಲಾದ ಪ್ರಜಾಪ್ರಭುತ್ವದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಒಪ್ಪಿಕೊಳ್ಳಲೇಬೇಕು ಎಂದು ನಾನು ಅಂದುಕೊಳ್ಳುತ್ತೇನೆ. ಏಕಾಗಬಾರದು? ಚಾಮುಂಡೇಶ್ವರಿ ದೇವಿಯ ವಿಗ್ರಹವೂ ಚಿನ್ನದ ಅಂಬಾರಿಯೊಳಗೆ ಪ್ರತಿಷ್ಠಾಪಿಸಲ್ಪಟ್ಟಿರುತ್ತದೆಯಲ್ಲ.

ಅದು ಆಗಿರಲಿ. ಈ ವರ್ಷದ ದಸರಾವನ್ನು ಅದ್ಧೂರಿಯಾಗಿ ಮಾಡುವ ಆಲೋಚನೆಗೆ ಬರುತ್ತೇನೆ. ಪ್ರಶ್ನೆ ಎಂದರೆ, ಈ ವರ್ಷ ಮಾತ್ರ ಏಕೆ? ಪ್ರತಿ ವರ್ಷವೂ ವೈಭವಯುತವಾಗಿ ದಸರಾವನ್ನು ಏಕೆ ಆಚರಿಸಬಾರದು? ಜಂಬೂಸವಾರಿಯಲ್ಲಿ ಮಹಾರಾಜರು ಇರುವ ದಸರಾವನ್ನು ಆಚರಿಸದೇ ಇರುವಾಗ ಹಾಗೂ ಸಾರ್ವಜನಿಕರಿಗೆ ಮುಕ್ತವಾಗಿರುವಾಗ, ಈ ಆಚರಣೆಯು ಸದಾ ವೈಭವಯುತವಾಗಿರಲೇಬೇಕು. ಇದನ್ನು ಕಾಟಾಚಾರಕ್ಕಾಗಿ ಅಥವಾ ಅರೆ ಮನಸ್ಸಿನಿಂದ ಆಚರಿಸಬಾರದು. ಇಲ್ಲ ಅಂದ್ರೆ, ಕಳೆದ ಎರಡು ವರ್ಷ ಕೋವಿಡ್ ಸೋಂಕಿನ ಉಪಟಳದಿಂದ ಸಾಂಪ್ರದಾಯಿಕವಾಗಿ ಆಚರಿಸಿದಂತೆ ಆಚರಿಸಬಹುದು. ನಿಮಗೆ ಮಾಡಬೇಕೆನಿಸಿದರೆ, ಸರಿಯಾಗಿ ಮಾಡಿ, ಅದೇ ನಿಮ್ಮ ಧ್ಯೇಯವಾಗಿರಬೇಕು.

ನನಗೆ ಜ್ಞಾಪಕವಿರುವಂತೆ 1985ರಲ್ಲಿ ನಮ್ಮ ರಾಜ್ಯದಲ್ಲಿ ಬರ ಪರಿಸ್ಥಿತಿ ಇತ್ತು. ಆಗ ಮೈಸೂರಿನಲ್ಲಿ 'ವಿಶ್ವ ಕನ್ನಡ ಸಮ್ಮೇಳನ' ನಡೆಯಿತು. ಆಗ ರಾಜ್ಯದಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರ ಆಡಳಿತದಲ್ಲಿ ಇತ್ತು. ಈ ವೇಳೆ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್, ಜನರು ಬರದಿಂದ ಹಸಿದ ಹೊಟ್ಟೆಯಲ್ಲಿರುವಾಗ ಈ 'ವೈಭವಯುತ' ವಿಶ್ವ ಕನ್ನಡ ಸಮ್ಮೇಳನ ಬೇಕಿತ್ತಾ ಎಂದು ಪ್ರತಿಭಟಿಸಿತ್ತು.

ಆಗ ಕನ್ನಡದ ಹಿರಿಯ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಶಿವರಾಮ ಕಾರಂತರು ತಮ್ಮ ಬಹಿರಂಗ ಭಾಷಣದಲ್ಲಿ 'ಬರ ಇದೆಯೆಂದು ಜನರು ಮಸಾಲೆ ದೋಸೆ ತಿನ್ನುವುದನ್ನು ಬಿಟ್ಟಿದ್ದಾರೆಯೇ' ಎಂದು ಹೇಳುವ ಮೂಲಕ ಪ್ರತಿಭಟನಾಕಾರರ ಬಾಯಿ ಮುಚ್ಚಿಸಿದ್ದರು. ಅಂದ ಹಾಗೆ ವಿಶ್ವ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲೇ ನಮ್ಮ ನಗರದ "ಕರ್ನಾಟಕ ಕಲಾ ಮಂದಿರ"ವೂ ಉದ್ಘಾಟನೆಯಾಯಿತು. ಏನೇ ಇರಲಿ, ಇದೇ ರೀತಿ ಮೈಸೂರು ದಸರಾ ಆಚರಿಸುವಾಗ ವೈಭವಯುತವಾಗಿರಲಿ. ಈ ವಿಷಯದಲ್ಲಿ ಯಾವುದೇ ರಾಜೀ ಆಗಬಾರದು.

ಇಷ್ಟನ್ನು ಹೇಳಿ, ದಸರಾವನ್ನು ವೈಭವಯುತವನ್ನಾಗಿ ಮಾಡುವ ಬಗ್ಗೆ ಯೋಚಿಸುತ್ತೇನೆ. ಮೈಸೂರಿನಲ್ಲಿ ಇದೊಂದೇ ಆಚರಣೆಯಲ್ಲಿ ಮಾತ್ರ, ನವರಾತ್ರಿಯ ಧಾರ್ಮಿಕ ಶ್ರದ್ಧಾಭಕ್ತಿಗಳ ಜೊತೆಗೆ ಇನ್ನಿತರ ಸಾಂಸ್ಕೃತಿಕ, ಆರ್ಥಿಕ ಹಾಗೂ ಮನೋರಂಜನಾ ಚಟುವಟಿಕೆಗಳೂ ನಡೆಯುತ್ತವೆ.

ಮೈಸೂರಿನ ಅರಮನೆ ಆವರಣದಲ್ಲಿ ದೇಶದ ಪ್ರಖ್ಯಾತ ಕಲಾವಿದರಿಂದ ಸಂಗೀತ ಕಾರ್ಯಕ್ರಮವಿರುತ್ತದೆ. ಇದರೊಂದಿಗೆ ನೃತ್ಯ, ನಾಟಕ ಮುಂತಾದ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಗರದ ವಿವಿಧ ವೇದಿಕೆಗಳಲ್ಲಿ ಏರ್ಪಡಿಸಲಾಗುತ್ತದೆ. ದಸರಾ ಚಲನ ಚಿತ್ರೋತ್ಸವದಲ್ಲಿ ದೇಶ–ವಿದೇಶದ ಹಳೆಯ ಚಲನಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಹಾಗೂ ರಂಗಾಯಣದಲ್ಲಿ ಜಾನಪದ ನೃತ್ಯ ಮತ್ತು ನಾಟಕಗಳನ್ನು ಒಳಗೊಂಡ ದಸರಾ ನವರಾತ್ರಿ ರಂಗ ಉತ್ಸವ ಏರ್ಪಡಿಸಲಾಗುತ್ತದೆ.

ಇವೆಲ್ಲವೂ ಮನೋರಂಜನೆಯ ವಿಚಾರವಾದರೆ, ಜನರಿಗೆ ವಾಣಿಜ್ಯ ಚಟುವಟಿಕೆಗಳಿಗೂ ವಿಫುಲ ಅವಕಾಶವಿರುತ್ತದೆ. ದಸರಾ ವಸ್ತು ಪ್ರದರ್ಶನವು ದಸರಾ ಉತ್ಸವದ ಪ್ರಮುಖ ಅಂಗವಾಗಿದೆ. ಇದು ಮನರಂಜನೆ ಹಾಗೂ ಆರ್ಥಿಕ ಚಟುವಟಿಕೆ ತಾಣವಾಗಿದೆ. ಮತ್ತೊಂದು ಪ್ರಮುಖ ಆಕರ್ಷಣೆ ಎಂದರೆ 'ಫಲಪುಷ್ಪ ಪ್ರದರ್ಶನ'. ಅದೆಷ್ಟು ಆಕರ್ಷಕ ಹಾಗೂ ವೈಭವಯುತವಾಗಿರಬಹುದು ಎಂಬುದನ್ನು ಕಾದು ನೋಡಬೇಕು.

ಇನ್ನು, ದಸರಾ ವೇಳೆ ಅರಮನೆ ಅಖಾಡದಲ್ಲಿ ನಡೆಯುವಂತಹ ಜಗಜಟ್ಟಿಗಳ ಸಾಂಪ್ರದಾಯಿಕ ಕುಸ್ತಿ ಕಾಳಗ, ಹಾಗೆಯೇ ದಸರಾ ವಸ್ತುಪ್ರದರ್ಶನ ಆವರಣಕ್ಕೆ ಹೊಂದಿಕೊಂಡಂತಿರುವ ದೇವರಾಜ ಅರಸು ವಿವಿಧೋದ್ದೇಶ ಕುಸ್ತಿ ಅಖಾಡದಲ್ಲಿ ಏರ್ಪಡಿಸುವ ನಾನಾ ರೀತಿಯ ಕುಸ್ತಿಗಳು ಈ ಮಣ್ಣಿನ ಸೊಗಡಿಗೆ ಸಾಕ್ಷಿಭೂತವಾಗಿವೆ. ಹಾಗೆಯೇ 'ದಸರಾ ಕ್ರೀಡಾಕೂಟ'ಕ್ಕೆ ಒಂದು ಹೊಸ ಆಯಾಮ ನೀಡುವ ಸಂದರ್ಭವೂ ಬಂದಿದ್ದು, ಅದನ್ನು 'ದಸರಾ ಒಲಿಂಪಿಕ್ಸ್' ಎಂದು ಪುನರ್ ನಾಮಕರಣ ಮಾಡುವುದು ಔಚಿತ್ಯಪೂರ್ಣ ಎನ್ನಿಸುತ್ತದೆ. ಇದು ದಸರಾ ಉತ್ಸವಕ್ಕೆ ಮೆರಗು ನೀಡಿದಂತಾಗುವುದು. ಜೊತೆಗೆ ಹೆಚ್ಚು ಹೆಚ್ಚು ಕ್ರೀಡಾಪಟುಗಳು ಪ್ರವರ್ಧಮಾನಕ್ಕೆ ಬರಲು ಅನುಕೂಲಕಾರಿಯೂ ಆಗಬಹುದು.

ಈಗ, ಧಾರ್ಮಿಕ ಶ್ರದ್ಧಾ ನಂಬಿಕೆಗಳನ್ನು ಹೊರತುಪಡಿಸಿ, ಮೈಸೂರಿಗರಿಗೆ ದಸರಾ ಹಬ್ಬದ ಬಹುಮುಖ್ಯವಾದ ಆಯಾಮವೆಂದರೆ, ಅದು ವಾಣಿಜ್ಯ ವಿಚಾರ. ಮೈಸೂರಿಗೆ ದಸರಾದಿಂದ ಆಕರ್ಷಿತರಾದ ಪ್ರವಾಸಿಗರ ಆಗಮನ. ಮಹಾರಾಜರ ಕಾಲದಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಗರು ಅವರ ಅತಿಥಿಗಳಾಗಿ ಮತ್ತು ಪ್ರವಾಸಿಗರಾಗಿ ಬರುತ್ತಿದ್ದರು.ಆದ್ದರಿಂದಲೇ, ಮೈಸೂರು ದಸರಾ ಮಹೋತ್ಸವವನ್ನು 'ವಿಶ್ವವಿಖ್ಯಾತ' ಎಂದು ಕರೆಯಲಾಗುತ್ತದೆ.

ನನ್ನ ಸ್ನೇಹಿತರಾಗಿದ್ದ ಹೆಸರಾಂತ ಛಾಯಾಚಿತ್ರ ಪತ್ರಕರ್ತ ಟಿಎಸ್ ಸತ್ಯನ್ ಅವರು ನಮ್ಮ 'ಮೈಸೂರು ಮಿತ್ರ'ನಲ್ಲಿ 'ವಿಶ್ವ ವಿಖ್ಯಾತ ದಸರಾ' ಎಂದು ಬರೆದಾಗಲೆಲ್ಲಾ, "ದಸರಾ ಸಂದರ್ಭದಲ್ಲಿ ಮೈಸೂರಿಗೆ ಹೆಚ್ಚು ಹೆಚ್ಚು ವಿದೇಶಿ ಪ್ರವಾಸಿಗರು ಬರಬಹುದು. ಹಾಗೆಂದು 'ವಿಶ್ವವಿಖ್ಯಾತ' ಎಂದು ಕರೆಯಲಾಗದು", ಎಂದು ನನ್ನನ್ನು ಛೇಡಿಸುತ್ತಿದ್ದರು.

ನಾನಾಗ ಪ್ರತಿಭಟಿಸುತ್ತಿದ್ದೆ. ಈ ವಿಚಾರದಲ್ಲಿ ನಾವು ಸ್ವಲ್ಪ ಹೆಮ್ಮೆ ಪಡಲು ನೀವೇಕೆ ಬಿಡುತ್ತಿಲ್ಲ? ಎನ್ನುತ್ತಿದ್ದೆ. ಏನೇ ಹೇಳಿದರೂ ಅವರು ಒಪ್ಪುತ್ತಿರಲಿಲ್ಲ. ಈ ಮಧ್ಯೆ ಪ್ರವಾಸಿ ತಾಣವಾದ ಮೈಸೂರು ಅಷ್ಟೇ ಅಲ್ಲದೆ ಕರ್ನಾಟಕವನ್ನೇ ಪ್ರದರ್ಶಿಸಲು ದಸರಾ ಹಬ್ಬ ಒಂದು ಸುವರ್ಣ ಅವಕಾಶ. **ಆದರೆ ದಸರಾ ಸಂದರ್ಭ ಮತ್ತು ಇಡೀ ವರ್ಷ ಮೈಸೂರು ನಗರವನ್ನು ಪ್ರವಾಸಿ ಸ್ನೇಹಿಯಾಗಿಸುವಲ್ಲಿ ನಾವು ಎಷ್ಟರ ಮಟ್ಟಿಗೆ ಸಫಲರಾಗಿದ್ದೇವೆ?**

ಎನ್‌ಕೆಎ ಬಲ್ಲಾಳ್, ನಿವೃತ್ತ ಹಿರಿಯ ಉಪಾಧ್ಯಕ್ಷರು, ಐಟಿಡಿಸಿ (ಭಾರತ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ) ಇವರು, ಇತ್ತೀಚೆಗೆ (ಆ. 12) ನಮ್ಮ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ನಲ್ಲಿ 'Grand Dasara- A Mirage (ಅದ್ಧೂರಿ ದಸರಾ–ಒಂದು ಮರೀಚಿಕೆ) ಲೇಖನ ಬರೆದಿದ್ದರು. **ಈ ಲೇಖನದಲ್ಲಿ ಅವರು 'ಅದ್ಧೂರಿ' ಎಂಬುದು ಖರ್ಚು ಮಾಡಲು ಲಭ್ಯವಿರುವ ಹಣವನ್ನು ಏಕೆ ಸೂಚಿಸುತ್ತದೆ ಎಂಬುದರ ಬಗ್ಗೆ ಸಮಂಜಸವಾದ ವಿಮರ್ಶೆ ಮಾಡಿದ್ದರು.** ಪ್ರವಾಸೋದ್ಯಮ ಉದ್ದಿಮೆಯಲ್ಲಿ ಪರಿಣಿತ ವ್ಯಕ್ತಿಯಾಗಿದ್ದ ಬಲ್ಲಾಳ್ ಅವರಿಗೆ ಈ ಎಲ್ಲವೂ ಗೊತ್ತಿದೆ. ಭಾರತದ ಬೇರೆ ಬೇರೆ ಸ್ಥಳಗಳಿಂದ ಹಾಗೂ ಹೊರ ದೇಶಗಳಿಂದಲೂ ಪ್ರವಾಸಿಗರನ್ನು ಆಕರ್ಷಿಸಲು ಬಲ್ಲಾಳ್‌ರವರು ಕೆಲವು ಕಾರ್ಯಸಾಧು ಸಲಹೆಗಳನ್ನು ನೀಡಿದ್ದರು. ವಿವಿಧ ದಸರಾ ಉಪ ಸಮಿತಿಗಳಲ್ಲಿ ಯಾರು ಯಾರು ಇರಬೇಕು, ದೇಶದ ನಾನಾ ಭಾಗಗಳಿಂದ ಆಯ್ಕೆ ಮಾಡಿದ ಟ್ರಾವಲ್ ಏಜೆಂಟರನ್ನು ದಸರಾ ಅತಿಥಿಗಳೆಂದು ಆಹ್ವಾನಿಸುವ ಅಗತ್ಯತೆ, ಅಂತಹವರನ್ನು ಸಾಂಪ್ರದಾಯಿಕ ಮೈಸೂರು ಶೈಲಿಯಲ್ಲಿ ಗೌರವಿಸುವುದು, ಮೈಸೂರು ರಾಜವಂಶಸ್ಥರ ಖಾಸಗಿ ದರ್ಬಾರ್ ಅನ್ನು ಉಪಯೋಗ ಮಾಡಿಕೊಳ್ಳುವುದು, ಕೆಲವು ಪ್ರವಾಸಿ ಲೇಖಕರನ್ನು ಕಾರ್ಯಕ್ರಮಗಳ ಪ್ರಚಾರಕ್ಕೆ ಬಳಸಿಕೊಳ್ಳುವುದು ಇತ್ಯಾದಿ.

ಆದರೆ ಮತ್ತೆ ಈ ವೈಭವಯುತ ದಸರಾ ಆಲೋಚನೆಯ ಹರಿಕಾರರು, ಭವ್ಯವಾದ ಅಥವಾ ವೈಭವದ ಕಲ್ಪನೆ ಹಾಗೂ ದೂರದೃಷ್ಟಿ ಹೊಂದಿದ್ದಾರಾ? ಬಲ್ಲಾಳ್‌ರವರು ಬರೆಯುತ್ತಾರೆ, "ಪ್ರತಿ ವರ್ಷ ದಸರಾಗೆ ಕೆಲವೇ ದಿನಗಳಿರುವಂತೆ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಆದ್ದರಿಂದ ಈಗ ಅಧಿಕಾರಿಗಳೇನು ಮಾಡುತ್ತಿದ್ದಾರೆ? ಹಳೆಯ ಫೈಲುಗಳನ್ನು ಕೆದಕುವುದು, ಅವುಗಳನ್ನೇ ಪ್ರತಿ ಮಾಡಿ, ಕಾರ್ಯಕ್ರಮಗಳ ಪಟ್ಟಿ ಸಿದ್ಧಪಡಿಸುತ್ತಿದ್ದಾರೆ". ಇದನ್ನು ನಾನು ಒಪ್ಪಿಕೊಳ್ಳಲೇಬೇಕಾಗಿದೆ.

ಸೆಪ್ಟೆಂಬರ್ 26 ರಂದು ದಸರಾ ಉದ್ಘಾಟನೆ. ಆ ವೇಳೆಗಾಗಲೇ ಮೂಲಸೌಕರ್ಯಗಳನ್ನು ಅಗತ್ಯವಿರುವ ಸ್ಥಳಗಳಲ್ಲಿ ಕಲ್ಪಿಸಬೇಕು. ಮಳೆಯಿಂದಾಗಿ ಹಾಳಾಗಿರುವ ರಸ್ತೆಗಳ ರಿಪೇರಿ, ವಿಕಾರ ರೀತಿಯಲ್ಲಿ ರಸ್ತೆಗಳಿಗೆ ಚಾಚಿಕೊಂಡಿರುವ ಮರಗಳನ್ನು ಅವಶ್ಯಕತೆಗೆ ಅನುಗುಣವಾಗಿ ಕತ್ತರಿಸುವುದು, ಸಮರ್ಪಕ ವಿದ್ಯುಚ್ಛಕ್ತಿ, ಯುಜಿಡಿ, ವಾಹನ ನಿಲುಗಡೆ ಸ್ಥಳ, ಸೂಚನಾ ದೀಪಗಳು, ಜನಜಂಗುಳಿ ರಸ್ತೆಗಳಲ್ಲಿ ಮೆರವಣಿಗೆ ಮಾರ್ಗದುದ್ದಕ್ಕೂ ಶೌಚಾಲಯ (ಏಕೆಂದರೆ ಜಂಬೂಸವಾರಿ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಗಂಟೆಗಟ್ಟಲೆ ಜನರು ಕಾಯುತ್ತಾ ಕುಳಿತಿರುತ್ತಾರೆ), ಪೊಲೀಸ್ ಭದ್ರತೆ, ಅಕ್ಕಪಕ್ಕದ ಮನೆಗಳ ಬಳಿ ಗಸ್ತು ತಿರುಗುವುದು, (ಏಕೆಂದರೆ, ದಸರಾ ಸಂದರ್ಭದಲ್ಲಿ ಮನೆಗಳ್ಳತನ ಹೆಚ್ಚು ನಡೆಯುತ್ತದೆ) ಪ್ರಮುಖ ರಸ್ತೆಗಳು ಮತ್ತು ಕಟ್ಟಡಗಳಲ್ಲಿ ದೀಪಾಲಂಕಾರ ಇದು ಇಡೀ ನಗರವನ್ನು ಬಹುವರ್ಣಗಳಲ್ಲಿ ಅದ್ದಿ ತೆಗೆದಂತಾಗುತ್ತದೆ.

ಹಾಗೂ ಈ ವರ್ಷ 5 ಕೋಟಿಗಿಂತ ಹೆಚ್ಚು ಹಣವನ್ನು ಭವ್ಯ ಹಾಗೂ ಅದ್ಧೂರಿ ದಸರಾಗಾಗಿ ಮೀಸಲಿಡಲಾಗಿದೆ. ಜೊತೆಗೆ ದೇಶದ ರಾಷ್ಟ್ರಪತಿಗಳೇ ದಸರಾ ಉದ್ಘಾಟನೆಗೆ ಆಗಮಿಸುತ್ತಿರುವುದರಿಂದ ಹೆಚ್ಚುವರಿ ವ್ಯವಸ್ಥೆಗಾಗಿ ಅಗತ್ಯ ಕಂಡುಬಂದರೆ ಅಧಿಕ ಅನುದಾನ ಕಲ್ಪಿಸುವುದಾಗಿಯೂ ಮುಖ್ಯಮಂತ್ರಿಗಳು ಈಗಾಗಲೇ ಘೋಷಿಸಿದ್ದಾರೆ.

ದಿವಂಗತ ನಟ, ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರನ್ನು ಬೆಳಕಿನ ಚಿತ್ತಾರದಲ್ಲಿ ಮೂಡಿಸಲಾಗುತ್ತಿದೆಯಂತೆ. ಇದರ ಜೊತೆಗೆ, 3ಡಿ ಮತ್ತು ವಿಡಿಯೋಗಳು ಸೇರಿದಂತೆ ಇನ್ನೂ ಕೆಲವು ಪ್ರಚಾರ ತಂತ್ರಗಳನ್ನು ಬಳಸಿಕೊಂಡು ನಗರವನ್ನು ಪ್ರಜ್ವಲಿಸುವಂತೆ ಮಾಡುವ ಪ್ರಯತ್ನ ಸಾಗಿದೆ. ನಗರದಿಂದ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನದವರೆಗೂ ದೀಪಾಲಂಕಾರ ಇರುತ್ತದೆ ಎಂದು ತಿಳಿದು ಬಂದಿದೆ.

ವಿದ್ಯುಚ್ಛಕ್ತಿ ಕೊರತೆ ಇಲ್ಲದಿದ್ದರೂ, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯವರು (ಸೆಸ್ಕ್) ಮೈಸೂರಿನಲ್ಲಿ ನಕ್ಷತ್ರಗಳಿಂದ ಕೂಡಿದ ಸ್ವರ್ಗವನ್ನು ನಿರ್ಮಿಸಲಿದ್ದಾರೆ. ಇವೆಲ್ಲವುಗಳಿಂದಾಗಿ, ವೈಭವದ ದಸರಾ ಸಾಧ್ಯವಾಗುತ್ತದೆ. ಆದರೆ 'ತೇವಮಯ ದಸರಾ' (Wet Dasara) ಸಾಧ್ಯತೆಯೂ ಇದೆ. ಪಾಶ್ಚಿಮಾತ್ಯ ದೇಶಗಳಲ್ಲಾಗುವ ಹಿಮ ಬೀಳುವ 'ಬಿಳಿಯ ಕ್ರಿಸ್‌ಮಸ್' ಹಾಗೆ. ಮುಂಗಾರಿನ ಗರಿಷ್ಠ ಅವಧಿ ಮುಗಿದಿದ್ದರೂ, ನಗರಾದ್ಯಂತ ಮಳೆಯಾಗುವ ಸಾಧ್ಯತೆಗಳಿವೆ ಎಚ್ಚರ. ತೇವಮಯ ದಸರಾ (wet dasara) ಅಡಚಣೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಆದ್ದರಿಂದ ಅಧಿಕಾರಿ ವರ್ಗದವರು ಇಂತಹ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಪೂರ್ವಭಾವಿ ಯೋಜನೆಗಳನ್ನು ರೂಪಿಸಬೇಕು.

ಮೈಸೂರು ದಸರಾಗೆ ಸುಸ್ವಾಗತ

Email:
kbg@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರಸ್ತೆ ಹಾಳುಮಾಡಿ, ನಿವಾಸಿಗಳ ಮೇಲೆ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ಮೈಸೂರು, ಸೆ.16(ಎಂಕೆ)– ಮೈಸೂರಿನ ಹಿನಕಲ್‌ನಲ್ಲಿರುವ ಇಪಿಆರ್ ಬಾರ್ ರಸ್ತೆ ಅಗೆದು ಹಾಳು ಮಾಡಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳು ಹಾಗೂ ಪೊಲೀಸರ ನಡೆ ಖಂಡಿಸಿ ಕಾಳಿದಾಸ ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ಹೆಚ್.ಸಿ.ರಾಜು ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸರ್ವೆ ನಂ.54ರಲ್ಲಿ ಬಡಾವಣೆ ನಿರ್ಮಾಣವಾಗಿ 40 ವರ್ಷಗಳೇ ಕಳೆದಿವೆ. ಈ ಜಾಗವನ್ನು 1986ರಲ್ಲಿ ಈರಣ್ಣ ಎಂಬುವರು ಮಾರಾಟ ಮಾಡಿದ್ದರೂ ಅವರ ಮಕ್ಕಳಾದ ಇಪಿಆರ್ ಬಾರ್‌ನ ರಘು ಮತ್ತು ಪುಟ್ಟರಾಜು, ರಸ್ತೆ ಅಗೆದು, ಖಾಲಿ ನಿವೇಶನದ ಕಾಂಪೌಂಡ್‌ಗಳನ್ನು ಒಡೆದಿದ್ದಾರೆ. ಅಲ್ಲದೆ ಬಡವರು ವಾಸವಿರುವ ಶೀಟ್ ಮನೆಗಳಿಗೆ ನುಗ್ಗಿ ದಾಂಧಲೆ ನಡೆಸಿ, ಗೂಂಡಾಗಳನ್ನು ಕರೆದುಕೊಂಡು ಬಂದು ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿದರು.

ಈ ಕುರಿತು ನಗರಸಭೆ ಅಧಿಕಾರಿಗಳಿಗೆ, ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ಇನ್ನೆರಡು ದಿನಗಳಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ. ನಗರಸಭೆ ಕಚೇರಿ ಹಾಗೂ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಉಗ್ರ ಪ್ರತಿಭಟನೆ ಮಾಡಲಾಗುವುದೆಂದು ಎಚ್ಚರಿಸಿದರು.

ಹಿನಕಲ್ ಗ್ರಾಪಂ ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ಮುಖಂಡರಾದ ಹೆಚ್.ವಿ.ಬಸವರಾಜು, ಕೇಬಲ್ ಪಾಪಣ್ಣ, ಸಿದ್ದರಾಮಯ್ಯ ಅಭಿಮಾನಿ ಬಳಗದ ಹಿನಕಲ್ ಪ್ರಕಾಶ್, ದೇವರಾಜು, ಹೆಚ್.ಜವರಪ್ಪ, ಗಣೇಶ್, ಕಿರಣ್ ಕುಮಾರ್, ವಿಜಯ್, ರೇವಣ್ಣ ಉಪಸ್ಥಿತರಿದ್ದರು.

ಅ.2ಕ್ಕೆ ಯಶಸ್ವಿನಿ ಜಾರಿ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ಮಾಹಿತಿ

ಮೈಸೂರು, ಸೆ.16(ಎಸ್‌ಪಿಎನ್)– ಯಶಸ್ವಿನಿ ಆರೋಗ್ಯ ಯೋಜನೆ ಅಂತಿಮ ಸಿದ್ಧತೆಯಲ್ಲಿದ್ದು, ಅ.2ರಂದು ಚಾಲನೆ ನೀಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.



ಮೈಸೂರು ಕಲಾಮಂದಿರ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಯಶಸ್ವಿನಿ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲು ಯಾವುದೇ ಆರ್ಥಿಕ ಸಮಸ್ಯೆ ಇಲ್ಲ. ಈ ಯೋಜನೆಯಲ್ಲಿ ಸಹಕಾರ ಇಲಾಖೆಯಿಂದಲೇ ನಿರ್ವಹಿಸಲಾಗುವುದು. ಈ ಯೋಜನೆಗೆ ಪ್ರತ್ಯೇಕ ಟ್ರಸ್ಟ್ ಸ್ಥಾಪಿಸಿ, ಅದರ ಮೂಲಕ ನಿರ್ವಹಣೆ ಮಾಡಲಾಗುವುದು ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದರು.

ವಿಧಾನ ಪರಿಷತ್ ಮತ್ತು ವಿಧಾನಸಭೆಯಲ್ಲಿ ಅಂಗೀಕೃತಗೊಂಡಿರುವ ಕರ್ನಾಟಕ ಧಾರ್ಮಿಕ ಹಕ್ಕು ಸಂರಕ್ಷಣೆ ಕಾಯ್ದೆಯನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ವಾಪಸ್ ಪಡೆಯುವ ಬಗ್ಗೆ ಶಾಸಕ ಪ್ರಿಯಾಂಕ ಖರ್ಗೆ ಹೇಳಿಕೆಗೆ ಉತ್ತರಿಸಿದ ಸಚಿವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಾನೆ ಕಾಯ್ದೆ ವಾಪಸ್ ಪಡೆಯುವುದು. ಬಂದರೂ ವಾಪಸ್ ಪಡೆಯಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದರು.

ದಸರಾ ಮಹೋತ್ಸವದ ಅಂತಿಮ ಸಿದ್ಧತೆ, ಅನುದಾನ ಬಿಡುಗಡೆ, ವಿವಿಧ ಉಪಸಮಿತಿಗಳ ಪಟ್ಟಿಯನ್ನು ಬಿಡುಗಡೆ ಕುರಿತ ಪ್ರಶ್ನೆಗೆ ಸಚಿವರು ಶನಿವಾರ ಬೆಳಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಲಾಗುವುದು ಚುಟುಕಾಗಿ ಉತ್ತರಿಸಿದರು.



ಮೈಸೂರಿನ ಚಾಮರಾಜಪುರಂನಲ್ಲಿರುವ ಏರ್‌ಲೈನ್ಸ್ ಹೋಟೆಲ್‌ನ ನೂತನ ಟರ್ಮರಿಕ್ ಕಿಚನ್ ಅನ್ನು ಖ್ಯಾತ ನಟ ಡಾಲಿ ಧನಂಜಯ ಸಾಂಕೇತಿಕವಾಗಿ ಶುಕ್ರವಾರ ಉದ್ಘಾಟಿಸಿದರು. ಹೆಗಡೆ ಗ್ರೂಪ್ ಮಾಲೀಕರಾದ ಹರೀಶ್‌ಕುಮಾರ್ ಹೆಗಡೆ, ಖ್ಯಾತ ವಕೀಲರಾದ, 'ಲಾಗೈಡ್' ಕಾನೂನು ಮಾಸಪತ್ರಿಕೆ ಸಂಪಾದಕ ಹೆಚ್.ಎನ್.ವೆಂಕಟೇಶ್, ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಹೋಟೆಲ್ ಮಾಲೀಕ ಅಭಿಜಿತ್ ಹೆಗಡೆ ಉಪಸ್ಥಿತರಿದ್ದರು.

ಕಬಿನಿ, ತಾರಕ ಜಲಾಶಯ ಅಭಿವೃದ್ಧಿ ಸಂಬಂಧ ಸರ್ಕಾರದ ಕ್ರಮ ಪ್ರಶ್ನಿಸಿದ ಎಂಎಲ್‌ಸಿ ಮಂಜೇಗೌಡ

ಬೆಂಗಳೂರು, ಸೆ.16– ಹೆಚ್.ಡಿ.ಕೋಟೆ ತಾಲ್ಲೂಕಿನ ರೈತರ ಜೀವನಾಡಿಯಾದ ಕಬಿನಿ ಮತ್ತು ತಾರಕ ಜಲಾಶಯಗಳ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮ ಕುರಿತು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಶ್ನಿಸಿದರು.



ವಿಧಾನಪರಿಷತ್‌ನಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಅವರು, ಕಬಿನಿ ಮತ್ತು ತಾರಕ ಜಲಾಶಯಗಳ ಪುನರುಜ್ಜೀವನಗೊಳಿಸಲು ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆದಿದ್ದರೆ, ಮಂಜೂರಾಗಿರುವ ಮೊತ್ತ ಎಷ್ಟು, ಕಾಮಗಾರಿಗಳ ವಿವರ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ ಹಾಗೂ ಕಾಮಗಾರಿ ಪ್ರಾರಂಭಿಸಲು ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ವಿವರ ಕೇಳಿದರು.

ಬಳಿಕ ಮಂಜೇಗೌಡರ ಪ್ರಶ್ನೆಗೆ ಉತ್ತರಿಸಿದ ಜನಸಂಪನ್ಮೂಲ ಸಚಿವರು, ವಿಶ್ವಬ್ಯಾಂಕ್ ನೆರವಿನೊಂದಿಗೆ ಮೊದಲನೆ ಹಂತದ ಕಾಮಗಾರಿಯನ್ನು 2016–17ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, 18–19ನೇ ಸಾಲಿನಲ್ಲಿ ರೂ.10.48 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. 2ನೇ ಹಂತದಲ್ಲಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಕಬಿನಿ ಜಲಾಶಯಕ್ಕೆ 64.85 ಕೋಟಿ ರೂ., ತಾರಕ ಜಲಾಶಯಕ್ಕೆ ರೂ.9.98 ಕೋಟಿ ರೂ.ಗಳ ರೇಖಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಕಬಿನಿ ಜಲಾಶಯದ ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ವಿಶ್ವಬ್ಯಾಂಕ್‌ನಿಂದ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದ್ದು, ತಾರಕ ಜಲಾಶಯಕ್ಕೆ ಒಟ್ಟು ರೂ. 39.80 ಕೋಟಿ ರೂ.ಗಳ ಅಂದಾಜಿಗೆ ಕೇಂದ್ರ ಜಲ ಆಯೋಗ ಮತ್ತು ವಿಶ್ವಬ್ಯಾಂಕ್‌ನಿಂದ ಅನುಮೋದನೆ ದೊರೆತಿದ್ದು, ಈ ಕಾಮಗಾರಿಯನ್ನು 4 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

ಅ.27ರಿಂದ ಕೊಡವ ಕುಟುಂಬ ತಂಡಗಳ ಹಾಕಿ ಪಂದ್ಯಾವಳಿ

180 ಕೊಡವ ಕುಟುಂಬ ತಂಡಗಳ ನಡುವೆ ಹಣಾಹಣಿ



ಮಡಿಕೇರಿ,ಸೆ.16– ಕೊಡವ ಹಾಕಿ ಅಕಾಡೆಮಿ ಇದೇ ಮೊದಲ ಬಾರಿಗೆ ಕೊಡವ ಕುಟುಂಬ ತಂಡಗಳ ನಡುವೆ 5–0 ಸೈಡ್ ಹಾಕಿ ಪಂದ್ಯಾವಳಿ ನಡೆಸಲು ನಿರ್ಧರಿಸಿದೆ. ಅ.27ರಿಂದ ನ.6ರ ವರೆಗೆ ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದ್ದು, 180 ತಂಡಗಳು ಪಾಲ್ಗೊಳ್ಳಲಿವೆ ಎಂದು ಅಕಾಡೆಮಿಯ ನೂತನ ಆಡಳಿತ ಮಂಡಳಿ ತಿಳಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಹಾಗೂ ಪ್ರಮುಖರು ಕೊಡವ ಹಾಕಿ ಹಬ್ಬದ ಜನಕ ಪಾಂಡಂಡ ಕುಟ್ಟಪ್ಪ(ಕುಟ್ಟಣಿ) ಅವರ ಸ್ಮರಣಾರ್ಥ ಪಂದ್ಯಾವಳಿ ನಡೆಸಲಾಗುತ್ತಿದೆ ಎಂದರು.

2019ರಿಂದ ಇಲ್ಲಿಯವರೆಗೆ ಕೋವಿಡ್ ಹಾಗೂ ಅತಿವೃಷ್ಟಿ ಸಂಕಷ್ಟದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯಾವುದೇ ಪಂದ್ಯಾವಳಿಗಳನ್ನು ನಡೆಸಲು ಸಾಧ್ಯವಾಗಲಿಲ್ಲ. 2020 ಮೇ 7ರಂದು ಹಾಕಿ ಹಬ್ಬದ ಜನಕ ಪಾಂಡಂಡ ಕುಟ್ಟಪ್ಪ(ಕುಟ್ಟಣಿ) ಅವರು ವಿಧಿವಶರಾದರು. ಈ ಎಲ್ಲಾ ಕಾರಣಗಳಿಂದ ಪ್ರಸ್ತುತ ಇದೇ ಮೊದಲ ಬಾರಿಗೆ ಕೊಡವ ಕುಟುಂಬಗಳ ನಡುವಿನ ಹಾಕಿ ನಮ್ಮೆಯನ್ನು ನಡೆಸಲು ನಿರ್ಧರಿಸಲಾಗಿದೆ. ಸುಮಾರು 15 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದ್ದು, ನಗದು ಬಹುಮಾನದ ಒಟ್ಟು ಮೊತ್ತ 2 ಲಕ್ಷ ರೂ.ಗಳಾಗಿದೆ ಎಂದು ಮಾಹಿತಿ ನೀಡಿದರು.

ಇದರಲ್ಲಿ ಮೊದಲನೇ ಬಹುಮಾನ 1 ಲಕ್ಷ ರೂಪಾಯಿಯನ್ನು ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಲೀಲಾ ಕುಟ್ಟಪ್ಪಅವರು ನೀಡುತ್ತಿದ್ದಾರೆ. 2ನೇ ಬಹುಮಾನ 50 ಸಾವಿರ ರೂ., ಸೆಮಿ ಫೈನಲ್‌ನಲ್ಲಿ ಸೋತ 2 ತಂಡಗಳಿಗೆ ತಲಾ 15 ಸಾವಿರ ರೂ. ಮತ್ತು ಕ್ವಾರ್ಟರ್ ಫೈನಲ್‌ನಲ್ಲಿ ಸೋತ 4 ತಂಡಗಳಿಗೆ ತಲಾ 5 ಸಾವಿರ ರೂ.ಗಳನ್ನು ನೀಡಲಾಗುವುದು. ಕೊಡವ ಕುಟುಂಬಗಳ ನಡುವಿನ ಈ ಹಾಕಿ ನಮ್ಮೆಗೆ ಎಲ್ಲಾ ಹಾಕಿ ಪ್ರೇಮಿಗಳು ಹಲವು ವಿಧದಲ್ಲಿ ನಮಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಇದರೊಂದಿಗೆ ಬಹುಮಾನದ ಪ್ರಾಯೋಜಕತ್ವವನ್ನು ಕೂಡ ವಹಿಸಿಕೊಳ್ಳುತ್ತಿದ್ದಾರೆ. ಹಾಕಿ ಕರ್ನಾಟಕ ಸಂಘರ್ಷ ಸಹಕಾರ ನೀಡುತ್ತಿದ್ದು, ಹಾಕಿ ಪಟು ಎ.ಬಿ.ಸುಬ್ಬಯ್ಯ ಅವರು ಪಂದ್ಯಾವಳಿಯ ಬೆಂಬಲಕ್ಕೆ ನಿಂತಿದ್ದಾರೆ ಎಂದು ಪ್ರಮುಖರು ತಿಳಿಸಿದರು.

ಅ.27ರಂದು ಬೆಳಗ್ಗೆ 10 ಗಂಟೆಗೆ ಪಂದ್ಯಾವಳಿಯ ಉದ್ಘಾಟನಾ ಸಮಾರಂಭ ನಡೆಯಲಿದೆ. ನ.6ರಂದು ಬೆಳಗ್ಗೆ 2 ಸೆಮಿಫೈನಲ್ ಪಂದ್ಯಾವಳಿಗಳು ನಡೆಯಲಿವೆ. ಅದೇ ದಿನ ಮಧ್ಯಾಹ್ನ 3.30 ಗಂಟೆಗೆ ಫೈನಲ್ ಪಂದ್ಯಾವಳಿ ಹಾಗೂ ಬಹುಮಾನ ವಿತರಣಾ ಸಮಾರಂಭ ಜರುಗಲಿದೆ ಎಂದು ತಿಳಿಸಿದರು.

ಪ್ರವೇಶ ಶುಲ್ಕ ಒಂದು ಸಾವಿರ ರೂ. ನಿಗದಿ ಪಡಿಸಲಾಗಿದ್ದು, ನೋಂದಣಿ ಪ್ರಕ್ರಿಯೆ ಅ.1 ರಿಂದ ಆರಂಭಗೊಳ್ಳಲಿದೆ. 180 ತಂಡಗಳು ನೋಂದಣಿ ಮಾಡಿದ ನಂತರ ಬರುವ ತಂಡಗಳಿಗೆ ಅವಕಾಶ ಇರುವುದಿಲ್ಲ ಎಲ್ಲಾ ಪಂದ್ಯಗಳು ನಾಕೌಟ್ ಮಾದರಿ ನಡೆಯಲಿವೆ ಎಂದರು.

ಈ ಬಾರಿ ಪಂದ್ಯಾವಳಿಗಳಿಗೆ ಸಿಗುವ ಸ್ಪಂದನೆಯನ್ನು ಆಧರಿಸಿ ಮುಂದಿನ ವರ್ಷವೂ ಕೊಡವ ಕುಟುಂಬಗಳ ನಡುವೆ ಹಾಕಿ ನಮ್ಮೆ ನಡೆಸುವ ಬಗ್ಗೆ ಚಿಂತನೆ ನಡೆಸಲಾಗುವುದು. ಇದೇ ಮೇ ತಿಂಗಳಲ್ಲಿ ಅಕಾಡೆಮಿಯ ಚುನಾವಣೆ ನಡೆದು ನೂತನ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಕೊಡಗಿನ ಕ್ರೀಡಾಪಟುಗಳು ಕ್ರೀಡೆಗಳಲ್ಲಿ ಹೆಚ್ಚು ಸಕ್ರಿಯವಾಗಿರಬೇಕೆಂದು ಹಾಕಿ ನಮ್ಮೆಯನ್ನು ಆಯೋಜಿಸಿದೆ. ಮುಂದಿನ ದಿನಗಳಲ್ಲಿ ಕ್ರೀಡಾ ಶಿಬಿರಗಳನ್ನು ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಕೊಡವ ಹಾಕಿ ಹಬ್ಬದ ಜನಕ ಪಾಂಡಂಡ ಕುಟ್ಟಪ್ಪ ಅವರ ಪರಿಕಲ್ಪನೆಯ ಕಾರಣದಿಂದ ಪ್ರೇರಣೆ ಪಡೆದು ಇಂದು ಕೊಡಗಿನ ಎಲ್ಲಾ ಸಮಾಜಗಳು ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಿವೆ. ಕ್ರೀಡೆಗಳಿಂದ ಯುವ ಜನತೆಯ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚುವುದರಿಂದ ಹಾಕಿ ಅಕಾಡೆಮಿ ಪಂದ್ಯಾವಳಿಗಳ ಮೂಲಕ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ತಿಳಿಸಿದರು.

ಅ.27ರಿಂದ ನಡೆಯುವ ಹಾಕಿ ನಮ್ಮೆಗೆ ಹೆಸರು ನೋಂದಾಯಿಸಿಕೊಳ್ಳಲು ತಂಡಗಳು ಪಾಂಡಂಡ ಬೋಪಣ್ಣ (98452 55282), ಮಾಳೇಟಿರ ಎ.ಶ್ರೀನಿವಾಸ್ (91108 08009) ಹಾಗೂ ಬಡ್ಡಿರ ಡೀನಾ ಪೂವಯ್ಯ (95356 02703)ನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಅಕಾಡೆಮಿಯ ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಮಡಿಕೇರಿ ತಾಲೂಕು ಉಪಾಧ್ಯಕ್ಷೆ ಬಡ್ಡಿರ ಡೀನಾ ಪೂವಯ್ಯ, ವಿರಾಜಪೇಟೆ ತಾಲೂಕು ಉಪಾಧ್ಯಕ್ಷ ಮಾದಂಡ ಎಸ್. ಪೂವಯ್ಯ, ಸೋಮವಾರಪೇಟೆ ತಾಲೂಕು ಉಪಾಧ್ಯಕ್ಷ ಕುಟ್ಟೇರ ಜಯಾ ಚಿಣ್ಣಪ್ಪ ಹಾಗೂ ಕಾರ್ಯದರ್ಶಿ ಮಾಳೇಟಿರ ಎ.ಶ್ರೀನಿವಾಸ್ ಉಪಸ್ಥಿತರಿದ್ದರು.

ಸೋ.ಪೇಟೆ–ಬಾಣಾವರ ರಸ್ತೆ ಅಭಿವೃದ್ಧಿಗೆ 10 ಕೋಟಿ ರೂ.

ಮಡಿಕೇರಿ,ಸೆ.16– ಸೋಮವಾರಪೇಟೆ–ಬಾಣಾವರ ರಾಜ್ಯ ಹೆದ್ದಾರಿ ಸಂಖ್ಯೆ 80 ರಸ್ತೆ ಸಂಪರ್ಕ ಹದಗೆಟ್ಟಿದ್ದು, ಈ ರಸ್ತೆಯ ಅಭಿವೃದ್ಧಿಗೆ ರಾಜ್ಯ ಸರಕಾರ 10 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಈ ರಸ್ತೆ ಅಭಿವೃದ್ಧಿಗೆ ಹಣ ಮಂಜೂರು ಮಾಡುವಂತೆ ಮಡಿಕೇರಿ ಕ್ಷೇತ್ರದ ಶಾಸಕ ಅಪ್ಪಚ್ಚು ರಂಜನ್ ಅವರು ರಾಜ್ಯ ಲೋಕೋಪಯೋಗಿ ಸಚಿವರಿಗೆ ಮನವಿ ಮಾಡಿದ್ದರು. ಈ ಮನವಿಯನ್ನು ಪರಿಗಣಿಸಿರುವ ರಾಜ್ಯ ಸರಕಾರ ಇದೀಗ 10 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಮೇಲೆ ಲೋಕಾಯುಕ್ತ ದಾಳಿ


ಹೊರಗುತ್ತಿಗೆ ನೌಕರನಿಂದ ಲಂಚ ಸ್ವೀಕರಿಸುತ್ತಿದ್ದ ಹಿರಿಯ ನಿರೀಕ್ಷಕನ ಬಂಧನ

ಮಡಿಕೇರಿ,ಸೆ.16– ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯ ಮೇಲೆ ದಾಳಿ ನಡೆಸಿದ ಕೊಡಗು ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರಗುತ್ತಿಗೆ ನೌಕರನಿಂದ ಲಂಚ ಸ್ವೀಕರಿಸುತ್ತಿದ್ದ ಸಹಕಾರ ಸಂಘದ ಹಿರಿಯ ನಿರೀಕ್ಷಕನನ್ನು ಹಣ ಸಮೇತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಡಿಕೇರಿ ನಗರದ ಬಾಲ ಭವನ ಬಳಿ ಇರುವ ಸಹಕಾರ ಇಲಾಖೆಯಲ್ಲಿ ಹಿರಿಯ ನಿರೀಕ್ಷಕರಾಗಿ ಕರ್ತವ್ಯದಲ್ಲಿದ್ದ ಎಸ್.ಮಂಜು ಎಂಬ ಅಧಿಕಾರಿಯೇ ಬಂಧಿತ ಆರೋಪಿ.

ಪ್ರಕರಣ ಹಿನ್ನೆಲೆ: ನಗರದ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಕಕ್ಕಬ್ಬೆಯ ನಿವಾಸಿ ದೇವಯ್ಯ ಎಂಬವರು ಹೊರ ಗುತ್ತಿಗೆ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು, ಹೊರ ಗುತ್ತಿಗೆ ನೌಕರರ ಸಂಘದ ನೋಂದಣಿ ಮಾಡಿಸುವ ಸಲುವಾಗಿ ದೇವಯ್ಯ ಅವರು ಸೆ.14ರಂದು ಸಹಕಾರ ಸಂಘದ ಉಪ ನಿಬಂಧಕರ ಕಚೇರಿಗೆ ಆಗಮಿಸಿ ಅಲ್ಲಿನ ಅಧಿಕಾರಿ ಎಸ್.ಮಂಜು ಅವರನ್ನು ಭೇಟಿ ಮಾಡಿ ವಿಷಯ ತಿಳಿಸಿದರು.

ಈ ಸಂದರ್ಭ ಹಿರಿಯ ನಿರೀಕ್ಷಕ ಮಂಜು 8 ಸಾವಿರ ರೂ.ಗಳಿಗೆ ಬೇಡಿಕೆ ಇಟ್ಟಿದ್ದರು. ಇದರಿಂದ ಮನನೊಂದ ದೇವಯ್ಯ ಸೆ.16ರಂದು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಮಡಿಕೇರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಕಲಂ7 (ಎ) ಪಿ.ಸಿ. ಕಾಯಿದೆ 1988(ತಿದ್ದುಪಡಿ ಅಧಿನಿಯಮ–2018) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.



ಲೋಕಾಯುಕ್ತಕ್ಕೆ ಸಿಕ್ಕಿಬಿದ್ದ ಎಸ್.ಮಂಜು

ಶುಕ್ರವಾರ ಗುತ್ತಿಗೆ ಕಾರ್ಮಿಕ ದೇವಯ್ಯ ಎಂಬವರಿಂದ 8 ಸಾವಿರ ರೂ. ಹಣ ಸ್ವೀಕರಿಸುತ್ತಿದ್ದ ಸಂದರ್ಭ ದಾಳಿ ನಡೆಸಿದ ಕೊಡಗು ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ಹಣ ಸ್ವೀಕರಿಸುತ್ತಿದ್ದ ಎಸ್.ಮಂಜು ಅವರನ್ನು ಬಂಧಿಸಿದ್ದಾರೆ. ಆರೋಪಿ ಬಳಿಯಿಂದ 8 ಸಾವಿರ ರೂ.ಗಳನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರೆಸಲಾಗಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಅನಧಿಕೃತ ಹಣ ಪತ್ತೆ: ಲೋಕಾಯುಕ್ತ ದಾಳಿ ನಡೆಸಿದ ಬಳಿಕ ಆರೋಪಿ ಮಂಜುನನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ ಸಂದರ್ಭ ಆತನ ಬಳಿ 22,540 ರೂ.ಗಳ ಅನಧಿಕೃತ ಹಣವೂ ಪತ್ತೆಯಾಗಿದೆ.

ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮತ್ತು ಮೈಸೂರು ಜಿಲ್ಲಾ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಬಾಬು ಮಾರ್ಗದರ್ಶನದಲ್ಲಿ ಕೊಡಗು ಲೋಕಾಯುಕ್ತ ಡಿವೈಎಸ್‌ಪಿ ಎಂ.ಎಸ್. ಪವನ್‌ಕುಮಾರ್, ಲೋಕಾಯುಕ್ತ ಪೊಲೀಸ್ ನಿರೀಕ್ಷಕ ಲೋಕೇಶ್, ಹೆಡ್‌ಕಾನ್ಸ್‌ಟೇಬಲ್ ಟಿ.ಯು. ಲೋಕೇಶ್, ಟಿ.ಎಂ.ಮಂಜುನಾಥ್, ಕಾನ್ಸ್‌ಟೇಬಲ್ ಹೆಚ್.ಎಸ್.ಪ್ರೈತ್ವೇಶ್, ಎಂ.ಎಸ್. ಸಲಾವುದ್ದೀನ್, ಎ.ಹೆಚ್.ಸಿ.ಗಳಾದ ಅರುಣ್ ಕುಮಾರ್ ರೈ, ಆರ್.ಶಶಿಕುಮಾರ್ ಅವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಗದ್ದೆಹೊಸಳ್ಳಿ ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲು

ಕುಶಾಲನಗರ, ಸೆ.16– ಅಪ್ರಾಪ್ತ ಬಾಲಕಿ ಆತ್ಮಹತ್ಯೆ ಹಿನ್ನೆಲೆಯಲ್ಲಿ ತೊರೆನೂರು ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

ತೊರೆನೂರು ಗ್ರಾಪಂ ವ್ಯಾಪ್ತಿಯ ಗದ್ದೆಹೊಸಳ್ಳಿ ಗ್ರಾಮದ ಗೋಪಿ (23) ಎಂಬ ಯುವಕ ಹೆಬ್ಬಾಲೆ ಗ್ರಾಮದ ಎಸ್ಸೆಸ್ಸೆಲ್ಸಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಗೆ ಕಿರುಕುಳ ನೀಡಿದ್ದಾಗಿ, ಸೋಮವಾರ ಬಾಲಕಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮೃತಪಟ್ಟಿದ್ದಾಳೆ. ಈ ಸಂಬಂಧ ಯುವಕನ ವಿರುದ್ಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ನರೇಗಾ ಯೋಜನೆಯಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದೆ ಸುಮಲತಾ ಅಂಬರೀಶ್ ಸೂಚನೆ



ಮಂಡ್ಯ, ಸೆ.16– ಜಿಲ್ಲೆಯನ್ನು ಎಲ್ಲಾ ವಿಭಾಗದಲ್ಲಿಯೂ ತೆಗೆದುಕೊಂಡು ಹೋಗಲು ಅಭಿವೃದ್ಧಿ ಕಾರ್ಯಗಳು ಕ್ಷಿಪ್ರಗತಿಯಲ್ಲಿ ಕಾರ್ಯಗತಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸಂಸದೆ ಸುಮಲತಾ ಅಂಬರೀಶ್ ಸೂಚನೆ ನೀಡಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನರೇಗಾ ಯೋಜನೆಗಳಿಂದ ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬಹುದಾಗಿದೆ. ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಕಾಂಪೌಂಡ್, ಆಟದ ಮೈದಾನ, ಶೌಚಾಲಯ ಮುಂತಾದ ಕೆಲಸಗಳನ್ನು ಕೈಗೊಳ್ಳಬಹುದು. ನರೇಗಾ ಕೆಲಸಗಳನ್ನು ಚುರುಕುಗೊಳಿಸಬೇಕು ಎಂದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ಪದ್ಮಜಾ ಮಾತನಾಡಿ, ಜಿಲ್ಲೆಯಲ್ಲಿ ಮರಳು, ಅಕ್ರಮ ಸಾಗಾಣಿಕೆಯಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 43 ಪ್ರಕರಣಗಳು ದಾಖಲಾಗಿದ್ದು, 66 ಲಾರಿಗಳ ವಶಪಡಿಸಿಕೊಂಡು 20 ಲಕ್ಷ ರೂ. ದಂಡ ವಿಧಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಸುರಿದ ನಿರಂತರ ಮಳೆಯಿಂದ ಅನೇಕ ಶಾಲೆಗಳು ಹಾನಿಯಾಗಿದೆ. ಅವುಗಳನ್ನು ಸರಿಪಡಿಸುವ ಕೆಲಸಗಳು ನಡೆಯಬೇಕು. ನರೇಗಾ ಯೋಜನೆಯಡಿ ಶಾಲೆಯ ಶೌಚಾಲಯ, ಕಾಂಪೌಂಡ್ ಸೇರಿದಂತೆ ಮೂಲ ಸೌಕರ್ಯವನ್ನು ಕಲ್ಪಿಸಿಕೊಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರದಿಂದ ಬಿಡುಗಡೆಯಾಗುವಂಥ ಅನುದಾನಗಳನ್ನು ಸಮಯಕ್ಕೆ ಸರಿಯಾಗಿ ಸದ್ಬಳಕೆ ಮಾಡಬೇಕು. ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತರಲು ಸಹಕರಿಸಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ ಮಾತನಾಡಿ, ಜೆಜೆಎಂ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ನೀಡಲು ತಾಲೂಕು ಮಟ್ಟದ ಹಂತದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಸದರು ಮತ್ತು ಶಾಸಕರನ್ನು ಆಹ್ವಾನಿಸಿ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ತಮ್ಮಣ್ಣ ಅವರಿಗೆ ತಿಳಿಸಿದರು.

ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗ ರಾಜು, ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

ದಳಪತಿಗಳ ವಿರುದ್ಧ ಸುಮಲತಾ ಕಿಡಿ

ಜೆಡಿಎಸ್ ಶಾಸಕರು ಸದನದಲ್ಲಿ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಒಂದು ದಿನವೂ ಮಾತನಾಡಿಲ್ಲ. ಜಿಲ್ಲೆಯ ಬಗ್ಗೆ ಇವರಿಗೆ ಕಾಳಜಿ ಇಲ್ಲ. ರಾಜಕಾರಣ ಮಾಡುವುದನ್ನು ಬಿಟ್ಟರೆ ಇವರ ಸಾಧನೆ ಏನು?. ಇವರು ಮಾತನಾಡಿರುವ ಬಗ್ಗೆ ರೆಕಾರ್ಡ್ ತೆಗೆದು ನೋಡಲಿ. ನಾನು ಸಂಸತ್‌ನಲ್ಲಿ ಮಾತನಾಡುತ್ತೇನೆ. ಆದರೆ ಇವರು ಏನು ಮಾತನಾಡಿದ್ದಾರೆ ಎಂದು ಸಂಸದೆ ಸುಮಲತಾಅಂಬರೀಷ್ ದಳಪತಿಗಳ ವಿರುದ್ಧ ಕಿಡಿಕಾರಿದರು.

ನಗರದ ಜಿಪಂ ಸಭಾಂಗಣದ ದಿಶಾ ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಶಾಸಕರಿಗೆ ದಿಶಾ ಸಭೆ ಮಾತನಾಡುವ ನೈತಿಕತೆ ಇಲ್ಲ. ಎರಡು ವರ್ಷಗಳ ಕಾಲ ನಡೆದ ಸಭೆಯಲ್ಲಿ ಒಂದೂ ಸಭೆಗೂ ಹಾಜರಾಗಲಿಲ್ಲ. ಅಕ್ರಮ ಗಣಿಗಾರಿಕೆ ವಿಚಾರ ಬಂದಾಗ ಮಾತ್ರ ಸಭೆಗೆ ಬರುವ ಇವರು, ಮತ್ತೆ ಯಾವತ್ತು ಬಂದಿದ್ದಾರೆ. ಈಗ ದಿಶಾ ಬಗ್ಗೆ ಆಸಕ್ತಿಯಿಂದ ಮಾತನಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅತಿವೃಷ್ಟಿಯಿಂದ ಬೆಳೆ, ರಸ್ತೆ, ಮನೆಗಳು ಹಾಳಾಗಿವೆ. ಆ ನಿಟ್ಟಿನಲ್ಲಿ ದಿಶಾ ಸಭೆ ನಡೆಸಿ ಜನರಿಗೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಸಭೆ ನಡೆಸುತ್ತಿದ್ದೇನೆ. ಇವರು ಬಂದು ಭಾಗವಹಿಸಲಿ. ಸಂಜೆವರೆಗೂ ಸಭೆ ನಡೆಯಲಿದೆ. ಇವರೇನು ಪ್ರತಿದಿನ ಅಧಿವೇಶನದಲ್ಲಿ ನಿಂತು ಏನೂ ಮಾತನಾಡಲ್ಲ ಎಂದು ವ್ಯಂಗ್ಯವಾಡಿದರು.

ತೆರೆದ ಬಾವಿಯಲ್ಲಿ ನವಜಾತ ಶಿಶು ಪತ್ತೆ

ಪೊಲೀಸರು, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ಮಗು ರಕ್ಷಣೆ

ಪಾಂಡವಪುರ, ಸೆ.16– ನವಜಾತ ಗಂಡು ಶಿಶುವನ್ನು ತೆರೆದ ಬಾವಿಯಲ್ಲಿ ಬಿಸಾಡಿ ಹೋಗಿರುವ ಘಟನೆ ಪಾಂಡವಪುರ ಪಟ್ಟಣದ ಹೊರವಲಯದ ಚಂದ್ರೆ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.



ಚಂದ್ರೆ ಗ್ರಾಮದ ಹೊರವಲಯದಲ್ಲಿರುವ ಸುಮಾರು 20 ಅಡಿ ಆಳದ ಬಾವಿಯಲ್ಲಿ ಆಗತಾನೆ ಜನಿಸಿದ ಗಂಡು ಮಗುವನ್ನು ಯಾರೂ ಕಿಡಿಕೇಡಿಗಳು ಬಿಸಾಡಿ ಹೋಗಿದ್ದಾರೆ. ಬಾವಿಯಲ್ಲಿ ಮಗುವಿನ ಅರಚಾಟ ಕೇಳಿದ ಸ್ಥಳೀಯರು ಬಾವಿಯ ಬಳಿ ಹೋಗಿ ನೋಡಿದಾಗ ಮಗು ಪತ್ತೆಯಾಗಿದೆ. ಸ್ಥಳೀಯರು ಕೂಡಲೇ ಮಗುವನ್ನು ಮೇಲೆತ್ತುವ ಕೆಲಸ ಮಾಡಿದ್ದಾರೆ. ಬಳಿಕ ಪೊಲೀಸರಿಗೆ ಮಾಹಿತಿ ಮುಟ್ಟಿಸಿದ್ದಾರೆ. ಪೋಲೀಸರು ಪರಿಶೀಲಿಸಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಡಿಪಿಓ, ಇಲಾಖೆಯ ಅಧಿಕಾರಿಗಳು ಮಗುವನ್ನು ರಕ್ಷಣೆ ಮಾಡಿ ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನಡೆಸಿದ್ದಾರೆ. ಗಂಡು ಮಗುವಿನ ತೂಕ ಕೇವಲ ಒಂದೂವರೆ ಕೆಜಿ ಇದ್ದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ.

ಮಿಮ್ಸ್ ಆಸ್ಪತ್ರೆಯಲ್ಲಿ ಮಗುವಿನ ಆರೋಗ್ಯ ವಿಚಾರಿಸಿ ಮಗು ಆರೋಗ್ಯವಾದ ಬಳಿಕ ಮಗುವನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಇಲಾಖೆಯ ರಕ್ಷಣೆ ಮಾಡಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ಹಲ್ಲಿ ಬಿದ್ದ ಬಿಸಿಯೂಟ ಸೇವಿಸಿದ 30 ಮಕ್ಕಳು ಅಸ್ವಸ್ಥ

ಭಾರತೀನಗರ.ಸೆ.16– ಹಲ್ಲಿ ಬಿದ್ದಿದ್ದ ಬಿಸಿಯೂಟವನ್ನು ಸೇವಿಸಿದ ಶಾಲಾ ಮಕ್ಕಳು ಅಸ್ವಸ್ಥಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಅಂಬರಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ. ಪ್ರತೀ ದಿನ ಮಧ್ಯಾಹ್ನ ಬಿಸಿ ಊಟವನ್ನು ಮಕ್ಕಳಿಗೆ ನೀಡಲಾಗುತ್ತಿತ್ತು ಶುಕ್ರವಾರ ಮಧ್ಯಾಹ್ನ ಬಿಸಿ ಊಟದಲ್ಲಿ ಹಲ್ಲಿ ಬಿದ್ದಿತ್ತು ಈ ಊಟವನ್ನು ಸೇವಿಸಿದ 30 ಮಕ್ಕಳು ಅಸ್ವಸ್ಥರಾಗಿದ್ದು, ಅವರನ್ನು ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಶಾಲೆಯಲ್ಲಿ 1 ರಿಂದ 7 ನೇ ತರಗತಿಯಲ್ಲಿ ಒಟ್ಟು 53 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಶುಕ್ರವಾರ ಶಾಲೆಗೆ 48 ಮಕ್ಕಳು ಹಾಜರಾಗಿದ್ದು ಮಧ್ಯಾಹ್ನ ಊಟ ಸೇವಿಸುವ ಮುನ್ನ ಮಕ್ಕಳು ಪ್ರಾರ್ಥನೆ ಮಾಡಿ ನಂತರ ಊಟ ಮಾಡಲು ಮುಂದಾಗಿದ್ದಾರೆ. ತಕ್ಷಣ ಇಬ್ಬರು ಮಕ್ಕಳಿಗೆ ತಟ್ಟೆಯಲ್ಲಿ ಹಲ್ಲಿ ದೇಹದ ತುಣುಕುಗಳು ಸಿಕ್ಕಿದ್ದನ್ನು ಶಿಕ್ಷಕರಿಗೆ ತಿಳಿಸಿದ್ದಾರೆ. ತಕ್ಷಣ



ಮಕ್ಕಳನ್ನು ಊಟ ಮಾಡದಂತೆ ತಡೆಹಿಡಿದಿದ್ದಾರೆ. ಆದರೂ ಸಹ ಎಲ್ಲಾ ಮಕ್ಕಳಿಗೂ ಮುಖ್ಯಶಿಕ್ಷಕಿ ಲಕ್ಷ್ಮಿ ಉಪ್ಪಿನ ನೀರನ್ನು ಕುಡಿಸಿ ವಾಂತಿ ಮಾಡಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಮಕ್ಕಳನ್ನು ದಾಖಲಿಸಿದ್ದಾರೆ.


ಈ ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಮಧ್ಯಾಹ್ನದ ಉಪಹಾರ ಯೋಜನೆ ಸಹಾಯ ನಿರ್ದೇಶಕಿ ಮಂಗಳ ಅವರು ಅಕ್ಕಿ, ಬೇಳೆ ಹಾಗೂ ಅಡುಗೆ ಸಾಮಗ್ರಿಗಳು ಮತ್ತು ಸ್ಥಳವನ್ನು ಪರಿಶೀಲಿಸಿ ಆಹಾರ ಪದಾರ್ಥದಲ್ಲಿ ಯಾವುದೇ ಸಮಸ್ಯೆ ಇಲ್ಲ. ಆಕಸ್ಮಿಕವಾಗಿ ಹಲ್ಲಿ ಬಿದ್ದಿದೆ. ಇದರ ಪರಿಶೀಲನೆಗಾಗಿ ನಾವು ಕ್ರಮಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಗ್ರಾಪಂ ಅಭಿವೃದ್ಧಿ ಅಧಿಕಾರಿ ಅಶೋಕ್ ಶಾಲೆಯ ವಾತಾವರಣದಲ್ಲಿ ಅಶುಚಿತ್ವ ತಾಂಡವಾಡುತ್ತಿದ್ದನ್ನು ಕಂಡು ಸ್ವಚ್ಛಗೊಳಿಸುವಲ್ಲಿ ಮುಂದಾದರು. ಜೊತೆಗೆ ಶಾಲೆಯ ಪರಿಕರಗಳನ್ನು ಪರಿಶೀಲಿಸಿದರು.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ. ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಲವಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆಲಭುಜನಹಳ್ಳಿ ಪಾಪಣ್ಣ ನಿಧನ

ಭಾರತೀನಗರ, ಸೆ.16– ಸುಮ ಚಿತ್ರಮಂದಿರದ ಮಾಲೀಕ ಆಲಭುಜನಹಳ್ಳಿ ಪಾಪಣ್ಣ (85) ಅನಾರೋಗ್ಯದಿಂದ ಗುರುವಾರ ತಡರಾತ್ರಿ ನಿಧನ ಹೊಂದಿದ್ದಾರೆ. ಮೃತರು ಪತ್ನಿ ಗೌರಮ್ಮ, ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಜೆಡಿಎಸ್ ಜಿಲ್ಲಾಗೌರವಾಧ್ಯಕ್ಷ ಎಚ್.ಎಂ. ಮರಿಮಾದೇಗೌಡರ ಭಾವನವರಾಗಿದ್ದು, ಇವರು ಕಳೆದ ಒಂದು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಗುರುವಾರ ತಡರಾತ್ರಿ ನಿಧನಹೊಂದಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಿತು. **ಸಂತಾಪ :** ಶಾಸಕ ಡಿ.ಸಿ.ತಮ್ಮಣ್ಣ, ವಿಧಾನಪರಿಷತ್ ಸದಸ್ಯ ಮಧುಜಿಮಾದೇಗೌಡ, ಕೆಪಿಸಿಸಿ ಸದಸ್ಯ ಗುರುಚರಣ್, ಎಸ್.ಪಿ.ಸ್ವಾಮಿ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.



ಭಾರತ್ ಜೋಡೋ ಅಲ್ಲ: ಕಾಂಗ್ರೆಸ್ ಜೋಡೋ ಯಾತ್ರೆ

ಕಾಡಾ ಅಧ್ಯಕ್ಷ ನಿಜಗುಣರಾಜು ವ್ಯಂಗ್ಯ



ಚಾಮರಾಜನಗರ, ಸೆ.16–ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ ಭಾರತ ಜೋಡೋ ಅಲ್ಲ. ಅದು ಕಾಂಗ್ರೆಸ್ ಜೋಡೋ ಯಾತ್ರೆ ಎಂದು ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ವ್ಯಂಗ್ಯವಾಡಿದರು.

ನಗರದಲ್ಲಿ ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಮತ್ತು ರಾಜ್ಯ ರಾಜ್ಯ ಸರ್ಕಾರವನ್ನು ತೀವ್ರವಾಗಿ ಟೀಕಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಕಾಂಗ್ರೆಸ್‌ನಿಂದ ನಡೆದ ಭಾರತ್ ಜೋಡೋ ಪಾದಯಾತ್ರೆ ಪೂರ್ವಭಾವಿ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿವೆ ಎಂದು ಆರೋಪಿಸಿದ್ದಾರೆ. ಇದು ಸುಳ್ಳು. ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಮತದಾರರು ಏಕೆ ಮತ್ತೊಮ್ಮೆ ಬಿಜೆಪಿಯನ್ನು ರಾಜ್ಯ ಹಾಗೂ ಕೇಂದ್ರದಲ್ಲಿ ಆಯ್ಕೆ ಮಾಡುತ್ತಿದ್ದರು ಎಂದು ಪ್ರಶ್ನಿಸಿದರು. ಬಿಜೆಪಿ ಭಾರತವನ್ನು ವಿಭಾಗ ಮಾಡುತ್ತಿದೆ. ಆದ್ದರಿಂದ ದೇಶವನ್ನು ಒಗ್ಗೂಡಿಸುವ ಸಲುವಾಗಿ ಕಾಂಗ್ರೆಸ್ ಭಾರತ ಜೋಡೋ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಆದರೆ ಕಾಂಗ್ರೆಸ್‌ನ ಹಿರಿಯ ನಾಯಕರು. ಪಕ್ಷವನ್ನು ತೊರೆಯುತ್ತಿರುವ ಹಿನ್ನೆಲೆ ನಡೆಯುತ್ತಿರುವ ಉತ್ತರ ಭಾರತದಲ್ಲಿ ಕಾಂಗ್ರೆಸ್ ಜೋಡೋ ಯಾತ್ರೆ ಎಂದು ಅವರು ಟೀಕಿಸಿದರು. ಮಾಜಿ ಸಂಸದ ಆರ್.ಧ್ರುವನಾರಾಯಣ್ ಬಿಜೆಪಿಯನ್ನು ಕಟುವಾಗಿ ಟೀಕಿಸಿದ್ದಾರೆ. ಇದು ಅವರಿಗೆ ಶೋಭೆ ತರುವಂತದ್ದಲ್ಲ ಎಂದರು.

ಚಾಮುಲ್ ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು, ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಜಯಕುಮಾರ್, ಮುಖಂಡರಾದ ಸೂರ್ಯಕುಮಾರ್, ಶ್ರೀನಾಥ್ ಮಲ್ಲದೇವರು, ರಂಗನಾಥ್ ಸುದ್ದಿಗೋಷ್ಠಿಯಲ್ಲಿದ್ದರು.


ಭಾರತ್ ಜೋಡೋ ಯಾತ್ರೆಯಲ್ಲಿ ದಲಿತರು ಪಾಲ್ಗೊಳ್ಳಬೇಕು

ಚಾಮರಾಜನಗರ, ಸೆ.16–ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಪಾದಯಾತ್ರೆಯಲ್ಲಿ ದಲಿತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕಾಂಗ್ರೆಸ್ ಅನ್ನು ಬೆಂಬಲಿಸಬೇಕು ಎಂದು ಕಾಂಗ್ರೆಸ್ ಎಸ್‌ಸಿ ವಿಭಾಗದ ರಾಜ್ಯಾಧ್ಯಕ್ಷ, ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ಮನವಿ ಮಾಡಿದರು.



ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ದಲಿತರ ಅಭಿವೃದ್ಧಿಗಾಗಿ ನಾನಾ ಕಾರ್ಯಕ್ರಮಗಳನ್ನು ರೂಪಿಸಿದೆ. ಹಾಸ್ಟೆಲ್‌ಗಳನ್ನು ತೆರೆದು ವಿದ್ಯಾರ್ಥಿಗಳನ್ನು ಉತ್ತೇಜಿಸಿದೆ. ಸಂವಿಧಾನದ ಉಳಿವಿಗಾಗಿ ಹೋರಾಟ ನಡೆಸಿದೆ ಆದರೆ ಬಿಜೆಪಿ ಪಕ್ಷವು ದಲಿತರ ಅಭಿವೃದ್ಧಿಗೆ ಯಾವ ಕಾರ್ಯಕ್ರಮಗಳನ್ನು ರೂಪಿಸಿಲ್ಲ. ಕಾಂಗ್ರೆಸ್ ದಲಿತರಿಗೆ ನೀಡಿರುವ ಕೊಡುಗೆಗಳು ಹಾಗೂ ಸ್ಥಾನಮಾನಗಳನ್ನು ಇನ್ಯಾವ ಪಕ್ಷವು ನೀಡಿಲ್ಲ. ಇದನ್ನು ದಲಿತರು ಅರ್ಥ ಮಾಡಿಕೊಳ್ಳಕೊಂಡು ಕಾಂಗ್ರೆಸ್ ಪರ ಇರುವಂತೆ ಆರ್.ಧರ್ಮಸೇನಾ ಕೋರಿದರು. ಕಾಗ್ರೆಸ್ ಜಿಲ್ಲಾ ಎಸ್‌ಟಿ ವಿಭಾಗದ ಅಧ್ಯಕ್ಷ ನಾಗರಾಜು, ಮುಖಂಡರಾದ ಕಾಳಯ್ಯ, ದೇವಣ್ಣ, ರವೀಶ್, ಸೋಮಶೇಖರ್, ಶ್ರೀನಿವಾಸ ಸುದ್ದಿಗೋಷ್ಠಿಯಲ್ಲಿದ್ದರು.

ವಿದ್ಯಾರ್ಥಿನಿ ಅಗ್ನೀಶ್ ಸಾರಾ ಜಿಲ್ಲಾಧಿಕಾರಿಯೊಂದಿಗೆ ಒಂದು ದಿನ



ಚಾಮರಾಜನಗರ, ಸೆ.16– ಜಿಲ್ಲಾಧಿಕಾರಿಗಳೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರೊಂದಿಗೆ ವಿದ್ಯಾರ್ಥಿನಿ ಜೆ.ಅಗ್ನೀಶ್ ಸಾರಾ ಭಾಗವಹಿಸಿ ಸಭೆಗಳಲ್ಲಿ ಪಾಲ್ಗೊಂಡರು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ವಿದ್ಯಾರ್ಥಿನಿ ಜೆ.ಅಗ್ನೀಶ್ ಸಾರ ಅವರನ್ನು ಡಿಸಿ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಬಳಿಕ ಅಗ್ನೀಶ್ ಸಾರ, ಇಡೀ ದಿನ ಜಿಲ್ಲಾಧಿಕಾರಿಗಳೊಂದಿಗೆ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಾಲ್ಮೀಕಿ ಭವನ ನಿರ್ವಹಣೆ ಸಭೆ, ಗಿರಿಜನರ ಶೈಕ್ಷಣಿಕ ಅಭಿವೃದ್ಧಿ ಸಮಿತಿ ಸಭೆ ಸೇರಿದಂತೆ ಇತರೆ ಹಲವು ಸಭೆಗಳಲ್ಲೂ ಜಿಲ್ಲಾಧಿಕಾರಿ ಪಕ್ಕ ಕುಳಿತು ಸಭೆಗಳನ್ನು ಆಲಿಸಿದರು. ವಿಶ್ವ ಯುವ ಕೌಶಲ್ಯ ದಿನಾಚರಣೆಯ ಅಂಗವಾಗಿ ನಡೆಸಲಾದ ಪ್ರಬಂಧ ಸ್ಪರ್ಧೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಥಮ ಬಿ.ಕಾಂ ವಿದ್ಯಾರ್ಥಿನಿ ಜೆ.ಅಗ್ನೀಶ್ ಸಾರಾ ಆಯ್ಕೆಯಾಗಿದ್ದರು.

ಯಳಂದೂರು ಬಳಿ ಭಾರೀ ಶಬ್ದ; ಬೆಚ್ಚಿಬಿದ್ದ ಜನರು

ಯಳಂದೂರು, ಸೆ.16–ಯಳಂದೂರು ಪಟ್ಟಣ ಸೇರಿದಂತೆ ತಾಲೂಕು ವಿವಿಧೆಡೆ ಶುಕ್ರವಾರ ಮಧ್ಯಾಹ್ನ ಭಾರೀ ಶಬ್ದ ಕೇಳಿ ಬಂದಿದ್ದು, ಜನರು ಬೆಚ್ಚಿಬಿದ್ದಾರೆ. ಪಟ್ಟಣವೂ ಸೇರಿದಂತೆ ತಾಲೂಕಿನ ಯರಿಯೂರು, ಕಂದಹಳ್ಳಿ, ಮೆಳ್ಳಹಳ್ಳಿ, ದುಗ್ಗಹಟ್ಟಿ, ಸಮೀಪದ ಸಂತೆಮರಹಳ್ಳಿ ಗ್ರಾಮಗಳಲ್ಲಿ ಶುಕ್ರವಾರ ಸಂಜೆ 4ರ ವೇಳೆ ಇದ್ದಕ್ಕಿಂತೆಯೇ ಭಾರೀ ಶಬ್ದ ಕೇಳಿ ಬಂದಿದೆ. ಇದಾದ ಕೆಲ ಸೆಕೆಂಡ್‌ಗಳಲ್ಲೇ ಭೂಮಿ ಅದುರಿದ ಅನುಭವವಾಗಿದೆ. ಎರಡು ಬಾರಿ ಉಂಟಾದ ಭಾರೀ ಶಬ್ದ ಹತ್ತಾರು ಕಿಮೀಗಳ ದೂರ ಕೇಳಿಸಿದೆ. ಇದರಿಂದ ಜನರು ಆತಂಕಗೊಂಡು ಮನೆಯಿಂದ ಹೊರ ಓಡಿ ಬಂದರು.

ಘಟನೆಯಿಂದ ಪಟ್ಟಣದ ಬಹುತೇಕ ಮನೆಗಳಲ್ಲಿ ಫ್ಯಾನ್, ಅಡುಗೆ ಪಾತ್ರೆಗಳು, ಟಿವಿಗಳು ಅಲುಗಾಡಿರುವುದಾಗಿ ಕೆಲವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಆದರೆ ಈ ಶಬ್ದ ಎಲ್ಲಿಂದ ಬಂತು ಎಂಬುದರ ಬಗ್ಗೆ ಖಚಿತತೆ ಇಲ್ಲ. ಮೂರ್‍ನಾಲ್ಕು ದಿನಗಳ ಹಿಂದಷ್ಟೇ ಚಾಮರಾಜನಗರ ತಾಲೂಕಿನ ದಡದಹಳ್ಳಿ, ಬಸಪ್ಪನಪಾಳ್ಯ ಗ್ರಾಮಗಳಲ್ಲಿ ಇಂತಹದ್ದೇ ಅನುಭವಾಗಿತ್ತು.

ಈ ಬಗ್ಗೆ ಸಂಬಂಧಪಟ್ಟ ಗಣಿ, ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಮಾಹಿತಿ ನೀಡಬೇಕಿದೆ.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಹಿರಿಯ ಸಲಹೆಗಾರ, ಹಿರಿಯ

> "ಸತತ ಮಳೆಯಿಂದ ಭೂಗರ್ಭದೊಳಗೆ ಹೆಚ್ಚು ನೀರು ಸೇರುತ್ತದೆ. ಈ ಭಾಗವೆಲ್ಲ ಸುವರ್ಣಾವತಿ ನದಿ ದಡದಲ್ಲಿದ್ದು, ಪ್ರವಾಹದಿಂದ ಬಂದಿರುವ ನೀರು ಭೂಮಿಯೊಳಗೆ ಸೇರಿದೆ. ಗಾಳಿಯ ಒತ್ತಡ ಹೆಚ್ಚಾಗಿ ಹೀಗಾಗುತ್ತದೆ. ಇದೊಂದು ಭೂಗರ್ಭದ ಸ್ವಾಭಾವಿಕ ಪ್ರಕ್ರಿಯೆ. ಇದನ್ನು ಡೈನಾಮಿಕ್ ಪ್ರೆಷರ್ ಎಂದು ಕರೆಯಲಾಗುವುದು. ಇದರಿಂದ ಇಂತಹ ಶಬ್ದ ಬಂದಿರಬಹುದು. ಇದು ಭೂಕಂಪವಲ್ಲ.
>
> **–ಕೆ.ಎಂ. ನಂಜುಂಡಸ್ವಾಮಿ, ಚಾ.ನಗರ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕ.**

ಭೂವಿಜ್ಞಾನಿ ಡಾ.ಜಿ.ಎಸ್. ಶ್ರೀನಿವಾಸರೆಡ್ಡಿ ಈ ಬಗ್ಗೆ ಪ್ರತಿಕ್ರಿಯಿಸಿ, ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಅಪರೂಪಕ್ಕೆ ಹೆಚ್ಚಿನ ಮಳೆ ಬಿದ್ದಾಗ ಅಂತರ್ಜಲ ಮಟ್ಟ ಹೆಚ್ಚಿ ಭೂಮಿಯಲ್ಲಿ ನೀರಿನ ಒತ್ತಡ ಹೆಚ್ಚಾಗುತ್ತದೆ. ಭೂಮಿಯೊಳಗೆ ಅನೇಕ ಟೊಳ್ಳು ಜಾಗಗಳಿರುತ್ತವೆ. ಅತೀವ ಮಳೆಯಿಂದಾಗಿ ಭೂಮಿಯೊಳಗಿನ ಬಂಡೆಗಳು ಸರಿದಾಡಿದಾಗ ಇಂತಹ ಶಬ್ದಗಳು ಕೇಳಿ ಬರುವ ಸಾಧ್ಯತೆಗಳಿವೆ. ರಾಜ್ಯದ ಯಾವುದೇ ಭಾಗದಲ್ಲಿ ಇಂದು ಭೂಕಂಪನ ದಾಖಲಾಗಿಲ್ಲ. ಜನರು ಆತಂಕಕ್ಕೊಳಗಾಬಾರದು ಎಂದು ಸ್ಪಷ್ಟಪಡಿಸಿದ್ದಾರೆ.

ಇಂದಿನಿಂದ ಸೇವಾ ಪಾಕ್ಷಿಕ ಕಾರ್ಯಕ್ರಮ

ಹನೂರು, ಸೆ.16–ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಸೂಚನೆಯಂತೆ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನಾಚರಣೆ ಸೆ.17ರಿಂದ ಮಹಾತ್ಮ ಗಾಂಧಿ ಜಯಂತಿ ಅ.2ರವರೆಗೆ ಪಕ್ಷದಿಂದ ವಿವಿಧ ಸಮಾಜಮುಖಿ ಸೇವಾ ಪಾಕ್ಷಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾಧ್ಯಮ ಸಹ ವಕ್ತಾರ ಬಸವರಾಜು ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಿಜೆಪಿ ವಿವಿಧ ಮೋರ್ಚಾಗಳಿಂದ ರಕ್ತದಾನ ಶಿಬಿರ, ವಿಶ್ವ ಕ್ಷಯ ರೋಗ ನಿರ್ಮೂಲನೆ ಸಂಬಂಧಿತ ಕಾರ್ಯಕ್ರಮ, ಸಸಿ ನೆಡುವ ಕಾರ್ಯಕ್ರಮ, ಸ್ವಚ್ಛತಾ ಅಭಿಯಾನ, ಕಮಲೋತ್ಸವ, ಪಂಡಿತ್ ದೀನ್ ದಯಾಳ್ ಜಿ ಅವರ ಕುರಿತು ಚರ್ಚೆ–ಸಂವಾದ ನಡೆಯಲಿದೆ. ಸ್ವದೇಶಿ ಖಾದಿ ಆತ್ಮ ನಿರ್ಭರತೆ ಸರಳತೆ ಮತ್ತು ಶುಚಿತ್ವದ ಕುರಿತು ಅಭಿಯಾನ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ವೆಂಕಟೇಗೌಡ ಮಾತನಾಡಿ, ಸೆ.17ರಿಂದ ಅ.2ರ ಅವಧಿಯಲ್ಲಿ 15 ದಿನಗಳವರೆಗೆ ಹನೂರು ಬಿಜೆಪಿ ಕಾರ್ಯಾಲಯದಲ್ಲಿ ರಕ್ತದಾನ ಶಿಬಿರ, ಓಬಿಸಿ ಮೋರ್ಚಾದಿಂದ ಬಿ.ವೆಂಕಟೇಶ್ ಅವರ ನೇತೃತ್ವದಲ್ಲಿ ಬೃಹತ್ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಈ ಸಂದರ್ಭ ಮುಖಂಡರಾದ ವೆಂಕಟರಾಜು(ರಣಧೀರ), ಹನೂರು ತಾಲೂಕು ಮಾಧ್ಯಮ ಸಂಚಾಲಕ ಮಧು, ಸಹ ವಕ್ತಾರ ಶಿವಕುಮಾರ್ ಇದ್ದರು.



ಇಂಜಿನಿಯರ್‌ಗಳ ದಿನಾಚರಣೆ ಅಂಗವಾಗಿ ಗುಂಡ್ಲುಪೇಟೆ ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ಆರ್.ಹೇಮಂತರಾಜು ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ, ಇಂಜಿನಿಯರ್ ಮಂಜುನಾಥ್, ಅನುಪಮ, ಗೋಪಿ ಗು.ಚಿ.ರಮೇಶ್, ಪುಟ್ಟಸ್ವಾಮಿ, ತುಷಾರ್, ಶಿವು, ಹೇಮಾ, ಮಹೇಶ್ ಸೇರಿದಂತೆ ಹಲವರಿದ್ದರು.

ರೇಚಂಬಳ್ಳಿ ಗೌ.ಮಹಾಲಿಂಗಪ್ಪ ನಿಧನ



ಚಾ.ನಗರ, ಸೆ.16–ತಾಲೂಕಿನ ರೇಚಂಬಳ್ಳಿ ಗ್ರಾಮದ ಗೌಡರ ಮಹಾಲಿಂಗಪ್ಪ (74) ನಿಧನರಾದರು. ಮೃತರು, ಪತ್ನಿ, ಪುತ್ರ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.



ಅ.1ರಿಂದ ಮೈಸೂರಲ್ಲಿ ರೈತ ದಸರಾ ಕಾರ್ಯಕ್ರಮ

ಸೆ.26 ರಿಂದ 30ರವರೆಗೆ ತಾಲೂಕು ಮಟ್ಟದಲ್ಲಿ ಗ್ರಾಮೀಣ ದಸರಾ ಆಯೋಜನೆ



ಮೈಸೂರು, ಸೆ.16(ಆರ್‌ಕೆ)– ಅಕ್ಟೋಬರ್ 1 ರಿಂದ 3ರವರೆಗೆ ಮೈಸೂರಲ್ಲಿ ಜಿಲ್ಲಾ ಮಟ್ಟದ ರೈತ ದಸರಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮೊದಲ ದಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಜೆ.ಕೆ. ಮೈದಾನದವರೆಗೆ ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಯಲಿದ್ದು, ಪೂಜಾ ಕುಣಿತ, ಡೊಳ್ಳು ಕುಣಿತ, ಕೊಂಬು–ಕಹಳೆ, ಕಂಸಾಳೆ, ಗಾಡಿ ಗೊಂಬೆ, ನಂದಿ ಧ್ವಜ ಸೇರಿದಂತೆ ಜಾನಪದ ಕಲಾ ತಂಡಗಳೊಂದಿಗೆ ಆರಂಭವಾಗುವ ಮೆರವಣಿಗೆಯನ್ನು ಅಕ್ಟೋಬರ್ 1ರಂದು ಬೆಳಗ್ಗೆ 9.30 ಗಂಟೆಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸುವರು. ಬೆಳಗ್ಗೆ 10 ಗಂಟೆಗೆ ಜೆ.ಕೆ. ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕೃಷಿ ವಸ್ತುಪ್ರದರ್ಶನ ಉದ್ಘಾಟಿಸುವರು. ಕೃಷಿ ಇಲಾಖೆಯ 30 ಮಳಿಗೆಗಳು, ಪಶುಪಾಲನಾ ಇಲಾಖೆಯ 15 ಮಳಿಗೆಗಳನ್ನು ತೆರೆದು ಸಾಕುಪ್ರಾಣಿಗಳ ಪ್ರದರ್ಶನ, ಮತ್ಸ್ಯ ಮೇಳ ಸೇರಿದಂತೆ ಕೃಷಿ, ಕೃಷಿ ಆಧಾರಿತ ವಸ್ತುಗಳನ್ನು ಪ್ರದರ್ಶಿಸಲಾಗುವುದು.

ಅಂದು ಬೆಳಗ್ಗೆ 11 ಗಂಟೆಗೆ ಮೈಸೂರು ಮೆಡಿಕಲ್ ಕಾಲೇಜು ಪ್ಲಾಟಿನಂ ಜುಬಿಲಿ ಹಾಲ್‌ನಲ್ಲಿ ನಡೆಯಲಿರುವ ರೈತ ದಸರಾ ಕಾರ್ಯಕ್ರಮದಲ್ಲಿ ರೈತರು, ರೈತ ಮಹಿಳೆಯರು, ಕೃಷಿ ವಿಜ್ಞಾನಿಗಳು, ಯುವ ರೈತರನ್ನು ಸನ್ಮಾನಿಸಲಾಗುವುದು. ಮಧ್ಯಾಹ್ನ 12.30ಕ್ಕೆ ಕೃಷಿ ಸಚಿವರು ರೈತರೊಂದಿಗೆ ಸಂವಾದ ನಡೆಸಲಿದ್ದು, 'ಸಮಗ್ರ ಕೃಷಿ ಪದ್ಧತಿಯಿಂದ ಸ್ವಾವಲಂಬಿ ಕೃಷಿ', ಕೃಷಿಯಲ್ಲಿ ಖುಷಿ ಕಂಡ ರೈತ ದಂಪತಿಗಳು ತಮ್ಮ ಅನುಭವ ಹಂಚಿಕೊಳ್ಳುವರು. ಅಕ್ಟೋಬರ್ 2 ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ತಾಲೂಕು, ಸಿದ್ದಲಿಂಗಪುರ ಗ್ರಾಮದಲ್ಲಿ ಕೆಸರು ಗದ್ದೆ ಓಟ, ಬೆಳಗ್ಗೆ 10 ಗಂಟೆಗೆ ಓವೆಲ್ ಮೈದಾನದಲ್ಲಿ ಗೋಣಿಚೀಲ ಓಟ, ಗೊಬ್ಬರದ ಮೂಟೆ ಹೊತ್ತು ಓಡುವ ಸ್ಪರ್ಧೆ ಏರ್ಪಡಿಸಲಾಗಿದೆ. ಮಹಿಳೆಯರಿಗೆ ನೀರಿನ ಬಿಂದಿಗೆ ಹೊತ್ತು ಓಡುವುದು, ಒಂಟಿ ಕಾಲಿನ ಓಟ, ಸಂಜೆ ಹಾಲು ಕರೆಯುವ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಮೂರನೇ ದಿನ ಹಾಕಿ ಮೈದಾನದಲ್ಲಿ ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆ ಏರ್ಪಡಿಸಲಾಗಿದೆ. ದಸರಾ ಮಹೋತ್ಸವದ ಅಂಗವಾಗಿ ಸೆಪ್ಟೆಂಬರ್ 26 ರಿಂದ 30ರವರೆಗೆ ತಾಲೂಕು ಮಟ್ಟದಲ್ಲಿ ಗ್ರಾಮೀಣ ದಸರಾ ಕಾರ್ಯಕ್ರಮಗಳು ನಡೆಯಲಿದ್ದು ರೈತರು, ಗ್ರಾಮೀಣ ಭಾಗದ ಜನರು ಪಾಲ್ಗೊಳ್ಳಬೇಕೆಂದು ಮೈಸೂರು ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಕೃಷ್ಣಂ ರಾಜು ಅವರು ತಿಳಿಸಿದ್ದಾರೆ.

ದಸರಾ ಚಲನಚಿತ್ರೋತ್ಸವ

56 ಕನ್ನಡ ಸೇರಿ 112 ಚಿತ್ರಗಳ ಪ್ರದರ್ಶನ:

100 ರೂ. ಟಿಕೆಟ್ ಖರೀದಿಸಿ ದಿನವಿಡೀ ಚಿತ್ರ ನೋಡಿ



ಅಶ್ವಿನಿ

ಮೈಸೂರು,ಸೆ.16(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಈ ಬಾರಿ ಸೆ.27ರಿಂದ ಅ.3ರವರೆಗೆ ದಸರಾ ಚಲನಚಿತ್ರೋತ್ಸವದಲ್ಲಿ 56 ಕನ್ನಡ ಸಿನಿಮಾ ಸೇರಿದಂತೆ 112 ಚಲನಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ ಎಂದು ದಸರಾ ಚಲನ ಚಿತ್ರ ಸಮಿತಿಯ ವಿಶೇಷಾಧಿಕಾರಿ ಆರ್.ಶೇಷು ತಿಳಿಸಿದ್ದಾರೆ.

ಮೈಸೂರಿನ ವಾರ್ತಾ ಭವನದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದ ದಸರಾ ಚಲನಚಿತ್ರೋತ್ಸವ ನಡೆದಿರಲಿಲ್ಲ. ಈ ಬಾರಿ ಅದ್ಧೂರಿ ದಸರಾ ಮಹೋತ್ಸವದೊಂದಿಗೆ ಚಲನಚಿತ್ರೋತ್ಸವವನ್ನು ನಡೆಸಲಾಗುತ್ತಿದೆ. ನಾಲ್ಕು ಸ್ಕ್ರೀನ್‌ನಲ್ಲಿ ಚಲನಚಿತ್ರ ಪ್ರದರ್ಶನ ಆಯೋಜಿಸಲಾಗಿದೆ. ಸೆ.26ರಂದು ಬೆಳಗ್ಗೆ 11ಕ್ಕೆ ಕಲಾಮಂದಿರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿರಿಯ ನಟ ಡಾ.ಶಿವರಾಜ್‌ಕುಮಾರ್ ಚಲನಚಿತ್ರೋತ್ಸವವನ್ನು ಉದ್ಘಾಟಿಸಲಿದ್ದಾರೆ. ನಟ–ನಟಿಯರಾದ ಅಮೃತ ಅಯ್ಯಂಗಾರ್, ಕಾವ್ಯಶೆಟ್ಟಿ, ಸುಧಾರಾಣಿ, ಅನುಪ್ರಭಾಕರ್ ಸೇರಿದಂತೆ ಅನೇಕ ಕಲಾವಿದರು ಪಾಲ್ಗೊಳ್ಳಲಿದ್ದಾರೆ ಎಂದರು.

ಸೆ.27ರಿಂದ ಅ.3ರವರೆಗೆ ಸಿನಿಮಾ ಉತ್ಸವ ಜರುಗಲಿದ್ದು, 56 ಕನ್ನಡ, 28 ಪನೋರಮಾ, 28 ಅಂತಾರಾಷ್ಟ್ರೀಯ ಪ್ರಶಸ್ತಿ ವಿಜೇತ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. ಮೈಸೂರಿನ ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಮೂರು ಸ್ಕ್ರೀನ್ ಹಾಗೂ ಜಯಲಕ್ಷ್ಮೀಪುರಂನಲ್ಲಿರುವ ಡಿಆರ್‌ಸಿಯ ಒಂದು ಸ್ಕ್ರೀನ್‌ನಲ್ಲಿ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. ಎರಡೂ ಸಂಸ್ಥೆಯವರು ಒಂದೊಂದು ಸ್ಕ್ರೀನ್ ಅನ್ನು ದಸರಾ ಚಲನಚಿತ್ರೋತ್ಸವಕ್ಕೆ ಉಚಿತವಾಗಿ ನೀಡಿದ್ದಾರೆ. ಪ್ರತಿದಿನ ಒಂದೊಂದು ಸ್ಕ್ರೀನ್‌ನಲ್ಲೂ ತಲಾ ನಾಲ್ಕು ಪ್ರದರ್ಶನ ಜರುಗಲಿದೆ ಎಂದು ತಿಳಿಸಿದರು.

ನಟ ಪುನೀತ್ ರಾಜ್‌ಕುಮಾರ್, ಸಂಚಾರಿ ವಿಜಯ್ ಸ್ಮರಣೆ: ಕನ್ನಡ ಚಲನಚಿತ್ರ ರಂಗದಲ್ಲಿ ಗಮನಾರ್ಹ ಸಾಧನೆ ಹಾದಿಯಲ್ಲಿ ಸಾಗುತ್ತಿದ್ದಾಗ ಅಕಾಲಿಕವಾಗಿ ನಿಧನರಾದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್, ಸಂಚಾರಿ ವಿಜಯ್ ಅಭಿನಯಿಸಿರುವ ಚಲನಚಿತ್ರಗಳನ್ನು ದಸರಾ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುತ್ತಿದೆ. ಪುನೀತ್‌ರಾಜ್‌ಕುಮಾರ್ ಅವರು ಅಭಿನಯಿಸಿರುವ ಬೆಟ್ಟದ ಹೂವು, ಅಂಜನಿಪುತ್ರ, ರಾಜಕುಮಾರ, ಮೈತ್ರಿ, ಪೃಥ್ವಿ ಹಾಗೂ ಯುವರತ್ನ ಸಿನಿಮಾ ಹಾಗೂ ಸಂಚಾರಿ ವಿಜಯ್ ನಟಿಸಿರುವ ತಲೆದಂಡ, ಪುಕ್ಸಟ್ಟೆ ಲೈಫು, ಆಕ್ಟ್–1978 ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಸೆ.27ರಂದು ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರು ಶಕ್ತಿಧಾಮದ ಮಕ್ಕಳೊಂದಿಗೆ ಪುನೀತ್ ರಾಜ್‌ಕುಮಾರ್ ಅವರು ಬಾಲನಟರಾಗಿ ನಟಿಸಿರುವ 'ಬೆಟ್ಟದ ಹೂ' ಚಿತ್ರವನ್ನು ವೀಕ್ಷಿಸಲಿದ್ದಾರೆ ಎಂದು ತಿಳಿಸಿದರು.

ಶಕ್ತಿಧಾಮದ ಮಕ್ಕಳೊಂದಿಗೆ ಸೆ.27ರಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ 'ಬೆಟ್ಟದ ಹೂವು' ಚಿತ್ರ ವೀಕ್ಷಣೆ



ದಸರಾ ಚಲನಚಿತ್ರೋತ್ಸವ ಸಮಿತಿಯ ವಿಶೇಷಾಧಿಕಾರಿ ಆರ್.ಶೇಷು ಸುದ್ದಿಗೋಷ್ಠಿಯಲ್ಲಿ ದಸರಾ ವೇಳೆ ಪ್ರದರ್ಶನಗೊಳ್ಳುವ ಚಿತ್ರಗಳ ಮಾಹಿತಿ ನೀಡಿದರು. ಚಿತ್ರದಲ್ಲಿ ಸಮಿತಿಯ ಕಾರ್ಯದರ್ಶಿಯೂ ಆದ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್ ಉಪಸ್ಥಿತರಿದ್ದಾರೆ.



3 ದಿನದ ಕಾರ್ಯಾಗಾರ: ದಸರಾ ಚಲನಚಿತ್ರೋತ್ಸವ ಸಮಿತಿಯ ಕಾರ್ಯದರ್ಶಿಯೂ ಆದ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಹರೀಶ್ ಮಾತನಾಡಿ, ಚಲನಚಿತ್ರೋತ್ಸವದ ಹಿನ್ನೆಲೆಯಲ್ಲಿ ಈ ಬಾರಿ ಮೂರು ದಿನಗಳ ಸಿನಿಮಾ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸೆ.22, 23 ಮತ್ತು 24ರಂದು ಕಲಾಮಂದಿರದಲ್ಲಿ ಕಾರ್ಯಾಗಾರ ನಡೆಯಲಿದೆ. ಚಲನಚಿತ್ರ ನಿರ್ಮಾಣದ ಪೂರ್ವ ತಯಾರಿ ಕುರಿತು ಸಿನಿಮಾ ಪ್ರಿಯರಿಗೆ ಮಾಹಿತಿ ನೀಡಲಾಗುತ್ತದೆ. ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಕಾರ್ಯಾಗಾರವನ್ನು ಉದ್ಘಾಟಿಸುವರು. ಚಂಪಾಶೆಟ್ಟಿ, ಪ್ರಶಾಂತ್ ಪಂಡಿತ್, ಪ್ರವೀಣ್ ಕೃಪಾಕರ್, ಪವನ್‌ಕುಮಾರ್, ಶಂಕರ್ ಎನ್.ಸಂಡೂರು, ಪನ್ನಗಾಭರಣ, ಮಂಸೊರೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರನ್ನು ಆಹ್ವಾನಿಸಲಾಗಿದ್ದು, 300 ರೂ. ಪ್ರವೇಶ ಶುಲ್ಕ ನಿಗದಿ ಪಡಿಸಲಾಗಿದೆ ಎಂದು ತಿಳಿಸಿದರು.

ಟಿಕೆಟ್‌ಗೆ ದರ: ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಚಿತ್ರಗಳ ವೀಕ್ಷಿಸಲು ಒಂದು ದಿನದ ಟಿಕೆಟ್ ದರ 100 ರೂ. ನಿಗದಿಪಡಿಸಲಾಗಿದೆ. ಇದರಿಂದ ದಿನವಿಡೀ ಯಾವ ಸಿನಿಮಾವನ್ನಾದರೂ ನೋಡಬಹುದು. ವಾರದ ಟಿಕೆಟ್‌ಗೆ ವಿದ್ಯಾರ್ಥಿಗಳಿಗೆ 300 ರೂ. ಮತ್ತು ಸಾಮಾನ್ಯರಿಗೆ 500 ರೂ. ದರ ನಿಗದಿಪಡಿಸಲಾಗಿದೆ ಎಂದರು.

ಕನ್ನಡಚಿತ್ರಗಳು: 100(ಹಂಡ್ರೆಡ್), 777 ಚಾರ್ಲಿ, ಶ್ರೀ ಸುತ್ತೂರು ಮಠ ಗುರು ಪರಂಪರೆ (ಸಾಕ್ಷ್ಯ ಚಿತ್ರ), ಆದ್ಯಾ, ಅವನೇ ಶ್ರೀಮನ್ನಾರಾಯಣ, ಅವತಾರ ಪುರುಷ, ಬಡವ ರಾಸ್ಕಲ್, ಭಜರಂಗಿ –2, ಭರಾಟೆ, ದಿಯಾ, ದೃಶ್ಯ–2, ಗಾಳಿಪಟ–2, ಗರುಡ ಗಮನ ವೃಷಭ ವಾಹನ, ಜಂಟಲ್ ಮನ್, ಗಿಫ್ಟ್ ಬಾಕ್ಸ್, ಹರಿಕಥೆ ಅಲ್ಲ ಗಿರಿಕಥೆ, ಹೀರೋ, ಇಂಡಿಯಾ ವರ್ಸಸ್ ಇಂಗ್ಲೆಂಡ್, ಇನ್ಸ್‌ಪೆಕ್ಟರ್ ವಿಕ್ರಂ, ಕವಚ, ಕವಲುದಾರಿ, ಕೆ.ಜಿ.ಎಫ್ –1, ಕೆ.ಜಿ.ಎಫ್–2, ಲವ್ ಮಾಕ್ಟೇಲ್–1, ಲವ್ ಮಾಕ್ಟೇಲ್–2, ಮದಗಜ, ಮುಗಿಲ್‌ಪೇಟೆ, ನಿನ್ನ ಸನಿಹಕೆ, ಒಂಬತ್ತನೇ ದಿಕ್ಕು, ಪೈಲ್ವಾನ್, ರೈಡರ್, ರಾಬರ್ಟ್, ಸಖತ್, ಸಲಗ, ಸೀತಾರಾಮ ಕಲ್ಯಾಣ, ಶಿವಾಜಿ ಸುರತ್ಕಲ್, ವಿಕ್ರಾಂತ್ ರೋಣ, ವಿಂಡೋ ಸೀಟ್.

ಭಾರತೀಯ ಚಿತ್ರಗಳು: ಎ ಡಾಗ್ ಅಂಡ್ ಹಿಸ್ ಮ್ಯಾನ್, ಹರಿವ ನದಿಗೆ ಮೈಯೆಲ್ಲಾ ಕಾಲು, ಅಡಿಯು ಗೊಡಾರ್ಡ್, ಅಗ್ನಿವರ್ಷ, ಐಸೇ ಹೀ, ಬಾಫ್, ಬೂಂಬಾ ರೈಡ್, ಫೋಡೇ ಕೋ ಜಲೇಬಿ ಖಿಲಾನೆ ಲೇ ಜಾ ರಿಯಾ ಹೂಂ, ಹಾರುವ ಹಂಸಗಳು, ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಇಂಟು ದಿ ಮಿಸ್ಟ್, ಮನುಸಂಗಡ, ಮಿಂಚುಹುಳು, ಮೂಕಜ್ಜಿಯ ಕನಸುಗಳು, ನೀಲಿ ಹಕ್ಕಿ, ನೋಯ್, ಪದಕ, ಸಾರಾ ವಜ್ರ, ವಿಡೋ ಅಫ್ ಸೈಲೆನ್ಸ್ ಚಲನಚಿತ್ರ ಪ್ರದರ್ಶನಗೊಳ್ಳಲಿವೆ ಎಂದು ವಿವರಿಸಿದರು.

ಯುವ ಸಂಭ್ರಮದಲ್ಲಿ ದೇಶದ ಕಲೆ, ಪರಂಪರೆ, ಸಂಸ್ಕೃತಿ ಅನಾವರಣ

ಮಹಿಳಾ ಸಬಲೀಕರಣದ ಮಹತ್ವ ಸಾರಿದ ದೇಜಮ್ಮ ಕಾಲೇಜು ವಿದ್ಯಾರ್ಥಿಗಳು



ಮಹಿಳಾ ಸಬಲೀಕರಣದ ಮಹತ್ವ ಸಾರಿದ ದೇಜಮ್ಮ ಕಾಲೇಜು ವಿದ್ಯಾರ್ಥಿಗಳು



ಮೈಸೂರು, ಸೆ.16(ಜಿಎ)– ಮೈಸೂರು ದಸರಾ ಮಹೋತ್ಸವದ ಮೊದಲ ಸಾಂಸ್ಕೃತಿಕ ಕಾರ್ಯಕ್ರಮ ಯುವ ಸಂಭ್ರಮ ಇಂದು ಆರಂಭವಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳ ಕಾಲೇಜು ವಿದ್ಯಾರ್ಥಿಗಳು ಭಾರತೀಯ ಕಲೆ, ಪರಂಪರೆ, ದೇಶ ಭಕ್ತಿ, ಸಂಸ್ಕೃತಿ, ಜಾನಪದ ಕಲೆ ಮತ್ತು ಮಹಿಳಾ ಸಬಲೀಕರಣದ ಮಹತ್ವವನ್ನು ನೃತ್ಯ ರೂಪಕಗಳ ಮೂಲಕ ಸಾರಿದರು.

ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರಲ್ಲಿ ಆರಂಭವಾಗಿರುವ ಯುವ ಸಂಭ್ರಮ ಮೊದಲ ದಿನವೇ ಮೈಸೂರಿಗರ ಮನ ಮೆಚ್ಚಿದೆ. ಕಿಕ್ಕಿರಿದ ಯುವ ಸಮೂಹ ಚಪ್ಪಾಳೆಯ ಮೂಲಕ ತಂಡಗಳನ್ನು ಪ್ರೋತ್ಸಾಹಿಸಿದರು.

ವೇದಿಕೆ ಮೇಲೆ ಮೊದಲು ಗಣಪತಿ ಸ್ತುತಿಯೊಂದಿಗೆ ಹೆಜ್ಜೆ ಹಾಕಿದ ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಭಗತ್ ಸಿಂಗ್, ಅಂಬೇಡ್ಕರ್, ಸಾವಿತ್ರಿ ಬಾಪುಲೆ, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ವೇಷ ಭೂಷಣ ತೊಟ್ಟು ಸ್ವಾತಂತ್ರ ಹೋರಾಟಗಾರನ್ನು ಸ್ಮರಿಸಿದರು.

ಮತ್ತೊಂದೆಡೆ ದೇಶದ ವಿವಿಧ ಸಂಸ್ಕೃತಿ, ಕಲೆಯನ್ನು ಬಿಂಬಿಸುವ ಹಿನ್ನೆಲೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಒರಿಸ್ಸಾ ಸೇರಿದಂತೆ ಇತರೆ ರಾಜ್ಯಗಳ ನೃತ್ಯ ಪ್ರಕಾರಗಳಾದ ಯಕ್ಷಗಾನ, ಭರತ ನಾಟ್ಯ, ಒಡಿಸಿ, ಕಥಕ್, ಮೋಹಿನಿಯಾಟ್ಟಂ, ಕಥಕಳಿ ನೃತ್ಯ ಪ್ರದರ್ಶನ ನೀಡಿ ಜನರ ಚಪ್ಪಾಳೆಗೆ ಪಾತ್ರರಾದರು.

ಮಹಾಭಾರತದ ದುರ್ಯೋಧನ ಮತ್ತು ಭೀಮರ ಗದಾಯುದ್ಧವನ್ನು ಕಣ್ಣಿಗೆ ಕಟ್ಟಿದ್ದು ಮೈಸೂರಿನ ಎನ್.ಆರ್. ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳು ಮಹಾಭಾರತದ ದೃಶ್ಯಕಾವ್ಯದಲ್ಲಿನ ಕುರು ಸಾಮ್ರಾಜ್ಯದ ದೊರೆ ದುರ್ಯೋಧನ, ಕರ್ಣ, ಶಕುನಿ, ಭೀಮ ಮತ್ತು ಶ್ರೀಕೃಷ್ಣನ ವೇಷಭೂಷಣ ಧರಿಸಿ, ಯುವ ಸಮೂಹಕ್ಕೆ ಶ್ರೀಕೃಷ್ಣನ ಬೋಧನೆ, ಶಕುನಿಯ ಕುತಂತ್ರ, ಕರ್ಣನ ಸ್ನೇಹ ಜೊತೆಗೆ ದುರ್ಯೋಧನ ಮತ್ತು ಭೀಮನ ನಡುವಿನ ಗದಾಯುದ್ಧ ಸಾಹಸ ಮೆರೆದರು. ಮೈಸೂರಿನ ಬೃಂದಾವನ ಬಡಾವಣೆಯ ಡಾ. ಎಂ.ದೇಜಮ್ಮ ಮಹಾವೀರ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ, ದೌರ್ಜನ್ಯ ಹೆಣ್ಣು ಭ್ರೂಣ ಹತ್ಯೆ, ಮಕ್ಕಳ ಮಾರಾಟ ಸೇರಿದಂತೆ ಅನೇಕ ಸಮಸ್ಯೆಗಳ ನಡುವೆ ಹೆಣ್ಣು ಮಕ್ಕಳು ಹೇಗೆ ಮಹಿಳಾ ಸಬಲೀಕರಣದ ಮೂಲಕ ಮುಖ್ಯವಾಹಿನಿಗೆ ಬರುತ್ತಿದ್ದಾರೆ ಎಂಬುದನ್ನು ನೃತ್ಯ ಪ್ರದರ್ಶನದ ಮೂಲಕ ಮನವರಿಕೆ ಮಾಡಿಕೊಟ್ಟರು. ಜಯ ಹೇ ಕನ್ನಡ ತಾಯಿ ಎಂದು ಜನಪದ ನೃತ್ಯದ ಮೂಲಕ ಕನ್ನಡ ಮತ್ತು ಸಂಸ್ಕೃತಿಯನ್ನು, ಹೊಳೇನರಸೀಪುರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಹಾಗೂ ರಾಮನಗರ ಜಿಲ್ಲೆಯ ಬಿಡದಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಜನಪದ ವೇಷಭೂಷಣದ ಮೂಲಕ ಜನಪದ ಲೋಕವನ್ನು ಸೃಷ್ಟಿಸಿದರು.

ಮೈಸೂರಿನ ಕರುಣಾಮಯಿ ಫೌಂಡೇಷನ್, ವಿಶೇಷ ಮಕ್ಕಳ ತರಬೇತಿ ಶಾಲೆಯ ವಿಶೇಷ ಮಕ್ಕಳು ವೇದಿಕೆಯಲ್ಲಿ ಜನಪದ ಶೈಲಿಯ ನೃತ್ಯಕ್ಕೆ ಹೆಜ್ಜೆ ಹಾಕಿದ್ದು, ವಿಶೇಷವಾಗಿತ್ತು. ಮೊದಲ ದಿನವಾದ ಇಂದು ಮೈಸೂರು, ಮಂಡ್ಯ, ಚಾಮರಾಜನಗರ, ಶಿಕಾರಿಪುರ, ಮಡಿಕೇರಿ, ಹಾಸನ, ಹೊಳೇನರಸೀಪುರ, ರಾಮನಗರದ ಜಿಲ್ಲೆಗಳಿಂದ 29 ಕಾಲೇಜಿನ ವಿದ್ಯಾರ್ಥಿಗಳು ಯುವ ಸಂಭ್ರಮದಲ್ಲಿ ನೃತ್ಯವು ಸೇರಿದಂತೆ ನಾನಾ ಪ್ರತಿಭೆ ಅನಾವರಣದೊಂದಿಗೆ ಮೊದಲ ದಿನದ ಮೆರುಗನ್ನು ಹೆಚ್ಚಿಸಿದರು.



ಡಾ.ರಾಜ್ ಗೀತೆಗೆ ಜನ ಪ್ರತಿನಿಧಿಗಳ ಡಾನ್ಸ್...

ಯುವ ಸಂಭ್ರಮದಲ್ಲಿ ಭಾಗವಹಿಸಿದ ತಂಡಗಳಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಜನಪದ ಕಲೆಯ ಪ್ರಾಕಾರದ ನೃತ್ಯ ಪ್ರದರ್ಶನ ಮೂಲಕ ಕನ್ನಡ, ಸಂಸ್ಕೃತಿಯನ್ನು ಬಿಂಬಿಸಿದರು. ಈ ವೇಳೆ ಅವರನ್ನು ಅಭಿನಂದಿಸಲು ವೇದಿಕೆ ಮೇಲೆ ಬಂದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಎಂಎಲ್‌ಸಿ ಸಿ.ಎನ್. ಮಂಜೇಗೌಡ, ಮೇಯರ್ ಶಿವಕುಮಾರ್, ವಿದ್ಯಾರ್ಥಿಗಳೊಂದಿಗೆ ಡಾ. ರಾಜ್‌ಕುಮಾರ್ ಅಮರ ಆಕಸ್ಮಿಕ ಚಿತ್ರದ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು... ಗೀತೆಗೆ ಜೋಷ್‌ನಲ್ಲಿ ಡಾನ್ಸ್ ಮಾಡಿದರು.

ರಾಜ್ಯಮಟ್ಟದ ದಸರಾ ಶಿಲ್ಪ, ಚಿತ್ರಕಲಾ ಶಿಬಿರಕ್ಕೆ ಚಾಲನೆ

ದಸರಾ ಲಲಿತಕಲೆ, ಕರಕುಶಲ ಉಪ ಸಮಿತಿಯಿಂದ 10 ದಿನಗಳು ನಡೆಯುವ ಶಿಬಿರ



ಮೈಸೂರು ದಸರಾ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ಸೆ.25ರವರೆಗೆ ಆಯೋಜಿಸಿರುವ ರಾಜ್ಯಮಟ್ಟದ ಶಿಲ್ಪ ಮತ್ತು ಚಿತ್ರಕಲಾ ಶಿಬಿರಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್ ಶುಕ್ರವಾರ ಚಾಲನೆ ನೀಡಿದರು.

ಮೈಸೂರು, ಸೆ.16(ಎಸ್‌ಪಿಎನ್)–ನಾಡಹಬ್ಬ ಮೈಸೂರು ದಸರಾ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ಸೆ.25ರವರೆಗೆ ಆಯೋಜಿಸಿರುವ ರಾಜ್ಯಮಟ್ಟದ ಶಿಲ್ಪ ಮತ್ತು ಚಿತ್ರಕಲಾ ಶಿಬಿರಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ಕಲಾಮಂದಿರ ಆವರಣದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವರು, ಇಂದಿನಿಂದ 10 ದಿನಗಳ ಕಾಲ ನಡೆಯುವ ಶಿಲ್ಪ ಮತ್ತು ಚಿತ್ರಕಲಾ ಶಿಬಿರದಲ್ಲಿ ಕಿರಿಯ, ಹಿರಿಯರು ಒಗ್ಗೂಡಿಸಿ ರಾಜ್ಯಮಟ್ಟದ ಶಿಬಿರಗಳನ್ನು ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಭಾಗವಹಿಸಿರುವ ಎಲ್ಲಾ ಕಲಾವಿದರು ಉತ್ತಮ ಕಲಾಕೃತಿಗಳನ್ನು ರಚಿಸಲಿ ಎಂದು ಎಂದು ಶುಭ ಹಾರೈಸಿದರು. ಮೇಯರ್ ಶಿವಕುಮಾರ್ ಮಾತನಾಡಿ, ಈ ಬಾರಿಯ ದಸರಾ ಮಹೋತ್ಸವದಲ್ಲಿ ಕಲೆ, ಸಾಹಿತ್ಯ, ಆಧ್ಯಾತ್ಮ ಕುರಿತು ವೈವಿಧ್ಯಮಯ ಕಾರ್ಯಕ್ರಮಗಳು ಅನಾವರಣಗೊಂಡು ಪ್ರೇಕ್ಷಕರಿಗೆ ರಸದೌತಣ ನೀಡಲಿವೆ. ಇಂದಿನಿಂದ ಆರಂಭವಾಗಿರುವ ರಾಜ್ಯಮಟ್ಟದ ಚಿತ್ರ ಮತ್ತು ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿರುವ ಎಲ್ಲಾ ಕಲಾವಿದರು, ಉತ್ತಮ ಆಕೃತಿಗಳನ್ನು ರಚಿಸಲಿ ಹಾಗೂ ಈ ಶಿಬಿರದಲ್ಲಿ ಪಾಲ್ಗೊಳ್ಳುವ ಕಲಾವಿದರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಲಿ ಎಂದು ಆಶಿಸಿದರು. ರಾಜ್ಯಮಟ್ಟದ ಶಿಲ್ಪಕಲಾ ಶಿಬಿರದಲ್ಲಿ ಶಿಬಿರಾರ್ಥಿಗಳಾಗಿ ಜಕಣಾಚಾರ್ಯ, ಸುಬ್ರಹ್ಮಣ್ಯರಾಜೇ ಅರಸ್, ವಿನಾಯಕ, ಬಿ.ಎಸ್.ಸುನಿಲ್, ವಿ.ಕೆ.ರಾಘವೇಂದ್ರ, ಪ್ರಶಾಂತ್ ಗುಡಿಗಾರ್, ನಾಗರಾಜ ಬಡಿಗೇರ್, ರಾಘವೇಂದ್ರ, ಚಂದನ್, ಆರ್. ಕಾಂತರಾಜ್ ಭಾಗವಹಿಸಲಿದ್ದಾರೆ. ಚಿತ್ರಕಲಾ ಶಿಬಿರದಲ್ಲಿ ಶಿಬಿರಾರ್ಥಿಗಳಾಗಿ ಕೃಷ್ಣ ಜಿಂಗಾಡೆ, ಗಂಗಾಧರ ಮಯಾಚಾರಿ, ಎಂ.ಪಿ.ದೀಪಕ್ ಕುಮಾರ್, ಹರ್ಷ, ಮಂಜುನಾಥ ವಾಲಿ, ಅಚ್ಯುತಾನಂದ, ಲೋಕೇಶ್, ವೀಣಾಗೌಡ, ಹೆಚ್.ಶಿವಕುಮಾರ್, ಜಯಶ್ರೀ, ಸಂತೋಷ್, ಪಿ.ನಾಗರಾಜು, ನಾಗಶಯನ, ಎನ್.ರಶ್ಮಿ, ಶಿವಣ್ಣ ಭಾಗವಹಿಸಲಿದ್ದಾರೆ.

ಈ ವೇಳೆ ಕರ್ನಾಟಕ ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಲಲಿತಕಲಾ ಉಪಸಮಿತಿ ಉಪ ವಿಶೇಷಾಧಿಕಾರಿ ವಿಜಯಕುಮಾರ್, ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜನ ಸ್ವಾಮಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಿ.ರಶ್ಮಿ ಉಪಸ್ಥಿತರಿದ್ದರು.

ಸಚಿವರಿಗೆ ಭಾರೀ ಭದ್ರತೆ: ಇತ್ತೀಚೆಗೆ ಮೈಸೂರು ವಿವಿ ಸಂಶೋಧಕರ ಸಂಘದ ಪದಾಧಿಕಾರಿಗಳು 'ಅದ್ಧೂರಿ ದಸರಾ ಆಚರಣೆ'ಗೆ ಮುಂದಾಗಿರುವ ಜಿಲ್ಲಾಡಳಿತ ಮತ್ತು ಮುಖ್ಯಮಂತ್ರಿಗಳು, ಸಚಿವರ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸುವ ಹೇಳಿಕೆ ನೀಡಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ದಸರಾ ವಿಶೇಷಾಧಿಕಾರಿ ಡಾ.ಬಗಾದಿ ಗೌತಮ್, ಮೇಯರ್ ಶಿವಕುಮಾರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಇತರೆ ಗಣ್ಯರು ಭಾಗವಹಿಸಿದ್ದ ಕಾರ್ಯಕ್ರಮದ ವೇದಿಕೆಗೆ ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಮುಂಜಾಗ್ರತಾ ಕ್ರಮವಾಗಿ 'O' ಶ್ರೇಣಿಯ ಭದ್ರತೆ ಒದಗಿಸಲಾಗಿತ್ತು. ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಬರುವಾಗ ಹಾಗೂ ಹೋಗುವಾಗ 'U' ಶ್ರೇಣಿ ಭದ್ರತೆ ಒದಗಿಸಲಾಗಿತ್ತು. ಅಲ್ಲದೆ ವೇದಿಕೆ ಮುಂಭಾಗ (ಪ್ರೇಕ್ಷಕರು ಕುಳಿತುಕೊಳ್ಳುವ ಜಾಗ)ದಲ್ಲಿ ಮಫ್ತಿಯಲ್ಲಿದ್ದ ಮಹಿಳಾ ಮತ್ತು ಪುರುಷ ಪೊಲೀಸರು ಪ್ರೇಕ್ಷಕರಂತೆ ಕಾರ್ಯಕ್ರಮ ವೀಕ್ಷಿಸಿದ್ದು ವಿಶೇಷವಾಗಿತ್ತು.

ಮೂರನೇ ಪುಟದಿಂದ

'ಯುವ ಸಂಭ್ರಮ'ಕ್ಕೆ ವರ್ಣರಂಜಿತ ಚಾಲನೆ

ಪ್ರತಿನಿತ್ಯ ಹೊಸದನ್ನು ಕಲಿತು ಸಾಧನೆಯತ್ತ ಸಾಗಿ. ಈ ಮೂಲಕ ಹಬ್ಬದ ಮೆರಗನ್ನು ಹೆಚ್ಚಿಸಿ ಎಂದು ಯುವ ಸಮೂಹಕ್ಕೆ ಕರೆ ನೀಡಿದರು. ರಾತ್ರೋ ರಾತ್ರಿ ಯಾವುದೂ ಆಗಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ 'ನಮ್ಮ ಏಳಿಗೆಗೆ ನಾವೇ ಶಿಲ್ಪಿಗಳು'. ಯಾರು ಯಾರನ್ನು ಬೆಳೆಸಲ್ಲ. ನೀವಿರುವ ಜಾಗದಲ್ಲಿ ಕುಳಿತಿದ್ದ ಧನಂಜಯ, ಇಂದು ಡಾಲಿಯಾಗಿ ವೇದಿಕೆ ಮೇಲೆ ಬಂದಿದ್ದೇನೆ. ಇದಕ್ಕೆ 9 ವರ್ಷಗಳು ಹಿಡಿದಿದೆ. ಆದ್ದರಿಂದ ದೀರ್ಘಕಾಲದ ಗುರಿಗಳನ್ನು ಇಟ್ಟುಕೊಂಡು ಕೆಲಸ ಮಾಡಿ. ಸಾಧಿಸಿದ ಬಳಿಕ ಎಲ್ಲವೂ ಅದ್ಭುತ ಎನಿಸುತ್ತದೆ ಎಂದರು.

ಕೊಡುಗೆ ಮುಖ್ಯ: ಜೀವನದಲ್ಲಿ ಕೊಡುಗೆ ಎಂಬುದು ಮುಖ್ಯ. ನೋವಿನಲ್ಲಿದ್ದವರನ್ನು ತಬ್ಬಿಕೊಂಡು ಸಾಂತ್ವನ ಹೇಳಿದರೂ ಅದು ಕೊಡುಗೆಯಾಗುತ್ತದೆ. ಕೆಲವೊಮ್ಮೆ ನೀವು ನೀಡುವ ಕೊಡುಗೆ ಮತ್ತೊಬ್ಬರ ಜೀವನಕ್ಕೆ ಬೆಳಕಾಗಬಹುದು. ಆದರೆ ಕೊಡುಗೆ ನೀಡುತ್ತೇನೆಂದು ಹೇಳಿಕೊಂಡು, ಫೋಟೊ ತೆಗೆಸಿಕೊಂಡು ಮಾಡುವುದಲ್ಲ ಎಂದ ನಟ ಡಾಲಿ ಧನಂಜಯ, 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳಡೆ ಕೂಡಿಕೊಂಬ ನಮ್ಮ ಕೂಡಲಸಂಗಮದೇವ' ಎಂಬ ಬಸವಣ್ಣನವರ ವಚನದೊಂದಿಗೆ ಕೊಡುಗೆಯ ಅರ್ಥ ತಿಳಿಸಿಕೊಟ್ಟರು.

ಮಾನಸಗಂಗೋತ್ರಿಯಲ್ಲಿ ಕುವೆಂಪು: ಮೈಸೂರು ವಿವಿ ಮಾನಸ ಗಂಗೋತ್ರಿಯಲ್ಲಿದ್ದೇವೆ ಎಂದರೆ ರಾಷ್ಟ್ರಕವಿ ಕುವೆಂಪು ಅವರನ್ನು ಸ್ಮರಿಸಲೇಬೇಕು. ಕುವೆಂಪು ಅವರು 'ನಿರಂಕುಶಮತಿಗಳಾಗಿ' ಎಂದು ಕರೆ ನೀಡಿದ್ದಾರೆ. ಆದರೆ ಹಲವರು ನಮ್ಮ ಮೇಲೆ ತಮ್ಮ ಅಂಕುಶವನ್ನಿಟ್ಟು ನಡೆಸುತ್ತಿದ್ದಾರೆ. ನಮ್ಮ ಬಳಿಯಿರುವ ಮೊಬೈಲ್‌ಗಳೇ ನಮ್ಮನ್ನು ರೂಲ್ ಮಾಡುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ವಿಚಾರಗಳ ಸತ್ಯ ಅರಿಯದೆ ಸುಮ್ಮನ್ನೇ ಶೇರ್ ಮಾಡುತ್ತೇವೆ. ನಾವು ಯಾವಾಗಲೂ ಸ್ವತಂತ್ರ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಂದು ವಿಚಾರಗಳ ಬಗ್ಗೆಯೂ ಚಿಂತಿಸಬೇಕು. ನಮ್ಮ ನಡುವೆ ಸಂಭ್ರಮ ತುಂಬಿದ ಹಬ್ಬಗಳು ನಡೆಯುತ್ತಿರಬೇಕೇ ಹೊರತು ಜಗಳಗಳಲ್ಲ. ಜಾತಿ-ಮತ ಎಲ್ಲವನ್ನು ಮೀರಿ ಜೀವನವನ್ನು ಸಂಭ್ರಮಿಸಬೇಕು ಎಂದು ಹೇಳಿದರು.

ಮಾತು ಮುಂದುವರೆಸಿದ ನಟ ಡಾಲಿ, ಮಾನ್ಸೂನ್ ರಾಗ ಸಿನಿಮಾ ಬಿಡುಗಡೆಯಾಗಿದೆ. ತುಂಬಾ ಚೆನ್ನಾಗಿದ್ದು, ಕುಟುಂಬ ಸಮೇತ ಚಿತ್ರಮಂದಿರಗಳಲ್ಲಿ ನೋಡಿ ಎಂದು ಮನವಿ ಮಾಡಿದರಲ್ಲದೆ. ಟಗರು ಚಿತ್ರದ 'ಬೆಳ್‌ಸಿದ್ದಲ್ಲಾ ಬೆಳೆದಿದ್ದು, ನುಗ್ಗಿದ್ ನಾವು, ಹೊಡೆದಿದ್ ನಾವು, ಬೆಂಕಿ ಹಚ್ಚಿದ್ ನಾವು. ಅದರಲ್ಲಿ ಬೆಳೆ ಬೇಸಿಕೊಂಡು ತಿಂದಿದ್ ನೀವ್. ಅಂಕಲ್‌ನ ಹೊಡಿತಿನಿ ಸುಬ್ಬಿ...' ಬಡವರಾಸ್ಕಲ್ ಸಿನಿಮಾದ 'ನಿಯತ್ ಆಗಿ ಯಾರ್ ನೂರ್ ರೂಪಾಯಿ ದುಡಿತಾನೋ ಅವನೇ ಕಿಂಗು. ಯಾರ್ ಯಾರನ್ನು ಕೀಳಾಗಿ ನೋಡ್‌ಬಾರ್‌ದು. ನಾನು ಇಂಗ್ಲಿಷ್‌ನಲ್ಲಿ ಬಡವ, ಕನ್ನಡದಲ್ಲಿ ಶ್ರೀಮಂತ...' ಎಂಬ ಡೈಲಾಂಗ್ ಹೇಳುವ ಮೂಲಕ ಎಲ್ಲರನ್ನು ರಂಜಿಸಿದರು.

ಅಪ್ಪು ಸ್ಮರಣೆ: ಕಾರ್ಯಕ್ರಮ ಆರಂಭಕ್ಕೂ ಮುನ್ನ ಖ್ಯಾತ ನಟ ಡಾ.ಪುನೀತ್ ರಾಜ್‌ಕುಮಾರ್ ಅವರ 'ರಾಜಕುಮಾರ' ಸಿನಿಮಾ ಹಾಡನ್ನು ಹಾಡುವ ಮೂಲಕ ಅಪ್ಪು ಸ್ಮರಣೆ ಮಾಡಲಾಯಿತು. ಅಲ್ಲದೆ ಪುನೀತ್ ರಾಜ್‌ಕುಮಾರ್ ಜನ್ಮ ದಿನಾಚರಣೆಯಲ್ಲಿ 'ಸ್ಫೂರ್ತಿ ದಿನ'ವನ್ನಾಗಿ ಆಚರಣೆ ಮಾಡಲು ಸರ್ಕಾರ ನಿರ್ಧರಿಸುವುದಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು. ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಕಾಂಪೋಸ್ಟ್ ಅಧ್ಯಕ್ಷ ಎಸ್.ಮಹದೇವಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಉಪ ಮೇಯರ್ ಜಿ.ರೂಪ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಸ್‌ಪಿ ಚೇತನ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

150 ಕ್ಷೇತ್ರ ಕಾಂಗ್ರೆಸ್‌ಗೆ ಫೇವರ್!

ಸಮೀಕ್ಷೆಗಾರರು ಅಂತಹ ಕ್ಷೇತ್ರಗಳಲ್ಲಿ ಪಕ್ಷ ಹೆಚ್ಚು ಒತ್ತು ಕೊಡಬೇಕು, ಅಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎಲ್ಲ ರೀತಿಯ ಸಹಕಾರವನ್ನು ಚುನಾವಣೆ ವೇಳೆಯಲ್ಲಿ ನೀಡಬೇಕೆಂದು ಹೇಳಿದ್ದಾರೆ. ಕನಗೋಳ್ ಇತ್ತೀಚೆಗೆ ಪಕ್ಷದ ಪ್ರಮುಖ ನಾಯಕರ ಜೊತೆಗೆ ಸಮಾಲೋಚನೆ ನಡೆಸಿ, ತಾವು ಇದುವರೆಗೂ ರಾಜ್ಯಾದ್ಯಂತ ನಡೆಸಿರುವ ಎರಡು ಚುನಾವಣಾ ಸಮೀಕ್ಷೆಗಳ ಬಗ್ಗೆ ಮಾಹಿತಿ ನೀಡಿ, ಪಕ್ಷ ಎಲ್ಲಿ ಯಾವ ರೀತಿ ತೆಗೆದುಕೊಳ್ಳಬೇಕೋ ಎಂಬೆಲ್ಲ ಮಾಹಿತಿ ನೀಡಿದ್ದಾರೆ. ಪ್ರತಿ ಕ್ಷೇತ್ರದ ಬಗ್ಗೆಯು ವಿವರಣೆ ನೀಡಿರುವ ಸಮೀಕ್ಷೆಗಾರರು ಆಡಳಿತ ವಿರೋಧಿ ಅಲೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಾಯಕರು ದಿನನಿತ್ಯ ಹೇಳಿಕೆಗಳನ್ನು ನೀಡಬೇಕು.

ಒಂದಲ್ಲ ಒಂದು ರೀತಿ ಮತದಾರರನ್ನು ಸ್ಪಂದಿಸುವ ಕೆಲಸ ನಡೆಯಲಿ. ಡಿಸೆಂಬರ್‌ನಲ್ಲಿ ಪ್ರಕಟಗೊಳ್ಳುವ ಮೊದಲ ಪಟ್ಟಿಯ ಅಭ್ಯರ್ಥಿಗಳು ಚುನಾವಣೆ ನಡೆಯುವವರೆಗೂ ತಮ್ಮ ಕ್ಷೇತ್ರದಲ್ಲೇ ಉಳಿದು, ಮತದಾರರ ಜೊತೆ ಬೆರೆಯುವಂತೆ ಸೂಚಿಸಿದ್ದಾರೆ.

ಸುನೀಲ್ ಕನಗೋಳ್ ಅವರ ವರದಿ ಪ್ರಕಾರ ರಾಜ್ಯದ ಯಾವ್ಯಾವ ಕ್ಷೇತ್ರಗಳಲ್ಲಿ ಮತದಾರರ ಮನ:ಸ್ಥಿತಿ ಹೇಗಿದೆ ಇಂತಹ ಸಂದರ್ಭದಲ್ಲಿ ಬೇರೆ ಪಕ್ಷಗಳಲ್ಲಿರುವವರು ಸೇರಿದಂತೆ ಯಾರ್‍ಯಾರನ್ನು ಸೆಳೆದರೆ ಅನುಕೂಲವಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಸುನೀಲ್ ಕನಗೋಳ್ ಅವರು ನೀಡಿದ ಸೂಚನೆಯ ಪ್ರಕಾರ ಹೆಜ್ಜೆ ಹಾಕಿದರೆ ಕಾಂಗ್ರೆಸ್ ಪಕ್ಷ ಮರಳಿ ಅಧಿಕಾರ ಹಿಡಿಯುವ ಸನಿಹಕ್ಕೆ ಧಾವಿಸಲಿದೆ ಎಂದು ಪಕ್ಷದ ಥಿಂಕ್ ಟ್ಯಾಂಕ್ ಭಾವಿಸಿದ್ದು,ಇದೇ ಕಾರಣಕ್ಕಾಗಿ ಪಕ್ಷದ ಗೆಲುವಿಗೆ ನೆರವಾಗಬಲ್ಲವರು ಬಿಜೆಪಿ ಮತ್ತು ಜೆಡಿಎಸ್‌ನಿಂದ ಬಂದರೆ ಅವರನ್ನು ಸೇರಿಸಿಕೊಳ್ಳಲು ರಾಜ್ಯದ ನಾಯಕರಿಗೆ ವರಿಷ್ಠರು ಹಸಿರು ನಿಶಾನೆ ನೀಡಿದ್ದಾರೆ.

ಡ್ರೆಸ್ ಕೋಡ್ ಅರ್ಜಿ ವಜಾ

ಹಕ್ಕು ಮತ್ತು ಸಂಸ್ಥೆಗಳಲ್ಲಿ ಶಿಸ್ತಿನ ಅಗತ್ಯವನ್ನು ಉಲ್ಲೇಖಿಸುವಾಗ ಅವರು ದೇಶಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಡ್ರೆಸ್ ಕೋಡ್‌ನಲ್ಲಿ ಏಕರೂಪತೆಗಾಗಿ ಮನವಿ ಮಾಡಿದರು. ಪ್ರಕರಣದ ವಿಚಾರಣೆಗೆ ನ್ಯಾಯಾಲಯದ ನಿರಾಸಕ್ತಿ ತೋರಿದ ಹಿನ್ನೆಲೆ ಗೌರವ್ ಭಾಟಿಯಾ ಸ್ವಯಂಪ್ರೇರಿತರಾಗಿ PIL ಹಿಂತೆಗೆದುಕೊಳ್ಳಲು ಮನವಿ ಮಾಡಿದರು. ಈ ಮನವಿಯನ್ನು ಪೀಠ ಒಪ್ಪಿದ ಹಿನ್ನೆಲೆ ಅರ್ಜಿಯನ್ನು ವಾಪಸ್ ಪಡೆದರು. ಸದ್ಯ ಇದೇ ಪೀಠವು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ಹಿಜಬ್ ಧರಿಸುವುದರ ಮೇಲಿನ ನಿಷೇಧವನ್ನು ಪರಿಣಾಮಕಾರಿಯಾಗಿ ಎತ್ತಿಹಿಡಿಯುವ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸುವ ಮೇಲ್ಮನವಿಗಳ ಅರ್ಜಿ ವಿಚಾರಣೆ ನಡೆಸುತ್ತಿದೆ. ಹಿಜಬ್ ಧರಿಸಿದ ಕಾರಣಕ್ಕೆ ತರಗತಿಗಳಿಗೆ ಹಾಜರಾಗಲು ಅನುಮತಿ ನಿರಾಕರಿಸಿದ ನಂತರ ಅರ್ಜಿದಾರರು ಕೋರ್ಟ್ ಮೆಟ್ಟಿಲೇರಿದ್ದಾರೆ.

ದಸರಾ ಗಜಪಡೆ, ಅಶ್ವಪಡೆ

ಮೂರು ಸುತ್ತಿನಂತೆ 21 ಬಾರಿ ಕುಶಾಲತೋಪು ಸಿಡಿಸಿದರು. ಫಿರಂಗಿ ಮೂಲಕ ಸಿಡಿಸಿದ ಸಿಡಿಮದ್ದಿನ ಶಬ್ದದ ಸಾಂದ್ರತೆ ಪರಿಶೀಲಿಸಲು ಇದೇ ಮೊದಲ ಬಾರಿಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರಿಗಳನ್ನು ಶಬ್ಧ ಸಾಂದ್ರತೆ ಪರಿಶೀಲಿಸುವ ಸಾಧನದೊಂದಿಗೆ ಕರೆಸಲಾಗಿತ್ತು. ಸಿಡಿಮದ್ದಿನಿಂದ ಹೊರಹೊಮ್ಮಿದ 105.3 ಡೆಸಿಬಲ್ ಪ್ರಮಾಣದ ಶಬ್ಧ ಯಂತ್ರದಲ್ಲಿ ದಾಖಲಾಯಿತು. ದೀಪಾವಳಿ ವೇಳೆ ಸಿಡಿಸುವ ಆಟಂಬಾಂಬ್‌ಗಿಂತಲೂ ಹೆಚ್ಚಿನ ಶಬ್ಧ ದಾಖಲಾಗಿಲ್ಲ. ಹಾಗಾಗಿ ಆನೆ ಹಾಗೂ ಕುದುರೆಗಳು ಮಾತ್ರವಲ್ಲದೆ, ಜನರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲಾಯಿತು.

ಅರಮನೆಯಲ್ಲೇ ಉಳಿದ 'ಚೈತ್ರ': ಅರಮನೆ ಆವರಣದಲ್ಲಿ ಗಂಡು ಮರಿಗೆ ಜನ್ಮ ನೀಡಿರುವ ಲಕ್ಷ್ಮಿ ಆನೆಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ರಾಂಪುರ ಕ್ಯಾಂಪ್‌ನ ಚೈತ್ರಗೆ ಸಿಡಿಮದ್ದು ತಾಲೀಮಿನಿಂದ ವಿನಾಯಿತಿ ನೀಡಲಾಗಿತ್ತು. ಇದರಿಂದ ಇಂದು 12 ಆನೆಗಳು, 41 ಕುದುರೆಗಳು ಸಿಡಿಮದ್ದಿನ ತಾಲೀಮಿನಲ್ಲಿ ಪಾಲ್ಗೊಂಡವು.

ಮಂಡಳಿ ಹೆಚ್ಚುವರಿ ವಿಭಾಗ ಕಚೇರಿ

ಕಚೇರಿಯನ್ನು ತೆರೆಯಲು ಮುಖ್ಯಮಂತ್ರಿಯವರು ಸಮ್ಮತಿಸಿದರೆ ಇಲಾಖೆ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ ನೀರು ಪೂರೈಕೆ ಮಾಡಲು ಮೈಸೂರು ನಗರದಲ್ಲಿ ಒಂದು ಕಾರ್ಯಪಾಲಕ ಅಭಿಯಂತರರು ಹಾಗೂ ಎರಡು ವಿಭಾಗೀಯ ಕಚೇರಿಗಳನ್ನು ಆರಂಭಿಸಿದ್ದೇವೆ.

ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ನೀರು ಸಬರಾಜು ಮಾಡಲಾಗುತ್ತದೆ. ಕಾಮಗಾರಿಗಳ ಮೇಲ್ವಿಚಾರಣೆ ಹಾಗೂ ಹಳೆ ಹುಂಡವಾಡಿಯಿಂದ ಮೈಸೂರು ನಗರಕ್ಕೆ ನೀರು ಸರಬರಾಜು ಮಾಡಲು ಕಾಮಗಾರಿ ಅನುಷ್ಠಾನ ಮಾಡಿದ್ದೇವೆ. ಈ ಕಚೇರಿಗಳನ್ನು ವಿಕೇಂದ್ರಿಕರಣ ಮಾಡುವುದರಿಂದ ಯಾರಿಗೂ ತೊಂದರೆಯಾಗುವುದಿಲ್ಲ ಎಂದು ಸದನಕ್ಕೆ ಭರವಸೆ ನೀಡಿದರು.

ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧ

ಅವರು ಅನುಮತಿಸಿದರೆ ನಾವು ಸಿದ್ಧರಿದ್ದೇವೆ ಎಂದು ಹೇಳಿದರು. ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಈ ಬಗ್ಗೆಯೂ ಕೇಂದ್ರಕ್ಕೂ ಮನವರಿಕೆ ಮಾಡಿಕೊಟ್ಟಿದ್ದೇವೆ. ಪತ್ರ ವ್ಯವಹಾರವೂ ಕೂಡ ನಡೆದಿದೆ. ಕೇಂದ್ರದಿಂದ ನಮಗೆ ಸಕಾರಾತ್ಮಕ ಸ್ಪಂದನೆ ಸಿಗುವ ಸಂಭವವಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕಾದರೆ ಕೇಂದ್ರದ ಅನುಮತಿ ಅಗತ್ಯ. ಕೇಂದ್ರ ಸರ್ಕಾರ ಶೇ.60 ಹಾಗೂ ರಾಜ್ಯ ಸರ್ಕಾರ ಶೇ.40ರಷ್ಟು ಸಹಾಯಧನ ಒದಗಿಸುತ್ತದೆ. ರಾಜ್ಯದಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನೂ ತೆರೆಯುತ್ತಿದ್ದೇವೆ. ಅವುಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದೇವೆ ಎಂದು ಹೇಳಿದರು. ಅಂಗನವಾಡಿ ಕೇಂದ್ರಗಳನ್ನು ಶಿಶು ಅಭಿವೃದ್ಧಿ ಯೋಜನೆಯಡಿ ಜನಸಂಖ್ಯೆಗನುಗುಣವಾಗಿ ಮಂಜೂರು ಮಾಡಲಾಗುತ್ತದೆ. 150ರಿಂದ 400 ಜನಸಂಖ್ಯೆ ಇರುವ ಕಡೆ ಮಿನಿ ಅಂಗನವಾಡಿ ಕೇಂದ್ರ, 400ರಿಂದ 800 ಜನ ಇರುವ ಕಡೆ ಮುಖ್ಯ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುತ್ತದೆ. ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಅಂಗನವಾಡಿ ಮಾದರಿಯಲ್ಲಿ ವೇತನ ನೀಡಲು ಅವಕಾಶ ಇರುವುದಿಲ್ಲ. ಈ ಸಾಲಿನ ಬಜೆಟ್‌ನಲ್ಲಿ ಅಂಗನವಾಡಿಗಳಿಗೆ ಹೊಸ ಕಟ್ಟಡ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗೌರವಧನವನ್ನು ನಮ್ಮ ಸರ್ಕಾರ ಹೆಚ್ಚಿಸಿದೆ ಎಂದು ತಿಳಿಸಿದರು.

ಇನ್ನಾದರೂ ಅರ್ಹರಿಗೆ ಮೀಸಲಾತಿ ದೊರಕಲಿ

● ಮೈಸೂರಲ್ಲಿ ಮಾಜಿ ಸಚಿವ ಈಶ್ವರಪ್ಪ ಸಲಹೆ ● ಡಾ|| ಅಂಬೇಡ್ಕರ್ ಅವರ ಪ್ರತಿಪಾದನೆಯೂ ಇದೇ ಆಗಿತ್ತು



ಮೈಸೂರು,ಸೆ.16(ಎಂಟಿವೈ)- ಶ್ರೀಮಂತರು, ರಾಜಕಾರಣಿಗಳು, ಅಧಿಕಾರಿಗಳ ಕುಟುಂಬ ಮೀಸಲಾತಿ ಸೌಲಭ್ಯ ದುರುಪಯೋಗಪಡಿಸಿಕೊಳ್ಳುತ್ತಿದ್ದು, ಇನ್ನಾದರೂ ಸಶಕ್ತರಿಗೆ ಮೀಸಲಾತಿ ಸೌಲಭ್ಯ ನೀಡದೆ, ಅರ್ಹರಿಗೆ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೀಸಲಾತಿ ಸೌಲಭ್ಯ ವಂಶ ಪಾರಂಪರ್ಯವಾಗಿ ದುರುಪಯೋಗವಾಗುತ್ತಲೇ ಇದೆ. ಇದರಿಂದ ಸೌಲಭ್ಯ ಮಾತ್ರ ಕೆಲವೇ ಕೆಲವರಿಗೆ ಸೀಮಿತಗೊಳ್ಳುತ್ತಿದೆ. ಅರ್ಹರಿಗೆ ಮೀಸಲಾತಿ ಸೌಲಭ್ಯ ದೊರಕುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೀಸಲಾತಿಯಿಂದ ದೂರವಾಗಿ ತುಳಿತಕ್ಕೆ ಒಳಗಾದ ಎಲ್ಲಾ ವರ್ಗದ ಬಡವರಿಗೆ ಮೀಸಲಾತಿ ದೊರೆಯಬೇಕು. ವಂಶಪಾರಂಪರ್ಯವಾಗಿ ಮೀಸಲಾತಿಯನ್ನು ಅನುಭವಿಸಿಕೊಂಡು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು.

ತುಳಿತಕ್ಕೆ ಒಳಗಾದ ಜನರಿಗೆ ಮೀಸಲಾತಿ ನೀಡುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ, ಮೀಸಲಾತಿ ಸೌಲಭ್ಯ ಕನಿಷ್ಠ ಹತ್ತು ವರ್ಷಗಳ ಕಾಲ ಮಾತ್ರ ಇರಬೇಕೆಂದು ಬಯಸಿದ್ದರು. ಆದರೆ, ಇಂದು ಶ್ರೀಮಂತರು, ಅಧಿಕಾರಿ ವರ್ಗ, ರಾಜಕಾರಣಿಗಳು ಮೀಸಲಾತಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರು ಒಂಬತ್ತು ಬಾರಿ ಶಾಸಕರು, ನಂತರ, ಸಂಸದರು, ರಾಜ್ಯಸಭೆ ಸದಸ್ಯರು, ಅದೇ ರೀತಿ ಅವರ ಮಕ್ಕಳು, ಮೊಮ್ಮಕ್ಕಳು ಮೀಸಲಾತಿಯನ್ನು ಇನ್ನೂ ಪಡೆಯುತ್ತಿದ್ದಾರೆ. ಬರೀ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೊಟ್ಟು ಮಾಡಿ ಹೇಳಿದ್ದಲ್ಲ, ಎಲ್ಲಾ ಪಕ್ಷಗಳ ನಾಯಕರು ಮತ್ತು ಬೇರೆ ಕ್ಷೇತ್ರದಲ್ಲಿ ಇರುವ ಮಂದಿಯೂ ಅದೇ ರೀತಿ ಮಾಡುತ್ತಿದ್ದಾರೆ. ಕಡು ಬಡವರಿಗೆ ಮೀಸಲಾತಿ ದೊರೆಯಬೇಕು ಎಂದರೆ ಮೊದಲು ಉಳ್ಳವರನ್ನು ದೂರ ಇಡಬೇಕು. ಇಲ್ಲದಿದ್ದರೆ ಯಾವುದೇ ಪ್ರಯೋಜನವಾಗಲ್ಲ. ಈ ವಿಚಾರದಲ್ಲಿ ರಾಜಕಾರಣಿಗಳು ಮೊದಲು ನಿರ್ಧರಿಸಬೇಕು ಎಂದು ಸಲಹೆ ನೀಡಿದರು.

ಕೇಂದ್ರಕ್ಕೆ ಕೃತಜ್ಞತೆ: ಬೆಟ್ಟಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸಿ ನಾಲ್ಕು ದಶಕಗಳಿಂದ ಹೋರಾಟ ನಡೆದಿತ್ತು. ಬೆಟ್ಟಕುರುಬ ಸಮುದಾಯಕ್ಕೆ ಈಗ ಮೀಸಲಾತಿ ಕಲ್ಪಿಸಿರುವ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಬೆಟ್ಟ ಕುರುಬರನ್ನು ಎಸ್‌ಟಿಗೆ ಸೇರಿಸುವಂತೆ ಕಾಗಿನೆಲೆ ಮಹಾಸಂಸ್ಥಾನ ಮಠದ ಶ್ರೀಗಳ ನೇತೃತ್ವದಲ್ಲಿ ಬೃಹತ್ ಪಾದಯಾತ್ರೆ ನಡೆಸಲಾಗಿತ್ತು. ಇತರ ಹಿಂದುಳಿದ ಸಮುದಾಯಗಳನ್ನು ಗುರುತಿಸಿ, ಮೀಸಲು ಕಲ್ಪಿಸಬೇಕು ಎಂದು ಹೇಳಿದರು. ಆರ್ಥಿಕ,ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಪಡೆದುಕೊಂಡ ಬಳಿಕ ಮೀಸಲಾತಿ ನೀಡಲು ಮುಂದಾಗಬೇಕು. ಈ ವಿಚಾರದಲ್ಲಿ ಮುಂದೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

ಸಚಿವ ಸ್ಥಾನ ಸಿಕ್ಕಿಲ್ಲವೆಂದು ಅಧಿವೇಶನದಿಂದ ದೂರ ಉಳಿದಿಲ್ಲ. ಸೋಮವಾರ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಭೇಟಿ ಮಾಡಿ ಮತ್ತೆ ಸಕ್ರಿಯವಾಗುತ್ತೇನೆ.ಮಂತ್ರಿ ಸ್ಥಾನ ಕೊಟ್ಟರೆ ಕೆಲಸ ಮಾಡುತ್ತೇನೆ. ಇಲ್ಲದಿದ್ದರೂ ಪರವಾಗಿಲ್ಲ. ನಾಲ್ಕೈದು ತಿಂಗಳು ಮಂತ್ರಿಯಾಗದಿದ್ದರೆ ಯಾವ ಸಮಸ್ಯೆನೂ ಇಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಬಾಲಭವನ ಮಾಜಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜು, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ನಗರಾಧ್ಯಕ್ಷ ಜೋಗಿ ಮಂಜು, ಪಾಲಿಕೆ ನಾಮನಿರ್ದೇಶಿತ ಸದಸ್ಯ ಕೆ.ಜೆ.ರಮೇಶ್, ರಾಜ್ಯ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸುರೇಶ್‌ಬಾಬು, ಸಂಯೋಜಕ ವೆಂಕಟೇಶ್ ಇನ್ನಿತರರು ಇದ್ದರು.

ಕ್ಲೀನ್‌ಚಿಟ್ ಸಿಕ್ಕಿದ ಮೇಲೆ ಮಂತ್ರಿ ಸಿಗದಿದ್ದಕ್ಕೆ ಬೇಸರ

ನನ್ನ ವಿರುದ್ಧ ಆರೋಪ ಕೇಳಿ ಬರುತ್ತಿದ್ದಂತೆ ರಾಜ್ಯ ಮತ್ತು ಕೇಂದ್ರದ ನಾಯಕರ ಅನುಮತಿ ಪಡೆದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದೆ. ಪ್ರಕರಣದಿಂದ ಕ್ಲೀನ್ ಚಿಟ್ ಸಿಕ್ಕ ನಂತರ ಮತ್ತೆ ಸಚಿವ ಸ್ಥಾನ ನೀಡುವ ವಿಶ್ವಾಸವಿತ್ತು. ಹಿರಿಯರು ರಾಜೀನಾಮೆ ಕೊಡಬೇಡ ಅಂತ ಹೇಳಿದ್ದರೂ ನನ್ನ ಮನಸ್ಸು ಒಪ್ಪದ ಕಾರಣಕ್ಕಾಗಿ ಕೊಟ್ಟಿದ್ದರಿಂದ ಸಚಿವ ಸ್ಥಾನ ನೀಡಬೇಕಿತ್ತು. ಆದರೆ ಮತ್ತೆ ಸಚಿವ ಸ್ಥಾನ ನೀಡದಿರುವುದರಿಂದ ಸಹಜವಾಗಿಯೇ ಅಸಮಾಧಾನವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಕರಕುಶಲ ವಸ್ತುಪ್ರದರ್ಶನ ಮೇಳ





ಮೈಸೂರು, ಸೆ.16(ಎಂಕೆ)- ಮೈಸೂರಿನ ಹೆಬ್ಬಾಳ ಸಮೀಪದ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಹಮ್ಮಿಕೊಂಡಿರುವ 'ಗಾಂಧಿ ಶಿಲ್ಪ ಬಜಾರ್ ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ'ಕ್ಕೆ ಭಾರತ ಸರ್ಕಾರ ಜವಳಿ ಮಂತ್ರಾಲಯದ ಸಹಾಯಕ ಕಾರ್ಯದರ್ಶಿ ನಿಧಿ ಬನ್ಸಾಲ್ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗಾಂಧಿ ಶಿಲ್ಪ ಬಜಾರ್ ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ 120ಕ್ಕೂ ಹೆಚ್ಚು ಮಳಿಗೆಗಳಿದ್ದು, ದೇಶದ ವಿವಿಧ ರಾಜ್ಯಗಳ ಸುಪ್ರಸಿದ್ಧ ಕರಕುಶಲ ಕಲೆಗಳನ್ನು ಅನಾವರಣಗೊಳಿಸಲಾಗಿದೆ. ಕೈಗೆಟಕುವ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದ್ದು, ಮೈಸೂರಿನ ಜನತೆ ಹಾಗೂ ಪ್ರವಾಸಿಗರು ಸದುಪಯೋಗ ಪಡೆದುಕೊಳ್ಳುವಂತೆ ಕೋರಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಮಾತನಾಡಿ, ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯದ ಸಹಯೋಗದೊಂದಿಗೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ. ದಸರಾ ಸಂದರ್ಭದಲ್ಲಿ ಮೈಸೂರಿಗೆ ಆಗಮಿಸುವ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಬಹುದಾಗಿದೆ ಎಂದರು.

ಮೇಳದಲ್ಲಿ ವಿವಿಧ ರಾಜ್ಯಗಳ ಕುಶಲಕರ್ಮಿಗಳು ಬಳಕೆದಾರರ ಅಗತ್ಯ ಹಾಗೂ ಅಭಿರುಚಿ ಅರಿತು ಮಾರುಕಟ್ಟೆಗೆ ಬೇಕಾದ ವಿನ್ಯಾಸ ವಸ್ತುಗಳನ್ನು ರೂಪಿಸಿ ಮಾರಾಟಕ್ಕಿಡಲಾಗಿದೆ. ಮರದ ಕೆತ್ತನೆ, ಮರದ ಕುಂದಣ ಕಲೆ, ಶಿಲಾ ಶಿಲ್ಪ, ಕಂಚಿನ ವಿಗ್ರಹ, ರತ್ನಗಂಬಳಿ, ಹತ್ತಿ ಜಮಖಾನ, ಅನುಕರಣೆ ಆಭರಣ, ಮರದ ಅಲಗಿನ ಕಲಾ ವಸ್ತುಗಳು, ಬಾಟಿಕ್, ಕಲಾಂಕರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಛತ್ತೀಸ್‌ಘಡದ ಧೋಕ್ರಾ, ಎರಕದ ವಸ್ತುಗಳು, ಮೇಘಾಲಯದ ಬಿದಿರಿನ ಕಲೆ, ರಾಜಸ್ತಾನದ ಕರಕುಶಲ ವಸ್ತುಗಳು ದೊರೆಯಲಿವೆ.

ಜೆಎಸ್‌ಎಸ್ ಮಹಾವಿದ್ಯಾಪೀಠ ಹಣಕಾಸು ವಿಭಾಗದ ನಿರ್ದೇಶಕರಾದ ಎಸ್.ಪುಟ್ಟಸುಬ್ಬಪ್ಪ, ಪ್ರೊ.ಮೊರಬದ ಮಲ್ಲಿಕಾರ್ಜುನ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ, ಕರಕುಶಲ ಸೇವಾಕೇಂದ್ರದ ಸಹಾಯಕ ನಿರ್ದೇಶಕ ಕೆ.ಎಸ್.ಸುನೀಲ್‌ಕುಮಾರ್, ಸಂಯೋಜಕ ಶಿವನಂಜಸ್ವಾಮಿ ಮತ್ತಿತರರಿದ್ದರು.

ಬಂಜಾರ ಸೇರಿದಂತೆ ಇನ್ನಿತರ ತಳ ಸಮುದಾಯಗಳ

ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ

ಬಂಜಾರ ಸಮುದಾಯದ ಮುಖಂಡ, ಮಾಜಿ ಸಚಿವ ಕೆ.ಶಿವಮೂರ್ತಿ ಆಗ್ರಹ



ಮೈಸೂರು,ಸೆ.16(ಪಿಎಂ)- ರಾಜ್ಯದಲ್ಲಿ ಬಂಜಾರ (ಲಂಬಾಣಿ) ಸೇರಿದಂತೆ ಇನ್ನಿತರೆ ತಳ ಸಮುದಾಯಗಳು ವಾಸ ಮಾಡುತ್ತಿರುವ ತಾಂಡ, ಹಟ್ಟಿ, ಹಾಡಿ, ಪಾಳ್ಯ ಮೊದಲಾದ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರ ಕ್ರಮ ವಹಿಸಬೇಕು ಎಂದು ಬಂಜಾರ ಸಮುದಾಯದ ಮುಖಂಡ ಹಾಗೂ ಮಾಜಿ ಸಚಿವ ಕೆ.ಶಿವಮೂರ್ತಿ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಂಡ, ಹಾಡಿ, ದೊಡ್ಡಿ, ಹಟ್ಟಿ, ಪಾಳ್ಯ ಹೀಗೆ ನಾನಾ ಪ್ರದೇಶಗಳಲ್ಲಿ ತಳ ಸಮುದಾಯಗಳು ವಾಸ ಮಾಡುತ್ತಿವೆ. ಸರ್ಕಾರದ ದಾಖಲೆಗಳ ಪ್ರಕಾರ ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾಗದ ಇಂತಹ ಪ್ರದೇಶಗಳ ಸಂಖ್ಯೆ ರಾಜ್ಯದಲ್ಲಿ 3,227 ಇವೆ. ಈ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸದ ಹಿನ್ನೆಲೆಯಲ್ಲಿ ಇಲ್ಲಿನ ನಿವಾಸಿಗಳು ಮೂಲಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ತಮ್ಮ ಭಾರತ್ ಜೋಡೋ ಯಾತ್ರೆಯಲ್ಲಿ ಈ ಸಮುದಾಯಗಳೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಗಳನ್ನು ಆಲಿಸಬೇಕು. ಬಂಜಾರ ಸಮುದಾಯವನ್ನು ಬ್ರಿಟಿಷರು ತಮ್ಮ ಆಡಳಿತಾವಧಿಯಲ್ಲಿ ಕ್ರಿಮಿನಲ್ ಆಕ್ಟ್‌ನಡಿ ಸೇರಿಸಿದ್ದರು. ಇದರಿಂದ ಈ ಸಮುದಾಯದ ಪ್ರದೇಶದಿಂದ ಪ್ರದೇಶಕ್ಕೆ ಹೋಗಿ ತಮ್ಮ ವ್ಯಾಪಾರ ವಹಿವಾಟು ನಡೆಸಲಾಗದೇ ಒಂದು ಸ್ಥಳದಲ್ಲೇ ಉಳಿಯುವಂತಾಯಿತು ಎಂದರು.

ಈ ತಳ ಸಮುದಾಯಗಳನ್ನು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಪಾಲುದಾರರೇ ಅಲ್ಲ ಎನ್ನುವಂತೆ ನೋಡಲಾಗುತ್ತಿದೆ. ಎಲ್ಲಿಯವರೆಗೆ ಇವರಿಗೆ ಸೂಕ್ತ ದಾಖಲೆಗಳನ್ನು ಒದಗಿಸುವುದಿಲ್ಲವೋ ಅಲ್ಲಿಯವರೆಗೆ ಈ ಸಮುದಾಯಗಳು ನಮ್ಮ ಸಮಾಜದಲ್ಲಿ 2ನೇ ದರ್ಜೆ ಪ್ರಜೆಗಳಾಗಿ ಸಂಕಷ್ಟದ ಬದುಕು ಮಾಡಬೇಕಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್ ಮುಖಂಡ ಮೈಸೂರು ಬಸವಣ್ಣ, ಬಂಜಾರ ಸಮುದಾಯದ ಮುಖಂಡರಾದ ದೇವೀರ್ ನಾಯಕ, ಕೋಟೆ ಕೃಷ್ಣನಾಯಕ, ರವಿ ನಾಯಕ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅಪೋಲೊ ಆಸ್ಪತ್ರೆಯಲ್ಲಿ ಬಾಲಕನಿಗೆ ಯಶಸ್ವಿ ವಿಪ್ಪಲ್ಸ್ ಸರ್ಜರಿ



ಮೈಸೂರು,ಸೆ.16(ಪಿಎಂ)- ಮೈಸೂರಿನ ಅಪೊಲೊ ಬಿಜಿಎಸ್ ಆಸ್ಪತ್ರೆಯಲ್ಲಿ ತೀರಾ ಸಂಕೀರ್ಣ ಮತ್ತು ಅಪರೂಪದ ವಿಪ್ಪಲ್ಸ್ ಸರ್ಜರಿ (ಶಸ್ತ್ರಚಿಕಿತ್ಸೆ) ಮಾಡುವ ಮೂಲಕ 14 ವರ್ಷದ ಬಾಲಕನೊಬ್ಬನಿಗೆ ಮರುಜನ್ಮ ನೀಡಲಾಗಿದೆ. ಇದು ಇಡೀ ರಾಜ್ಯದಲ್ಲಿಯೇ ಅತಿ ಕಿರಿಯ ವ್ಯಕ್ತಿಗೆ ಮಾಡಿದ ಅಪರೂಪದ ವಿಪ್ಪಲ್ಸ್ ಸರ್ಜರಿಯಾಗಿದೆ ಎಂದು ಆಸ್ಪತ್ರೆಯ ಚೀಫ್ ಗ್ಯಾಸ್ಟ್ರೋ ಇಂಟೆಸ್ಟೆನಲ್ ಸರ್ಜನ್ ಡಾ.ಎಸ್.ನೈರುತ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನಾಲ್ಕು ವರ್ಷಗಳಿಂದ ಈ ಬಾಲಕ ಹೊಟ್ಟೆ ನೋವಿನಿಂದ ಬಳಲುತ್ತಿದ್ದ. ಇತ್ತೀಚಿನ ದಿನಗಳಲ್ಲಿ ಇದು ತೀರಾ ಗಂಭೀರವಾಗಿತ್ತು ಎಂಡೋಸ್ಕೋಪಿಕ್ ಅಲ್ಟ್ರಾಸೌಂಡ್ ಸ್ಕ್ಯಾನ್ ಮಾಡಿದಾಗ ಮೇದೋಜ್ಜೀರಕ ಗ್ರಂಥಿಯ ತಲೆ ಭಾಗದಲ್ಲಿ 7X6 ಸೆಂ.ಮೀ. ಗಾತ್ರದ ಸಂಕೀರ್ಣವಾದ ಸಿಸ್ಟಿಕ್ ಗಡ್ಡೆ ಪತ್ತೆಯಾಯಿತು ಎಂದರು.

ಮಾನವ ದೇಹದ ಈ ನಿರ್ದಿಷ್ಟ ಭಾಗವು ಸಂಕೀರ್ಣ ಅಂಗರಚನೆಯಾಗಿರುತ್ತದೆ. ಹೀಗಾಗಿ ಶಸ್ತ್ರಚಿಕಿತ್ಸೆಯು ಸುಮಾರು 6 ಗಂಟೆಗಳ ಕಾಲ ನಡೆಯಿತು. ಶಸ್ತ್ರಚಿಕಿತ್ಸೆಯ ನಂತರ ಗಡ್ಡೆಯನ್ನು ಯಶಸ್ವಿಯಾಗಿ ಹೊರ ತೆಗೆಯಲಾಗಿದ್ದು, ಸದರಿ ಗಡ್ಡೆಯಲ್ಲಿ ಯಾವುದೇ ಕ್ಯಾನ್ಸರ್ ಕಣಗಳು ಕಂಡು ಬಂದಿಲ್ಲ. ಹೀಗಾಗಿ ಭವಿಷ್ಯದಲ್ಲಿಯೂ ಬಾಲಕನಿಗೆ ಯಾವುದೇ ತೊಂದರೆ ಇಲ್ಲ ಎಂದು ತಿಳಿಸಿದರು.

ಆಸ್ಪತ್ರೆಯ ಹೆಪಟೊ ಬಿಲಿಯರಿ ಮತ್ತು ಲಿವರ್ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ.ವಿ.ಯಶವಂತಕುಮಾರ್ ಮಾತನಾಡಿ, ಬಾಲಕನನ್ನು ಶಸ್ತ್ರಚಿಕಿತ್ಸೆ ಬಳಿಕ ವಾರದೊಳಗೆ ಡಿಸ್‌ಚಾರ್ಜ್ ಮಾಡಲಾಯಿತು. ಈತನ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಈ ಶಸ್ತ್ರಚಿಕಿತ್ಸೆ ನಮ್ಮ ಭಾಗದಲ್ಲಿ ಅತಿ ವಿರಳವಾಗಿದ್ದು, ಇಂತಹ ತೊಂದರೆ ಇರುವವರಿಗೆ ನಮ್ಮ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆಯ ವ್ಯವಸ್ಥೆ ಇದೆ ಎಂದು ಹೇಳಿದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅಮನ್‌ನಾಯಕ್, ಮುಖ್ಯ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ.ಅಥಿರಾ ರವೀಂದ್ರನಾಥ್ ಗೋಷ್ಠಿಯಲ್ಲಿದ್ದರು.

ಉದ್ಯೋಗ ಮೇಳ ಕಾರ್ಯಕ್ರಮ

ಮೈಸೂರು, ಸೆ16- ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ವತಿಯಿಂದ ಸೆಪ್ಟೆಂಬರ್ 24ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ.

ಉದ್ಯೋಗ ಮೇಳದಲ್ಲಿ ಹೆಸರಾಂತ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು 18 ರಿಂದ 35 ವರ್ಷ ವಯೋಮಿತಿ ಹೊಂದಿದ್ದು, ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ, ಎಂ.ಬಿ.ಎ, ಸ್ನಾತಕೋತ್ತರ ಪಾಸ್ ಅಥವಾ ಫೇಲ್ ವಿದ್ಯಾರ್ಹತೆ ಅಂಕಪಟ್ಟಿ ಜೇರಾಕ್ಸ್ ಪ್ರತಿ, ಆಧಾರ್ ಕಾರ್ಡ್ ಪ್ರತಿ, ಸ್ವ-ವಿವರಯುಳ್ಳ 10 ಬಯೋಡೆಟಾ ಪ್ರತಿಗಳೊಂದಿಗೆ 1 ನೇ ಮೇನ್, 6ನೇ ಅಡ್ಡ ರಸ್ತೆ, ರಾಮಲಿಂಗೇಶ್ವರ ದೇವಸ್ಥಾನದ ಹತ್ತಿರ ವಿದ್ಯಾರಣ್ಯಪುರಂ ಇಲ್ಲಿ ಸಂದರ್ಶಕ್ಕೆ ಹಾಜರಾಗಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮೈಸೂರು-07 ಅನ್ನು ಸಂಪರ್ಕಿಸಬಹುದು ಅಥವಾ ದೂ.ಸಂ: 0821-2489972 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.19ರಂದು ವಿಶೇಷ ಕೌನ್ಸಿಲ್ ಸಭೆ

ಮೈಸೂರು, ಸೆ.16- ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಸೆಪ್ಟೆಂಬರ್ 19ರಂದು ಸೋಮವಾರ ಮಧ್ಯಾಹ್ನ 3 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2022ನೇ ಸಾಲಿನ ನಾಡಹಬ್ಬ ಮೈಸೂರು ದಸರಾ ಬಗ್ಗೆ ಚರ್ಚಿಸಲು ವಿಶೇಷ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4 ದಿನಗಳ ಮೈರಿಯಾಲ್ಟಿ ಮೆಗಾ ಪ್ರಾಪರ್ಟಿ ವಸ್ತುಪ್ರದರ್ಶನ ಉದ್ಘಾಟನೆ

ಮೈಸೂರು ಪ್ರಥಮ ಸ್ವಚ್ಛ ನಗರ ಗರಿಗೆ ಸಹಕರಿಸುವಂತೆ ಶಿವಕುಮಾರ್ ಕರೆ



ಮೈಸೂರು, ಸೆ. 16 (ಆರ್‌ಕೆ)- ಮೈಸೂರಿನ ದಿ ಕಾಸ್ಮೋಪಾಲಿಟನ್ ಕ್ಲಬ್ (ಸಿಸಿ ಕ್ಲಬ್) ಆವರಣದಲ್ಲಿ ಇಂದಿನಿಂದ ಆರಂಭವಾದ ನಾಲ್ಕು ದಿನಗಳ ಮೈರಿಯಾಲ್ಟಿ ಮೆಗಾ ಪ್ರಾಪರ್ಟಿ ವಸ್ತು ಪ್ರದರ್ಶನವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ), ಕ್ರೆಡಾಯ್ ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ವಸ್ತು ಪ್ರದರ್ಶನದಲ್ಲಿ ಮೈರಿಯಾಲ್ಟಿ 2022ರ ಬ್ಯಾನರ್ ಅನ್ನು ಮೇಯರ್ ಇದೇ ವೇಳೆ ಅನಾವರಣ ಮಾಡಿದ ಬಳಿಕ ಕಟ್ಟಡ ನಿರ್ಮಾಣ ಪರಿಕರಗಳು, ವಿವಿಧ ಡೆವಲಪರ್ ಸಂಸ್ಥೆಗಳ ಮಳಿಗೆಗಳನ್ನು ವೀಕ್ಷಿಸಿದರು.

ಮೈರಿಯಾಲ್ಟಿ 2022ರ ಅಧ್ಯಕ್ಷ ಡಿ. ಶ್ರೀಹರಿ, ಬಿಎಐ ಮೈಸೂರು ಸೆಂಟರ್ ಅಧ್ಯಕ್ಷ ಆರ್. ರಘುನಾಥ್, ಕ್ರೆಡಾಯ್ ಮೈಸೂರು ಚಾಪ್ಟರ್ ಅಧ್ಯಕ್ಷ ಎನ್.ಎಸ್. ಮುರಳೀಧರ, ಸಮಿತಿಯ ರಾಷ್ಟ್ರೀಯ ಸಂಚಾಲಕ ಕೆ. ಶ್ರೀರಾಮ್, ಕಾಸ್ಮೋಪಾಲಿಟನ್ ಕ್ಲಬ್ ಅಧ್ಯಕ್ಷ ಗಿರೀಶ್‌ಗೌಡ, ಮೈರಿಯಾಲ್ಟಿ 2022ರ ಕಾರ್ಯದರ್ಶಿ ಕೆ.ಎನ್. ರವಿಶಂಕರ್, ಬಿಎಐ ಕಾರ್ಯದರ್ಶಿ ವಿ. ಶ್ರೀನಾಥ್, ಕ್ರೆಡಾಯ್ ಕಾರ್ಯದರ್ಶಿ ಎಂ.ಎಸ್. ಹರೀಶ್ ಶೆಣೈ, ಎಲ್. ಅರುಣ್ ಪಂಡಿತ್, ಉದಯಕುಮಾರ್ ಹಾಗೂ ಇತರರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಮೇಯರ್ ಶಿವಕುಮಾರ್ ಅವರು, ಮೈಸೂರು ಸಾಂಸ್ಕೃತಿಕ ನಗರಿ, ಪಾರಂಪರಿಕ ನಗರ ಎಂದೆಲ್ಲಾ ಖ್ಯಾತಿಯಾಗಿದೆ. ರೈಲ್ವೆ, ಹೆದ್ದಾರಿ, ವಿಮಾನ ಹಾರಾಟದ ಸೌಲಭ್ಯದೊಂದಿಗೆ ಸಂಪರ್ಕ ಉತ್ತಮವಾಗಿದೆ. ಮೈಸೂರು ಪ್ರಥಮ ಸ್ವಚ್ಛ ನಗರ ಬಿರುದು ಬಂದಿದ್ದು, ನಂತರದ ವರ್ಷಗಳಲ್ಲಿ ಆ ಸ್ಥಾನ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದನ್ನು ಮರಳಿ ಪಡೆಯಲು ಎಲ್ಲರೂ ಕೈಜೋಡಿಸಬೇಕೆಂದು ಅವರು ಕರೆ ನೀಡಿದರು.

ಮೈಸೂರನ್ನಾಳಿದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿ. ವಿಶ್ವೇಶ್ವರಯ್ಯ ಅವರು ಯೋಜನಾಬದ್ಧವಾಗಿ ನಗರವನ್ನು ಅಭಿವೃದ್ಧಿಪಡಿಸಿದ್ದರು. ಬಡಾವಣೆ ನಿರ್ಮಿಸಿ ನಿವೇಶನ ರಚಿಸುವಾಗ ನೀರು, ರಸ್ತೆ, ಚರಂಡಿ, ಉದ್ಯಾನವನದಂತಹ ಮೂಲ ಸೌಲಭ್ಯಗಳಿಗೆ ಆದ್ಯತೆ ನೀಡಿ, ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ಬಿಎಐ, ಕ್ರೆಡಾಯ್ ಸಂಸ್ಥೆಗಳು ಕೈಜೋಡಿಸುವಂತೆ ಶಿವಕುಮಾರ್ ಮನವಿ ಮಾಡಿದರು.

ಬಡಾವಣೆ ರಚಿಸುವಾಗ ಸ್ಥಳೀಯರಿಗೆ ಅವಕಾಶ ನೀಡಿ ಕೌಶಲ್ಯಾಭಿವೃದ್ಧಿಪಡಿಸಿದಲ್ಲಿ ಅವರು ಆ ಕ್ಷೇತ್ರದಲ್ಲಿ ಮುನ್ನಡೆಯಲು ಅವಕಾಶ ನೀಡಿದಂತಾಗುವುದಲ್ಲದೆ, ಉತ್ತಮ ಗುಣಮಟ್ಟದ ಕೆಲಸವನ್ನು ಅವರಿಂದ ನಿರೀಕ್ಷಿಸಬಹುದಾಗಿದೆ ಎಂದೂ ಅವರು ಇದೇ ಸಂದರ್ಭ ಅಭಿಪ್ರಾಯಪಟ್ಟರು.

ಬ್ರಿಗೇಡ್, ಜಿ9 ಪವಮಾನ್, ನಕ್ಷತ್ರ ಇಂಡಿಯನ್ ಎಸ್ಟೇಟ್, ಯುಶ್ ಡೆವಲಪರ್ಸ್, ಎಮರಾಲ್ಡ್, ಹಾರಿಜಾನ್, ಬೀಗ್ರು ವೆಂಚರ್ಸ್, ಆವಿಷ್ಕಾರ ಪ್ರಾಪರ್ಟೀಸ್, ಆಕಾರ್ ಪ್ರಾಪರ್ಟೀಸ್, ಭೀಮಾ ಪ್ರಾಪರ್ಟೀಸ್, ಮಾನಸ ಟ್ರೆಂಡ್ಜ್, ಸಪ್ನ ಡೆವಲಪರ್ಸ್, ಜೆಎಸ್‌ಎಸ್, ಕ್ಯಾಲಿಬರ್, ರೈ ಎಸ್ಟೇಟ್, ಈಗಲ್ ಬರ್ಗ್, ಅಲಯನ್ಸ್ ಸ್ಕ್ವೇರ್, ಸ್ಕಿಲ್‌ಟೆಕ್ ಸೇರಿದಂತೆ ಹಲವು ಸಂಸ್ಥೆಗಳು ಎಸ್‌ಬಿಐ, ಐಸಿಐಸಿಐ, ಹೆಚ್‌ಡಿಎಫ್‌ಸಿ ಸೇರಿದಂತೆ ಪ್ರದರ್ಶನದಲ್ಲಿ ಮಳಿಗೆಗಳನ್ನು ತೆರೆದಿವೆ. ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 8.30 ಗಂಟೆಯವರೆಗೆ ಮೈರಿಯಾಲ್ಟಿ ಎಕ್ಸ್‌ಪೋ ತೆರೆದಿದ್ದು, ಸೆಪ್ಟೆಂಬರ್ 19ರಂದು ಮುಕ್ತಾಯಗೊಳ್ಳಲಿದೆ.

ಇಡಿ ವಿಚಾರದಲ್ಲಿ ಡಿಕೆಶಿ ಹೇಳಿಕೆಗೆ ಈಶ್ವರಪ್ಪ ಟಾಂಗ್!



ಮೈಸೂರು,ಸೆ.16(ಎಂಟಿವೈ)– ಜಾರಿ ನಿರ್ದೇಶನಾಲಯ (ಇಡಿ) ನೋಟಿಸ್ ಕೊಟ್ಟಿರುವುದನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 'ಕಿರುಕುಳ' ಎನ್ನುತ್ತಿರುವುದು ವಿಷಾದನೀಯ. ನೀವು ತಪ್ಪು ಮಾಡದೇ ಇದ್ದರೆ, ತಮ್ಮ ಬಳಿ ಇರುವ ಹಣ ನನ್ನದ್ದಲ್ಲ ಎಂದು ಬರೆದುಕೊಡುವಂತೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಸವಾಲು ಹಾಕಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಡಿ ಪದೇ ಪದೆ ಕಿರುಕುಳ ನೀಡುತ್ತಿದೆ, ನಾನು ತಪ್ಪಿತಸ್ಥನಾಗಿದ್ದರೆ ಗಲ್ಲಿಗೇರಿಸುವಂತೆಯೂ ಹೇಳಿಕೆ ನೀಡಿದ್ದಾರೆ. ಈ ಮಾತಿನ ಅರ್ಥ ಏನು? ಗಲ್ಲಿಗೇರಿಸಿ ಅನ್ನೋ ಹೇಳಿಕೆ ಗಮನಿಸಿದರೆ ಅವರು ತಪ್ಪು ಮಾಡಿದ್ದಾರೆ ಎಂದು ಅರ್ಥ. ಸಾವಿರಾರು ಕೋಟಿ ರೂ. ಸಂಪಾದಿಸಿರುವ ಡಿ.ಕೆ.ಶಿವಕುಮಾರ್, ತಮ್ಮ ಬಳಿ ಇರುವ ಕಂತೆ ಕಂತೆ ಹಣ ನನ್ನದ್ದಲ್ಲ ಎಂದು ಬರೆದುಕೊಡಲಿ. ಅದನ್ನು ಬಿಟ್ಟು ಇಡಿ ನೀಡಿದ ನೋಟಿಸ್ ಬಗ್ಗೆ ಪ್ರತಿಕ್ರಿಯಿಸಬಾರದು ಎಂದು ತಾಕೀತು ಮಾಡಿದರು.

ಡಿ.ಕೆ. ಶಿವಕುಮಾರ್ ಈಗಾಗಲೇ ಜೈಲಿಗೆ ಹೋಗಿ ಬಂದಿದ್ದಾರೆ. ಈಗ ಬೇಲ್ ಮೇಲೆ ಹೊರಗಿದ್ದಾರೆ. ನಿರಪರಾಧಿ ಎಂದು ಸಾಬೀತಾಗುವವರೆಗೂ ಈ ರೀತಿಯ ಹೇಳಿಕೆ ನೀಡಬಾರದು. ನಾನು ಅವರು ಆರೋಪ ಮುಕ್ತನಾಗಿ ಬರಲಿ ಎಂದು ಪ್ರಾರ್ಥಿಸುತ್ತೇನೆ. ಅಪರಾಧಿ ಅಂತ ಘೋಷಣೆಯಾದ ಮೇಲೆ ಶಿಕ್ಷೆ ಕೊಡುತ್ತಾರೆಯೇ ಹೊರತು ಮೊದಲೇ ಶಿಕ್ಷೆ ಕೊಡಲ್ಲ. ಹೊಸ ದಿಲ್ಲಿಯಲ್ಲಿ ಸಿಕ್ಕಿದ ಕಂತೆ ಕಂತೆ ನೋಟುಗಳು ನನ್ನದೇ ಅಂತ ಇಡಿ ಮುಂದೆ ಒಪ್ಪಿಕೊಳ್ಳಲಿ. ಮತಾಂತರ ನಿಷೇಧ ಕಾಯ್ದೆ ಮಂಡನೆ ವೇಳೆ ಬಿಲ್ ಪ್ರತಿಯನ್ನು ಹರಿದ ಕಾಂಗ್ರೆಸ್ ಕ್ರಮ ಖಂಡನೀಯ. ಇದು ಸಂವಿಧಾನಕ್ಕೆ ಮಾಡಿದ ಅಪಮಾನವಾಗಿದೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಓಲೈಸಲು ಕಾಂಗ್ರೆಸ್ ಸದಸ್ಯರು ಈ ರೀತಿ ಮಾಡಿದ್ದಾರೆ. ಅಖಂಡ ಭಾರತವನ್ನು ಒಡೆದಿದ್ದು ಕಾಂಗ್ರೆಸ್. ಈಗ ಅದನ್ನು ಜೋಡಿಸುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ಸಿನವರು ತಮ್ಮ ಸ್ಲೋಗನ್ ಬದಲಾವಣೆ ಮಾಡಿಕೊಂಡು ಕಾರ್ಯಕ್ರಮ ಮಾಡುವುದು ಒಳಿತು. ಹಿಂದೆ ಮಾಡಿದ ತಪ್ಪಿಗೆ ಪಶ್ಚಾತ್ತಾಪವಾಗಿ ಈ ಕಾರ್ಯಕ್ರಮ ಎಂದು ಹೇಳಬೇಕು. ಅಖಂಡ ಭಾರತ ಒಗ್ಗೂಡಬೇಕು. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಎಲ್ಲವೂ ಒಟ್ಟಾಗಿ ಅಖಂಡ ಭಾರತವಾಗಬೇಕು ಎಂದರು.

ಕರ ನಿರಾಕರಣ ವಿದ್ಯುತ್ ಬಾಕಿ ಮನ್ನಾ ಸೇರಿದಂತೆ

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ರೈತರ ಪ್ರತಿಭಟನೆ

ಮೀಟರ್ ಅಳವಡಿಸಲು ಬಂದರೆ ಒಂದೂ ಮೀಟರ್ ಉಳಿಯುವುದಿಲ್ಲ ; ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ ಎಚ್ಚರಿಕೆ



ಮೈಸೂರಿನ ಹಿನಕಲ್‌ನಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಮೈಸೂರು ಕೇಂದ್ರ ಕಚೇರಿ ಎದುರು ಶುಕ್ರವಾರ ರೈತರು ಪ್ರತಿಭಟನೆ ನಡೆಸಿದರು.

ಮೈಸೂರು,ಸೆ.16(ಪಿಎಂ)– ರಾಜ್ಯದ ಎಲ್ಲಾ ಗ್ರಾಮಗಳ ಕರ ನಿರಾಕರಣ ವಿದ್ಯುತ್ ಬಾಕಿ ಮನ್ನಾ ಮಾಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಿನಕಲ್‌ನಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಮೈಸೂರು ಕೇಂದ್ರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕರನಿರಾಕರಣೆಯ ಗೃಹ ವಿದ್ಯುತ್, ಕುಟೀರ ಜ್ಯೋತಿ, ಭಾಗ್ಯಜ್ಯೋತಿ ಬಾಕಿಗಳನ್ನು ಬಡ್ಡಿ ಒಳಗೊಂಡಂತೆ ಪೂರ್ಣ ಮನ್ನಾ ಮಾಡಬೇಕು. ರೈತರು ಮತ್ತು ಕಾಫಿ ಬೆಳೆಗಾರರ ಪಂಪ್‌ಸೆಟ್‌ಗಳಿಗೆ ಹೆಚ್‌ಪಿ ಮಿತಿ ಹಾಕದೇ ಉಚಿತ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.

ಕೃಷಿ ಕ್ಷೇತ್ರಕ್ಕೆ ಕನಿಷ್ಠ 12 ಗಂಟೆ ಹಗಲು 3 ಫೇಸ್ ವಿದ್ಯುತ್ ಕೊಡಬೇಕು. ಕೃಷಿ ಲಾಭದಾಯಕವಾಗುವವರೆಗೂ ರೈತರಿಗೆ ಮತ್ತು ಕಾರ್ಮಿಕರಿಗೆ ಶುಲ್ಕರಹಿತ ವಿದ್ಯುತ್ ಸರಬರಾಜು ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬಾರದು. ಕಾಫಿ ಬೆಳೆಗಾರರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಕೊಡಲು ಒಪ್ಪಿದ್ದ ಸರ್ಕಾರ, ಇದೀಗ ಮೀಟರ್ ಅಳವಡಿಸಲು ಮುಂದಾಗಿದೆ. ಈ ಕೂಡಲೇ ಇದನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಇದು ಸಾಂಕೇತಿಕ ಪ್ರತಿಭಟನೆ. ಸೆ.19ರಂದು ಇದೇ ಬೇಡಿಕೆಗಳ ವಿಚಾರವಾಗಿ ಮಂಡ್ಯದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. 10 ಸಾವಿರಕ್ಕೂ ಹೆಚ್ಚು ಮಂದಿ ರೈತರು ಸಮಾವೇಶದಲ್ಲಿ ಸೇರಲಿದ್ದಾರೆ. ನಮ್ಮ ಬೇಡಿಕೆ ಈಡೇರಿಸದಿದ್ದರೆ ತೀವ್ರತರ ಹೋರಾಟ ಸಂಬಂಧ ಈ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಗುವುದು ಎಂದು ಹೇಳಿದರು.

ರೈತರು ಎಂದರೆ ಮೂರನೇ ದರ್ಜೆ ಎಂದು ಭಾವಿಸಿದಂತೆ ಕಾಣುತ್ತದೆ. ರಾಜ್ಯದಲ್ಲಿ ಬಹುಸಂಖ್ಯಾತರು ಸಣ್ಣ ಹಿಡುವಳಿದಾರರೇ ಇದ್ದಾರೆ. ಈ ಸಣ್ಣ ಹಿಡುವಳಿದಾರರೇ ದೇಶಕ್ಕೆ ಅನ್ನ ಹಾಕುತ್ತಿರುವವರು. ರೈತರು ಯಾವಾಗಲೂ ಕೊಟ್ಟವರೇ ಹೊರತು ಪಡೆದವರಲ್ಲ ಎಂದರು.

102 ಕಾರ್ಪೋರೇಟ್ ಉದ್ಯಮಿಗಳ 9 ಲಕ್ಷ 91 ಸಾವಿರ ಕೋಟಿ ಸಾಲವನ್ನು ಮನ್ನಾ ಮಾಡಲಾಗಿದೆ. ಇದನ್ನು ಸಂಸತ್‌ನಲ್ಲಿ ಹಣಕಾಸು ರಾಜ್ಯ ಸಚಿವ ತಿಳಿಸಿದ್ದಾರೆ. ದೇಶ ಮುಳುಗಿಸುವವರು ಇಂತಹ ಉದ್ಯಮಿಗಳೇ ಹೊರತು ರೈತರಲ್ಲ. ಕೋವಿಡ್ ಇದ್ದರೂ ರೈತರು ವ್ಯವಸಾಯ ಮಾಡಿ ಹೆಚ್ಚು ಉತ್ಪಾದನೆ ಮಾಡಿದ್ದಾರೆ. ಆ ಮೂಲಕ ದೇಶದ ಜನತೆಗೆ ಆಹಾರ ಭದ್ರತೆ ಒದಗಿಸಿದ್ದಾರೆ. ಇಂದು ಬ್ರಿಟಿಷರ ತಳಿಗಳು ಸರ್ಕಾರ ನಡೆಸುತ್ತಿವೆ. ಇವರಿಗೆ ಅನ್ನದ ಋಣ ಗೊತ್ತಿಲ್ಲ. ಬೆವರಿನ ಶ್ರಮ ಗೊತ್ತಿಲ್ಲದೇ ಜನಸಾಮಾನ್ಯರು, ರೈತರ ವಿರೋಧಿಯಾಗಿ ವರ್ತನೆ ಮಾಡುತ್ತಿವೆ ಎಂದು ಕಿಡಿಕಾರಿದರು.

ವಿದ್ಯುತ್ ಖಾಸಗೀಕರಣವಾದರೆ ಕೇವಲ ರೈತರಿಗೆ ಮಾತ್ರ ತೊಂದರೆ ಅಲ್ಲ. ವಿದ್ಯುತ್ ಕ್ಷೇತ್ರದ ಇಂಜಿನಿಯರ್ ಸೇರಿದಂತೆ ನೌಕರರ ಸೇವಾ ಭದ್ರತೆಗೂ ಕುತ್ತು ಎದುರಾಗಲಿದೆ. ಹಾಗಾಗಿ ಅವರೂ ನಮ್ಮೊಂದಿಗೆ ಹೋರಾಟ ನಡೆಸಲು ಸಿದ್ಧವಿದ್ದಾರೆ. ರೈತರು ವಿದ್ಯುತ್ ಖಾಸಗೀಕರಣ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಿದ್ದು, ಇದಕ್ಕೆ 42 ಸಂಘಟನೆಗಳ ಬೆಂಬಲವಿದೆ. ಯಾವುದೇ ಕಾರಣಕ್ಕೂ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಲು ಅವಕಾಶ ಕೊಡುವುದಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಗುಂಡೂರಾವ್, ಎಸ್‌ಆರ್ ಬೊಮ್ಮಾಯಿ ಅವರನ್ನು ಅಧಿಕಾರದಿಂದ ಇಳಿಸಿ ರೈತರು ಪಾಠ ಕಲಿಸಿದ್ದಾರೆ. ಇದನ್ನು ಪ್ರಧಾನಿ ನರೇಂದ್ರ ಮೋದಿಯವರು ಅರ್ಥ ಮಾಡಿಕೊಳ್ಳಬೇಕು. ಮೀಟರ್ ಅಳವಡಿಸಲು ಬಂದರೆ ಒಂದೂ ಮೀಟರ್ ಸಹ ಉಳಿಯುವುದಿಲ್ಲ ಎಂದು ಎಚ್ಚರಿಸಿದರು.

ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ್ ಪ್ರಭು ಮಾತನಾಡಿ, ದೇಶದಲ್ಲಿ ಯಾವುದೇ ಸರ್ಕಾರದ ನೆರವಿಲ್ಲದೆ ರೈತರು ಪ್ರತಿವರ್ಷ ಒಂದೂವರೆ ಲಕ್ಷ ಕೋಟಿ ರೂಪಾಯಿಗಳನ್ನು ಕೃಷಿಯ ಮೇಲೆ ಹೂಡುತ್ತಿದ್ದಾರೆ. ಆ ಮೂಲಕ ಆಹಾರದ ಭದ್ರತೆಯನ್ನು ಒದಗಿಸುತ್ತಿದ್ದಾರೆ. ಹೀಗಾಗಿ ಸರ್ಕಾರ ರೈತರಿಗೆ ಸಹಾಯ ಮಾಡುವ ಕೆಲಸಗಳನ್ನು ಮಾಡಬೇಕೇ ಹೊರತು ಅವರಿಗೆ ತೊಂದರೆ ಕೊಡುವ ಕೆಲಸ ಮಾಡಬಾರದು. ಒಂದು ವೇಳೆ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಿದರೆ ಅದನ್ನು ಕಿತ್ತು ಹಾಕುತ್ತೇವೆ ಎಂದು ಕಿಡಿಕಾರಿದರು.

ಇದೇ ವೇಳೆ ವಿದ್ಯುತ್ ಖಾಸಗೀಕರಣ ಮಸೂದೆಯ ಪ್ರತಿಯನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಮನವಿ ಸ್ವೀಕರಿಸಿದರು. ಬಳಿಕ ಪ್ರತಿಭಟನೆ ಕೈಬಿಡಲಾಯಿತು. ಸಂಘದ ಮುಖಂಡರಾದ ಅಶ್ವತ್ಥ ನಾರಾಯಣ ರಾಜೇ ಅರಸ್, ಪ್ರಸನ್ನ ಎನ್.ಗೌಡ, ಮನು ಸೋಮಯ್ಯ, ಹೊಸೂರು ಕುಮಾರ್, ಹೊಸಕೋಟೆ ಬಸವರಾಜು, ಮಂಡಕಳ್ಳಿ ಮಹೇಶ್ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹೂಟಗಳ್ಳಿಯಲ್ಲಿ ಪೋಷಣ್ ಮಾಸಾಚರಣೆ



ಮೈಸೂರು,ಸೆ.16(ಪಿಎಂ)– ಹೂಟಗಳ್ಳಿ ಗ್ರಾಮದಲ್ಲಿ ಶುಕ್ರವಾರ ಪೋಷಣ್ ಮಾಸಾಚರಣೆ ಅಂಗವಾಗಿ ಗರ್ಭಿಣಿಯರಿಗೆ ಸಿಮಂತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಿಪಂ ಮಾಜಿ ಸದಸ್ಯೆ ಚಂದ್ರಕಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ತರಕಾರಿಗಳು, ಸೊಪ್ಪು ಹೆಚ್ಚಾಗಿ ಸೇವಿಸುವಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಮಾಹಿತಿ ನೀಡಲಾಯಿತು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುಳಾ ಪಾಟೀಲ್, ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ರಾಘವೇಂದ್ರ ಅನ್ನ ದಾಸೋಹ ನಿರ್ದೇಶಕ ರೇವಣ್ಣ ಮತ್ತಿತರರು ಹಾಜರಿದ್ದರು.

ಪ್ರಧಾನಿ ನರೇಂದ್ರ ಮೋದಿಯವರಿಗೆ ಜನ್ಮದಿನದ ಶುಭಾಶಯ ಕೋರಿದ ಸಂಸದ ಶ್ರೀನಿವಾಸ ಪ್ರಸಾದ್





ಮೈಸೂರು,ಸೆ.16(ಪಿಎಂ)– ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಚಾಮರಾಜ ನಗರ ಸಂಸದ ವಿ. ಶ್ರೀನಿವಾಸ ಪ್ರಸಾದ್ ಜನ್ಮದಿನದ ಶುಭಾಶಯ ಕೋರಿದ್ದಾರೆ. ಕಳೆದ 8 ವರ್ಷಗಳಲ್ಲಿ ನಿಮ್ಮ ಅನುಕರಣೀಯ ನಾಯಕತ್ವಕ್ಕಾಗಿ ತಮಗೆ ಧನ್ಯವಾದ ಸಲ್ಲಿಸುತ್ತೇನೆ. ಈ ತಮ್ಮ ಜನ್ಮದಿನದ ಸುಸಂದರ್ಭ ಬಳಸಿಕೊಂಡು ತಮಗೆ ಧನ್ಯವಾದ ಹೇಳುವುದು ನನಗೆ ಅತ್ಯಂತ ಸಂತಸ ತಂದಿದೆ. ತಮ್ಮ ಸಾಧನೆ, ಆಲೋಚನೆ, ಧೈರ್ಯ ಮತ್ತು ದಕ್ಷತೆ ಇತಿಹಾಸ ಪುಟಗಳಲ್ಲಿ ಪ್ರಜ್ವಲಮಾನವಾಗಿ ದಾಖಲಾಗಿದೆ.

ನನ್ನ ಕ್ಷೇತ್ರ ಮತ್ತು ರಾಷ್ಟ್ರದ ಜನರ ಪರವಾಗಿ ಮತ್ತೊಮ್ಮೆ ಹುಟ್ಟುಹಬ್ಬದ ಹೃತ್ಪೂರ್ವಕ ಶುಭಾಶಯ ತಿಳಿಸಬಯಸುತ್ತೇನೆ. ತಾವು ತಮ್ಮ ಸ್ಫೂರ್ತಿಯಿಂದ ರಾಷ್ಟ್ರವನ್ನು ಮುನ್ನಡೆಸುವ ಕಾರ್ಯವನ್ನು ಮುಂದುವರೆಸಿ ಎಂದು ಹಾರೈಸುವುದಾಗಿ ಪತ್ರದಲ್ಲಿ ಹೇಳಿದ್ದಾರೆ.



ಅಂತರರಾಷ್ಟ್ರೀಯ ಸಂಸ್ಥೆ ಒಕ್ಕೂಟದಿಂದ ಲಯನ್ ಸೇವಾ ನಿಕೇತನ ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಲಯನ್ಸ್ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಜಿಲ್ಲೆ 317A ರಾಜ್ಯಪಾಲ ಲಯನ್ ಸುರೇಶ್ ರಾಮ್ ಉದ್ಘಾಟಿಸಿದರು. ಈ ವೇಳೆ ಲಯನ್ ಕವಿತಾ ಶಾಸ್ತ್ರಿ, ಲಯನ್ ಕೃಷ್ಣೇಗೌಡ, ಲಯನ್ ಸುಬ್ರಹ್ಮಣ್ಯ, ಲಯನ್ ರಾಜಶೇಖರ್, ಲಯನ್ ವೆಂಕಟೇಶ್, ಲಯನ್ ರವಿಕುಮಾರ್, ಲಯನ್ ನವೀನ್ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಪಟಾಕಿ ಮಾರಾಟ ಪರವಾನಗಿಗೆ ಅರ್ಜಿ ಆಹ್ವಾನ

ಮೈಸೂರು, ಸೆ.16– ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ 2022ನೇ ಸಾಲಿನ ದೀಪಾವಳಿ ಹಬ್ಬದ ಪಟಾಕಿಗಳನ್ನು ಮಾರಾಟ ಮಾಡಲು ತಾತ್ಕಾಲಿಕ ಪರವಾನಗಿ ನೀಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಐಇ–5 ನಮೂನೆಯ ಫಾರಂ ಅನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಚೇರಿ ಅಥವಾ ಸಂಬಂಧಪಟ್ಟ ತಾಲೂಕು ಕಚೇರಿಗಳಲ್ಲಿ ಪಡೆದು ಅಕ್ಟೋಬರ್ 18ರೊಳಗಾಗಿ ಫೋಟೋ ಲಗತ್ತಿಸಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಕಚೇರಿಗೆ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಯಂ ರಕ್ಷಣೆ ಕುರಿತು ವಿದ್ಯಾರ್ಥಿನಿಯರಿಗೆ ತರಬೇತಿ ಕಾರ್ಯಾಗಾರ

ಸಮಸ್ಯೆಗಳನ್ನು ತೊಡೆದು ಹಾಕಲು ಸರ್ಕಾರದೊಡನೆ ಸಮಸ್ತರು ಕೈಜೋಡಿಸಬೇಕು ; ಸಾಹಿತಿ ಬನ್ನೂರು ಕೆ.ರಾಜು



ಮೈಸೂರು, ಸೆ.16(ಪಿಎಂ)– ಸ್ವಯಂ ರಕ್ಷಣೆ ಕುರಿತ ತರಬೇತಿ ಕಾರ್ಯಾಗಾರದ ಮೂಲಕ ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರಿಗೆ ದೌರ್ಜನ್ಯದ ವಿರುದ್ಧ ಹೋರಾಟ ನಡೆಸುವ ಸಾಹಸ ಕಲೆಗಳನ್ನು ಪರಿಚಯಿಸಲಾಯಿತು.

ಕಾಲೇಜಿನ ಆವರಣದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಯೋಧ ಮಾರ್ಷಿಯಲ್ ಆರ್ಟ್ಸ್ ಅಕಾಡೆಮಿ ಸಂಸ್ಥಾಪಕ ರಾಕೇಶ್ ಯಾದವ್ ಮತ್ತು ತಂಡದಿಂದ ಸಾಹಸ ಕಲೆಗಳನ್ನು ಪ್ರದರ್ಶಿಸಿ ಅವುಗಳ ತಂತ್ರಗಾರಿಕೆ ಬಗ್ಗೆ ಮಾಹಿತಿ ನೀಡಲಾಯಿತು.

ಇದಕ್ಕೂ ಮುನ್ನ ಬಾಲ ಕಾರ್ಮಿಕ, ಕಿಶೋರ ಕಾರ್ಮಿಕ ಪದ್ಧತಿ ನಿಷೇಧ ಹಾಗೂ ನಿಯಂತ್ರಣ, ಮಾನವ ಕಳ್ಳ ಸಾಗಾಣೆ ಮತ್ತು ಭಿಕ್ಷಾಟನೆ ಕುರಿತು ವಿದ್ಯಾರ್ಥಿನಿಯರಿಗೆ ಕಾನೂನು ಅರಿವು ನೀಡಲಾಯಿತು. ಅಲ್ಲದೆ, ಇವುಗಳಿಗೆ ಸಂಬಂಧಿಸಿದ ಮಾಹಿತಿ ಒಳಗೊಂಡ ಕರಪತ್ರಗಳನ್ನು ವಿತರಣೆ ಮಾಡಲಾಯಿತು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರು ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಮಾತನಾಡಿ, ಜಗತ್ತಿನಲ್ಲಿ ಏನನ್ನೂ ನಿರೀಕ್ಷೆ ಮಾಡದವರೆಂದರೆ ತಂದೆ–ತಾಯಿ ಮತ್ತು ಶಿಕ್ಷಕರು. ಅವರ ನಿರೀಕ್ಷೆಗೆ ನಿರಾಸೆಯಾಗದಂತೆ ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಬಾಲ ಕಾರ್ಮಿಕ, ಕಿಶೋರ ಕಾರ್ಮಿಕ ಸಮಸ್ಯೆಗಳು ಸೇರಿದಂತೆ ನಾಗರಿಕ ಸಮಾಜಕ್ಕೆ ಬಹುದೊಡ್ಡ ಸವಾಲಾಗಿರುವ ಎಲ್ಲಾ ರೀತಿಯ ಸಮಸ್ಯೆಗಳನ್ನು ತೊಡೆದು ಹಾಕಲು ಸರ್ಕಾರದೊಡನೆ ಯುವಜನರು ಮತ್ತು ವಿದ್ಯಾರ್ಥಿಗಳ ಸಹಿತ ಸಮಸ್ತನಾಗರಿಕರೂ ಕೈಜೋಡಿಸಬೇಕು ಎಂದು ತಿಳಿಸಿದರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಅವರನ್ನು ಭವಿಷ್ಯದ ಸತ್ಪ್ರಜೆಗಳಾಗಿ ರೂಪಿಸುವ ಜವಾಬ್ದಾರಿ ಸಮಾಜದ ಸಮಸ್ತರ ಮೇಲಿದೆ. ಶಿಕ್ಷಣದಿಂದ ದೂರ ಉಳಿದಿರುವ ಮಕ್ಕಳನ್ನು ಮನವೊಲಿಸಿ ಅವರ ಪೋಷಕರಿಗೆ ತಿಳಿಹೇಳಿ ಅವರಿಗೆ ಶಿಕ್ಷಣ ದೊರಕಿಸಿಕೊಡಬೇಕಿದೆ ಎಂದು ಹೇಳಿದರು. ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಸಹಾಯಕ ಕಾರ್ಮಿಕ ಆಯುಕ್ತರಾದ ನಾಜಿಯಾ ಸುಲ್ತಾನ, ಕಾಲೇಜು ಪ್ರಾಂಶುಪಾಲ ವಿ.ಸೋಮಣ್ಣ ಮತ್ತಿತರರು ಹಾಜರಿದ್ದರು.

ಇಂದು ವಿಶ್ವಕರ್ಮ ಜಯಂತಿ

ಮೈಸೂರು, ಸೆ.16– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ವಿಶ್ವಕರ್ಮ ಜಯಂತ್ಯೋತ್ಸವ ಸಮಿತಿಯ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 17 ರಂದು ಮಧ್ಯಾಹ್ನ 12.30 ಗಂಟೆಗೆ ಕಲಾಮಂದಿರದಲ್ಲಿ ವಿಶ್ವಕರ್ಮ ಜಯಂತಿಯನ್ನು ಆಚರಿಸಲಾಗುತ್ತಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾಡಲಿದ್ದು, ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಲ್.ನಾಗೇಂದ್ರ ವಹಿಸುವರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶಿವಕುಮಾರ್, ಉಪ ಮಹಾಪೌರರಾದ ಡಾ.ಜಿ.ರೂಪ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಮತ್ತು ವಿಧಾನಪರಿಷತ್‌ನ ಶಾಸಕರು, ನಿಗಮ ಮಂಡಳಿಯ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸೇವಾ ಕಾರ್ಯದೊಂದಿಗೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ

ಎನ್.ಅರುಣ್‌ಕುಮಾರ್‌ಗೌಡರ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ







ಮೈಸೂರು,ಸೆ.16(ಪಿಎಂ)– ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್‌ಗೌಡರ ಹುಟ್ಟುಹಬ್ಬವನ್ನು ಅವರ ಹಿತೈಷಿಗಳು, ಅಭಿಮಾನಿಗಳು ಮೈಸೂರು ನಗರ ಸೇರಿದಂತೆ ಕ್ಷೇತ್ರದ ವಿವಿಧೆಡೆ ಸೇವಾ ಕಾರ್ಯದ ಮೂಲಕ ಗುರುವಾರ ಅರ್ಥಪೂರ್ಣವಾಗಿ ಆಚರಿಸಿದರು.

ಹೂಟಗಳ್ಳಿಯ ಗುಡ್ ವಿಶ್ ಫೌಂಡೇಶನ್ ಮಕ್ಕಳಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ನೋಟ್ ಪುಸ್ತಕಗಳನ್ನು ವಿತರಿಸಿ, ಉತ್ತಮ ಶಿಕ್ಷಣ ಪಡೆಯುವಂತೆ ಕಿವಿಮಾತು ಹೇಳಲಾಯಿತು. ಬಳಿಕ ಇಲವಾಲ ಗ್ರಾಮದಲ್ಲಿ ಆಶಾ ಕಾರ್ಯಕರ್ತೆಯರನ್ನು ಅಭಿನಂದಿಸಲಾಯಿತು. ಇದೇ ವೇಳೆ ಸನ್ಮಾನಿತ ಆಶಾ ಕಾರ್ಯಕರ್ತೆಯರು ಅರುಣ್‌ಕುಮಾರ್‌ಗೌಡರಿಗೆ ಜನ್ಮದಿನದ ಶುಭ ಕೋರಿದರು.

ಅಲ್ಲದೆ, ಉದ್ಬೂರು, ಮಹದೇವಪುರ, ಟಿ.ಕೆ.ಲೇಔಟ್, ಬೋಗಾದಿ ಮೊದಲ ಮತ್ತು ಎರಡನೇ ಹಂತ, ಮೈಸೂರು ಬಿಜೆಪಿ ಕಚೇರಿ, ಶಾರದಾದೇವಿನಗರದ ಚಾಮುಂಡೇಶ್ವರಿ ನಗರ ಮಂಡಲದ ಬಿಜೆಪಿ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಅರುಣ್‌ಕುಮಾರ್‌ಗೌಡ ಅವರನ್ನು ಅಭಿನಂದಿಸಿ, ಶುಭಾಶಯ ಹೇಳಿದರು.

ಕ್ಷೇತ್ರದ ಹಲವೆಡೆ ಬಿಜೆಪಿ ಕಾರ್ಯಕರ್ತರು, ಅರುಣ್ ಕುಮಾರ್‌ಗೌಡರ ಅಭಿಮಾನಿಗಳು, ವಿವಿಧ ಗ್ರಾಮದ ಗ್ರಾಮಸ್ಥರು ಅರುಣ್‌ಕುಮಾರ್‌ಗೌಡರ ಜನ್ಮದಿನ ಆಚರಿಸಿ, ಅವರಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಾಂತರ ಮಂಡಲ ಅಧ್ಯಕ್ಷ ಜಿ.ಎಂ.ಮಹೇಶ್, ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು, ಹಿರಿಯ ಮುಖಂಡರಾದ ಗೋಪಾಲರಾವ್, ಹಿನಕಲ್ ಶ್ರೀನಿವಾಸ್, ಪಾಲಿಕೆ ಮಾಜಿ ಸದಸ್ಯ ಕೆ.ಎಂ.ಶಂಕರ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಣೀಶ್, ಮಾಧ್ಯಮ ಪ್ರಮುಖ ರಾಜಕುಮಾರ್, ನಗರ ಪಾಲಿಕೆ ಸದಸ್ಯ ಆರ್.ಕೆ.ಶರತ್, ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿಗಳಾದ ಪೈ.ಟಿ.ರವಿ, ರಾಜಮಣಿ, ಈರೇಗೌಡ, ಸೋಮಶೇಖರ್ ಮತ್ತಿತರರು ಹಾಜರಿದ್ದರು.

ಅಲ್ಲದೆ, ಭೂ ನ್ಯಾಯ ಮಂಡಳಿ ಸದಸ್ಯರಾದ ಗೋಪಾಲ್‌ಗೌಡ, ಈರಪ್ಪ, ಎಪಿಎಂಸಿ ಸದಸ್ಯರಾದ ಮರಿಸ್ವಾಮಿ ನಾಯಕ್, ವೀರಭದ್ರ, ಮೋಹನ್, ಶಂಭು ಪಟೇಲ್, ಸೋಮಶೇಖರ್, ಬಿಜೆಪಿ ರಾಜ್ಯ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ವಿಜಯ್, ಮುಖಂಡರಾದ ದಿಲ್‌ದಾರ್ ರವಿ, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ಹುರ್ಗಳ್ಳಿ, ಯುವ ಮೋರ್ಚಾ ಅಧ್ಯಕ್ಷ ಚೇತನ್, ಮಹಿಳಾ ಮೋರ್ಚಾ ಅಧ್ಯಕ್ಷೆ ಜ್ಯೋತಿ, ಮುಖಂಡರಾದ ರೇವಣ್ಣ ಗಣೇಶ್, ಸುನೀಲ್, ಯೋಗೇಶ್, ಸಮೀರ್, ಆನಂದ್, ಇಲವಾಲದ ಶಾಂತಮ್ಮ ವಿನ್ಸೆಂಟ್, ಲೋಕೇಶ್, ರವಿ ಸೀಗಳ್ಳಿ, ಬಸವರಾಜು, ಬೋಗಾಡಿ ಮಂಜುನಾಥ್, ವೆಂಕಟೇಶ್‌ರಾವ್, ಇಲವಾಲ ಕುಮಾರ್, ಶ್ರೀನಿವಾಸ್ ಮತ್ತಿತರರು ಪಾಲ್ಗೊಂಡಿದ್ದರು.



ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕಿದೆ
5 ಎಕರೆ, ಕೆಂಪು ಮಣ್ಣಿನ ಜಮೀನು, ನೀರಾವರಿ ಸೌಲಭ್ಯವಿದೆ. ಥಾರ್ ರಸ್ತೆಗೆ ಹೊಂದಿಕೊಂಡಿದೆ. ತೋಟ ಮಾಡಲು ಯೋಗ್ಯವಾದ ಜಮೀನು. ಬನ್ನೂರಿನಿಂದ 5 ಕಿ.ಮೀ. ಎಕರೆಗೆ 35 ಲಕ್ಷ. ಮಧ್ಯವರ್ತಿಗಳು ಕ್ಷಮಿಸಿ.
7022360170

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಸೇಲ್ಸ್ ಎಗ್ಸಿಕ್ಯುಟಿವ್ಸ್ ಬೇಕಾಗಿದ್ದಾರೆ
ಶೋರೂಂನಲ್ಲಿ ಕೆಲಸ ಮಾಡಲು ಮತ್ತು ಮಾರ್ಕೆಟಿಂಗ್‌ಗೆ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
9886409722

SITES FOR SALE
20x30 & 30x40 Bank Loan upto 80%, Near Guru Bus Stop, Ramabainagar, Mysore. DTCP approved (Corporation limits), 1.5 kms from J P Nagar Ring Road.
8660105902

Change of Name
I, **Meghana H.S.,** W/o Rakesh Srikante Gowda, residing at No. 526, 1st 'F' Cross Road, Lalathadrinagar South, Mysore-570 028, have changed my name as **Meghana Rakesh,** on my own free will, in front of Notary L.N. Rajendran on 12-9-2022.
Sd/- **Meghana Rakesh**

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297

ಬೊಕ್ಕ ತಲೆಗೆ ಪರಿಹಾರ
ಕೇವಲ 2 ಗಂಟೆಯಲ್ಲಿ



Turn Style HAIR FIXING
Ladies Wigs Also available
40, Opp. IDBI Bank, Double Road, Kuvempunagar, Mysore - 23
Ph : 0821-2344992, Mob. 98450 34559

HOUSE FOR SALE
30x40, Duplex at Srirampura. 30x40 G/F/S at Dattagalli. 30x40 old House at Ramakrishnanagar. 40x60 G & F at Ramakrishnanagar.
9663136318

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಖ್ಯಾತ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 1 ರಿಂದ SSLC, PUC, ITI ಯವರಿಗೂ ಅಥವಾ (ವಿದ್ಯಾರ್ಹತೆ ಇಲ್ಲ) ವೇತನ ಅರ್ಹತೆಗೆ ತಕ್ಕಂತೆ ಇರುತ್ತದೆ. ವಯೋಮಿತಿ 18 ರಿಂದ 45 ವರ್ಷದವರೆಗೆ ಇರುತ್ತದೆ. ESI, PF (ಸೌಲಭ್ಯವಿರುತ್ತದೆ) (ಊಟ, ವಸತಿ ಸೌಲಭ್ಯವಿರುತ್ತದೆ) (ಪಾರ್ಟ್ ಟೈಮ್ ಜಾಬ್ ಇರುತ್ತದೆ). ಸಂಪರ್ಕಿಸಿ:
7795465519 / 8217498208
9164975503

ಹುಡುಗರು ಬೇಕಾಗಿದ್ದಾರೆ
25 ರಿಂದ 35 ರ ವಿದ್ಯಾವಂತರು, ಬುದ್ಧಿವಂತ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ. ಕೂಡಲೇ (Two Wheeler Must) ಸಂಪರ್ಕಿಸಿ:
9901080314

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

REQUIRED MEN / WOMEN STAFF
GHANASHREE ENTERPRISES for Shell Petrol Bunk, Attractive Salary, ESI / PF and Food facilities. for more details please contact:
8951715624
8431589810

WANTED SITES & OLD HOUSES
@ Kuvempunagar, R.K.Nagar, Vijayanagar, Yelwala & Mysore Ring Road Surrounding Quick Registration
9342125252

SITE FOR SALE
40x60 Site Sale
RT Nagar 2600 sq.ft. East facing. Before Mapple Green Layout.
9620349543

ವಾರ್ಷಿಕ ಮಹಾಸಭೆ
ಪಡಕಿ ಗೃಹ ನಿರ್ಮಾಣ ಸಹಕಾರ ಸಂಘ (ನಿ)
2021–22ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 18–09–2022ನೇ ಭಾನುವಾರ ಬೆಳಗ್ಗೆ 10.30 ಗಂಟೆಗೆ "ವಿಲ್ಲಾ ಪಾರ್ಕ್" #638, ಹೊಸ ಸಂ.25, ಹೈದರಾಲಿ ರಸ್ತೆ, ಚಾಮುಂಡಿ ವಿಹಾರ ಸ್ಟೇಡಿಯಂ ಎದುರು, ನಜರ್‌ಬಾದ್, ಮೈಸೂರು – 10 ಇಲ್ಲಿ ನಡೆಯಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ
ಸಹಿ/– ಅಧ್ಯಕ್ಷರು
ದೂರವಾಣಿ ಸಂಖ್ಯೆ: 0821–2430991

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್
ವಾಚ್‌ಮ್ಯಾನ್, ಸಪ್ಲೇಯರ್, ಕ್ಲೀನರ್ ಬೇಕಾಗಿದ್ದಾರೆ.
9900422201
9845108109

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವಿಕ್ಷೀಸಲು ಕರೆ ಮಾಡಿ
7996504996

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

WANTED PIGMY AGENTS (4% COM)
SHARES ARE OPENED.
For more details contact:
MOB: 9902729729
SAI MULTI STATE CREDIT CO-OPERATIVE SOCIETY
3rd MAIN, 5th CROSS, JAYANAGAR, MYSORE.
Attractive interest rate on FD 11.55% PA

20X30 30X40 30X50
ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಜಮೀನು ಮಾರಾಟಕ್ಕಿದೆ
ಟಿ.ಎನ್. ಪುರ ರಸ್ತೆ, ಮೇಗಳಾಪುರ ಸಮೀಪ 1 ಎಕರೆ 10 ಗುಂಟೆ ಜಮೀನು ಡಾಂಬರ್ ರಸ್ತೆಗೆ ಹೊಂದಿಕೊಂಡಿದ್ದು, ಮೈಸೂರಿನಿಂದ 18 KM ಫಾರ್ಮ್ ಹೌಸ್ ಮಾಡಲು ಸೂಕ್ತವಾಗಿದ್ದು, ಆಸಕ್ತರು ಕೂಡಲೇ ಸಂಪರ್ಕಿಸಿ. ಮಾಲೀಕರ ಮೊಬೈಲ್ ನಂ.
96063 75060

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಜಮೀನು ಮಾರಾಟಕ್ಕಿದೆ
5 ಎಕರೆ, ಕೆಂಪು ಮಣ್ಣಿನ ಜಮೀನು, ನೀರಾವರಿ ಸೌಲಭ್ಯವಿದೆ. ಥಾರ್ ರಸ್ತೆಗೆ ಹೊಂದಿಕೊಂಡಿದೆ. ತೋಟ ಮಾಡಲು ಯೋಗ್ಯವಾದ ಜಮೀನು. ಇಲವಾಲದಿಂದ 6 ಕಿ.ಮೀ. ಎಕರೆಗೆ 50 ಲಕ್ಷ. ಮಧ್ಯವರ್ತಿಗಳು ಕ್ಷಮಿಸಿ.
7022360170

ಸೈಟು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

Dr.D.H.BAGALKOT SEXOLOGIST (Since 1983)
ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ
ಶೀಘ್ರ ಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳುವಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
•ಮೈಸೂರು: ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ, ಧನವಂತ್ರಿ ರೋಡ
Cell: 9743193428
www.drbagalkot.com

WANTED
Well Experienced Security Guards required PUC Passed Salary: 20,000/-. Please Contact:
9035269781 / 9108100117
9916772043 / 0821-4852002

ಬೋಳು ತಲೆಯ ಸಮಸ್ಯೆಯೇ?



ಕಡಿಮೆದರದ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

WANTED
Sales Boys & Girls
For a Sports Shop in Mysore.
7760109047, 8105368325

ಹೊಸ ಮನೆ ಮಾರಾಟಕ್ಕಿದೆ
ಮೈಸೂರು, ದಟ್ಟಗಳ್ಳಿ 3ನೇ ಹಂತ 30x40 (Duplex), 3 ಬೆಡ್ ರೂಮ್
9945615736

ಜಮೀನು ಮಾರಾಟಕ್ಕಿದೆ
20 ಎಕರೆ, ಕೆಂಪು ಮಣ್ಣಿನ ಜಮೀನು 4 ಬೋರ್‌ವೆಲ್ ಇದೆ. ಎಕರೆಗೆ 17 ಲಕ್ಷ

5 ಎಕರೆ ಕೆಂಪು ಮಣ್ಣಿನ ಜಮೀನು ಥಾರ್ ರಸ್ತೆಗೆ ಹೊಂದಿಕೊಂಡಿದೆ, ಎಕರೆಗೆ 26 ಲಕ್ಷ ಹುಣಸೂರಿನಿಂದ 15 ಕಿ.ಮೀ. ಮಧ್ಯವರ್ತಿಗಳು ಕ್ಷಮಿಸಿ
7022360170

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಡೆವಲಪರ್ ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹಾಗೂ ಟೆಲಿಕಾಲರ್ಸ್ ಹಾಗೂ ಆಫೀಸ್ ಬಾಯ್ (7ನೇ ತರಗತಿ) ಬೇಕಾಗಿದ್ದಾರೆ. ಆಕರ್ಷಕ ವೇತನ, ಯಾವುದೇ ಡಿಗ್ರಿ
7483442527 / 8088546307

S.M GOLD COMPANY
* ಗಿರವಿ ಚಿನ್ನಾಭರಣ ಖರೀದಿ ಬೇರೆ ಕಂಪನಿಗಿಂತ ಅಧಿಕ ಹಣ ನೀಡುತ್ತೇವೆ.
* ನೀವು ಗಿರವಿ ಇಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನ–ಆಭರಣಗಳನ್ನು ಇಂದಿನ ಆನ್–ಲೈನ್ ಬೆಲೆಗೆ ತೆಗೆದುಕೊಳ್ಳುತ್ತೇವೆ.
ಕೂಡಲೇ ಸಂಪರ್ಕಿಸಿ–(T&C)
9964522225

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

WALK IN INTERVIEW REQUIRED FOR HOTEL
Receptionist, Office Assistant, Room Boys, House Keeping Ladies, Chinese Cook.
Old Ramanashri Hotel Complex, Harding Circle, Opp. to Woodlands.
9620672223

DOCUMENT LOST
My client **Siraj Pasha** is the owner of house No. 2452/1, New No. L-45, Erekatte Street, Lashkar Mohalla, Mysuru, who lost all the original relating documents of the above property while coming from Rajiv Nagar to Advocate office Sunni Chowk Circle, Mandi Mohalla, Mysuru, if, anybody found the original relating documents of the above property then please contact Advocate Ayub Ahmed Khan, Mysore. **Ph: 9342113452**

ಮನೆ ಮಾರಾಟಕ್ಕಿದೆ
3 BHK ಮನೆ – 3 ಫ್ಲೋರ್ (ಡ್ಯೂಪ್ಲೆಕ್ಸ್) ಗ್ರಾನೈಟ್ ಫ್ಲೋರಿಂಗ್, 14 ಚದರ ಮನೆ, ಕಾವೇರಿ ನಗರ (ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ) ನಿವೇಶನ ಅಳತೆ 20x31, ಬೆಲೆ 62 ಲಕ್ಷ
7022759977
9448425692

ತಕ್ಷಣ ಬೇಕಾಗಿದ್ದಾರೆ
ಮನೆಯಲ್ಲೇ ಇದ್ದು ನೋಡಿಕೊಳ್ಳಲು ಅನುಭವವುಳ್ಳ ಹೋಮ್ ನರ್ಸ್ ಹುಡುಗರು, ಹುಡುಗಿಯರು & ಅಡುಗೆಯವರು & ANM, GNM ನರ್ಸ್ ಬೇಕಾಗಿದ್ದಾರೆ. ಸಂಬಳ: 23,000. ಸಂಪರ್ಕಿಸಿ: ಲಕ್ಷ್ಮೀ
8123630683

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

CHANGE OF NAME
This is to declare that I, **Naseern Taj Kyasankere**, resident of **# 484, 6th Cross, 2nd Stage, Rajiv Nagar, Mysuru-570019, Karnataka, India** have changed my name to **Nasreen Taj Kyasankere** vide Affidavit sworn to before Notary **Sri. Mallikarjuna Swamy**, on **12.09.2022**. In future, I wish to be called and known for all acts, deeds and things as **Nasreen Taj Kyasankere only.**
Sd/-Nasreen Taj Kyasankere

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಂಸ್ಥೆಯಾದ ಆಯುಷ್ಮಾನ್ ಗ್ರೂಪ್ಸ್ ವತಿಯಿಂದ ಹೆಸರಾಂತ ಕಾರ್ಖಾನೆಗಳು, ಕಂಪನಿಗಳು, ಆಸ್ಪತ್ರೆಗಳು, ಅಪಾರ್ಟ್‌ಮೆಂಟ್‌ಗಳು, ಮಾಲ್‌ಗಳು, ರೆಸ್ಟೋರೆಂಟ್‌ಗಳು, ಶಾಲಾ ಕಾಲೇಜುಗಳು & ಮನೆಗಳಲ್ಲಿ "ಸೆಕ್ಯೂರಿಟಿ ಗಾರ್ಡ್" "ಹೌಸ್ ಕೀಪಿಂಗ್" ಹಾಗೂ ಹೋಂ ನರ್ಸಿಂಗ್ ಕೆಲಸಗಳಿಗೆ ಯುವಕ, ಯುವತಿಯರು ಮತ್ತು ಪುರುಷರು, ಮಹಿಳೆಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 50 ವರ್ಷಗಳು, ವಿದ್ಯಾರ್ಹತೆ 7th to ಡಿಗ್ರಿ ವರೆಗೂ. ಸಂಪರ್ಕಿಸಿ
9606714441 / 0821-4242351
9880570381 / 0821-3567906

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ Kannada DTP, Photoshop And Coreldraw Designers
ಅನುಭವ ಇದ್ದವರಿಗೆ ಮೊದಲ ಆದ್ಯತೆ
ಸಂಬಳ : 20,000/–
ಮೊ : 9449853308

WANTED D.T.P OPERATOR
Experience in Pagemaker, CorelDRAW & Typing Speed in KANNADA & ENGLISH
9886310048, 9886658463

ನವಮ್ ಮೇನ್ಸ್ ಡೆಸ್ಟಿನೇಶನ್
ಬಟ್ಟೆ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಪ್ರಾಮುಖ್ಯತೆ. ಆಕರ್ಷಕ ಸಂಬಳ ನೀಡಲಾಗುವುದು. ಸ್ಥಳ: ಮೈಸೂರು, ಬನ್ನೂರು, ಟಿ.ಎನ್.ಪುರ
7676685839

RENT / ಬಾಡಿಗೆಗೆ
30x80 Shed with water, Electricity, Near Police Layout, T.N.Pura Road, Chikkalli. Contact:
9880859614 / 7760827774
(Also Available Vacant Land 40x100)

HOUSE FOR SALE
3BHK DUPLEX HOUSE
40x60 EAST FACING
JP NAGAR, SIDALINGESHWARA LAYOUT, 1ST STAGE
9743532664

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

GST SKILLS
TRAINING WITH STIMULATION SOFTWARE
- REGISTRATION
- E-WAY BILL
- GSTR-3B
- GST CHALLAN
- GSTR-1 RETURN

8951208347
TNI TECHNOLOGIES
BOGADI-HINKAL ROAD, BOGADI MYSORE-26

ಹಳೆಯ / Old
ಮಿಕ್ಸರ್‌ಗೆ	ರೂ.1500
ಕುಕ್ಕರ್‌ಗೆ	ರೂ.1500
ಗ್ಯಾಸ್‌ಸ್ಟೌವ್‌ಗೆ	ರೂ.2500

ಹೊಸ ಬಟರ್‌ಫ್ಲೈ, ಬಜಾಜ್, ಪ್ರೆಸ್ಟೀಜ್ ಕಂಪನಿಗೆ ಬದಲಾಯಿಸಿ.
ಶ್ರೀವಿನಾಯಕ ಎಂಟರ್ ಪ್ರೈಸಸ್, ಪ್ರಗತಿ ಮೆಡಿಕಲ್ ಎದುರು, ಅಗ್ರಹಾರ, ಮೈಸೂರು.
ಮೊ.: 7204368222

ಮಂಗಳೂರಿನಲ್ಲಿ ಹೋಂನರ್ಸ್
ಕೆಲಸಕ್ಕೆ ಜನ ಬೇಕಾಗಿದ್ದಾರೆ.
ಮಹಿಳೆಯರ ವೇತನ ಶ್ರೇಣಿ: 16,000–18,000
ಪುರುಷರ ವೇತನ ಶ್ರೇಣಿ: 17,000–22,000
ಸಂಪರ್ಕಿಸಿ:
WeCare Home Nursing
Nandigudda, Mangalore
8792127333 / 6364457333

ಕಳೆದಿದೆ
ಸಣ್ಣಮ್ಮ ನಂ. 2748/1 ಕೆ.ಜಿ.ಕೊಪ್ಪಲು, ಮೈಸೂರು ಇವರಿಗೆ ಸೇರಿದ ವಿಜಯನಗರ 3ನೇ ಹಂತ, ಬಿ ಬ್ಲಾಕ್, ಮೈಸೂರಿನ ಸೈಟ್ ನಂ. 496ರ ಮೂಲ ದಾಖಲಾತಿಗಳು ಕಳೆದಿದೆ. ಸಿಕ್ಕಿದವರು ಸಂಪರ್ಕಿಸಿ:
9880990011

ಜಮೀನು ಮಾರಾಟಕ್ಕಿದೆ
ಗದ್ದಿಗೆ ಮುಖ್ಯ ರಸ್ತೆಯ ಹಾಲನಹಳ್ಳಿ ಗ್ರಾಮ ದಿಂದ ಕೃಷ್ಣಯ್ಯನಹುಂಡಿ ಗ್ರಾಮದಲ್ಲಿ 3 ಎಕರೆ 4 ಗುಂಟೆ ತೆಂಗಿನ ತೋಟ ಮಾರಾಟಕ್ಕಿದೆ. ಆಸಕ್ತಿ ಇರುವವರು ಸಂಪರ್ಕಿಸಿ:
8618848886
9880228448

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೋರೆ ನಾಲ್ವರ ದೈವ ಚೌಡಶ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

Solarizer


DEPENDABLE. DURABLE. DISTINCTIVE
HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

ಶ್ರೀಕೃಷ್ಣ ಸೌಹಾರ್ದ ಸಹಕಾರಿ ನಿಯಮಿತ (ನೋಂ.)
ನಂ.67, ಹುಣಸೂರು ರಸ್ತೆ, ಹೂಟಗಳ್ಳಿ, ಬೆಳವಾಡಿ ಅಂಚೆ, ಮೈಸೂರು–18
ಸರ್ವ ಸದಸ್ಯರ ಗಮನಕ್ಕೆ
ಮೇಲ್ಕಂಡ ನಮ್ಮ ಸಹಕಾರಿಯ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ:18.09.2022 ರ ಭಾನುವಾರದಂದು ನಮ್ಮ ಸಹಕಾರಿಯ ಕಛೇರಿ ಆವರಣದಲ್ಲಿ ಬೆಳಿಗ್ಗೆ 11–00 ಗಂಟೆಗೆ ಏರ್ಪಡಿಸಿದ್ದು, ಈ ಸಂಬಂಧ ಆಹ್ವಾನ ಪತ್ರಿಕೆಯನ್ನು ಎಲ್ಲಾ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಿದ್ದೇವೆ. ಸಕಾಲದಲ್ಲಿ ಆಹ್ವಾನ ಕೈ ಸೇರದ ಸದಸ್ಯರು ಈ ತಿಳುವಳಿಕೆ ಮೇರೆಗೆ ಮಹಾಸಭೆಗೆ ಬರಬೇಕೆಂದು ಕೋರುತ್ತೇವೆ.
ಸಹಿ/–
ಎಸ್.ಆರ್. ನಾರಾಯಣರಾವ್
ಅಧ್ಯಕ್ಷರು

ರೂಂ ಬಾಡಿಗೆಗೆ ಇದೆ
ಒಂದು ದೊಡ್ಡ ರೂಂ, ಅಡುಗೆ ಮನೆ, ಅಟ್ಯಾಚ್ ಬಾತ್ ರೂಂ, 3ನೇ ಫ್ಲೋರ್, ಶ್ರೀರಾಂಪುರ, ಸೆಮಿ ಫರ್ನಿಶಿಂಗ್, ಬಿಸಿನೀರಿನ ವ್ಯವಸ್ಥೆ ಇದೆ. ಪಾರ್ಕಿಂಗ್ ಇದೆ.
9901743602

SITE FOR SALE
Saptha Matraka Layout, Phase - 1
30x40
9972828808

WANTED
Accountant Knowledge of Tally Essential. Wanted office Boy - 1 post, To work at Hinkal Area. Contact:
9480155900

ಬೇಕಾಗಿದ್ದಾರೆ
PG ಯಲ್ಲಿ ಅಡುಗೆ ಮತ್ತು ಇತರೆ ಕೆಲಸ ಮಾಡಲು ಹೆಂಗಸರು ಬೇಕಾಗಿದ್ದಾರೆ. ಇಲ್ಲೇ ಉಳಿದುಕೊಳ್ಳುವವರಿಗೆ ಆದ್ಯತೆ. ಸಂಪರ್ಕಿಸಿ:
8861768650
6361539274

HOUSE FOR LEASE OR RENT
3 BHK Duplex independent House for Lease in Srirampura.
3 BHK Duplex independent House Vijayanagar 4th Stage Lease or Rent
9743532664

WANTED
SECURITY FIELD OFFICER (MALE) CANDIDATE
Fresher's can also apply with good Communication skill interest candidates send your CV to E-mail: nimishpvtltd@gmail.com
9513999755

MUDA / DTCP SITES
ನಮ್ಮ ವಿವಿಧ ಬಡಾವಣೆಗಳಲ್ಲಿ ಮನೆ ನಿರ್ಮಿಸಲು ಎಲ್ಲಾ ಸೌಲಭ್ಯವುಳ್ಳ ಸೈಟುಗಳು ಲಭ್ಯವಿದೆ. ಬೆಲೆ 11 ಲಕ್ಷ ದಿಂದ 40 ಲಕ್ಷದವರೆಗೆ
8884594540

ಚಾಲಕರು ಬೇಕಾಗಿದ್ದಾರೆ
ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಚಾಲಕರಾಗಿ ಕೆಲಸ ಮಾಡುವುದಕ್ಕೆ ಅನುಭವವುಳ್ಳ ಚಾಲಕರು ಬೇಕಾಗಿದ್ದಾರೆ. ವಯಸ್ಸು 30 ರಿಂದ 35 ವರ್ಷದೊಳಗೆ ಉತ್ತಮ ವೇತನ ಇಎಸ್‌ಐ, ಪಿಎಫ್ ಸೌಲಭ್ಯವಿರುತ್ತದೆ. ಆಸಕ್ತರು ಈ ಕೆಳಕಂಡ ಫೋನ್‌ಗೆ ಕರೆ ಮಾಡಿ. (ದಾಖಲಾತಿಗಳ ಮೂಲಕ) ಸ್ಥಳೀಯರಿಗೆ ಆದ್ಯತೆ ಇದೆ.
8971379542 / 9480421332

ನಿವೇಶನ / ಮನೆ ಬೇಕಾಗಿದೆ
ಅರವಿಂದನಗರ / ಕುವೆಂಪುನಗರ / ಮಧುವನ ವಿವೇಕಾನಂದನಗರದಲ್ಲಿರುವ 60x40 ನಿವೇಶನ / ಮನೆ ಬೇಕಾಗಿದೆ. ಕೂಡಲೇ ವ್ಯವಹರಿಸಲಾಗುವುದು. ಮಾಲೀಕರು ಮಾತ್ರ ಸಂಪರ್ಕಿಸಿ:
9916313243

ವಾರ್ಷಿಕ ಮಹಾಸಭೆ
ಪಡಕಿ ಸೌಹಾರ್ದ ಕ್ರೆಡಿಟ್ ಕೋ. ಆಪರೇಟಿವ್ ನಿಯಮಿತ
2021–22ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 18–09–2022 ನೇ ಭಾನುವಾರ ಬೆಳಗ್ಗೆ 12.00 ಗಂಟೆಗೆ "ವಿಲ್ಲಾ ಪಾರ್ಕ್", #638, ಹೊಸ ಸಂ.25, ಹೈದರಾಲಿ ರಸ್ತೆ, ಚಾಮುಂಡಿ ವಿಹಾರ ಸ್ಟೇಡಿಯಂ ಎದುರು, ನಜರ್‌ಬಾದ್, ಮೈಸೂರು–10 ಇಲ್ಲಿ ನಡೆಯಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ
ಸಹಿ/– ಅಧ್ಯಕ್ಷರು
ದೂರವಾಣಿ ಸಂಖ್ಯೆ: 0821–2524154

WANTED
Part Time or Full Time employees for filling Petrol & Gas in Petrol Bunk. Cashier Cum Helper, Qualification: SSLC Pass. Timing : 6am onwards or 6 pm onwards
9844002226

ಸುವರ್ಣ ಯಾತ್ರ
- ಶಿರಡಿ ಪ್ರವಾಸ 6 ದಿನಗಳು 5–10–22,
- ಗುಜರಾತ್ ಪ್ರವಾಸ 8 ದಿನಗಳು 12–10–22,
- ಕಾಶಿ ಪ್ರವಾಸ 7 ದಿನಗಳು 12–10–22,
- ತಮಿಳುನಾಡು ಪ್ರವಾಸ 6 ದಿನಗಳು 13–10–22

9019462508
9008381022

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
SSLC ಪಾಸಾಗಿದ್ದು, ಅನುಭವವುಳ್ಳ 45 ವರ್ಷದೊಳಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ಕಡಕೊಳ & ಸಿಂಧುವಳ್ಳಿ, ಹಾಗೂ ಮೈಸೂರುನಗರದ ಬನ್ನೂರು ರಸ್ತೆಯ ದೇವೇಗೌಡ ಸರ್ಕಲ್ ಹತ್ತಿರದ ಕಂಪನಿಯಲ್ಲಿ ಕೆಲಸ ಮಾಡಲು ತಕ್ಷಣ ಸಂಪರ್ಕಿಸಿ:
9035050656 / 9035050653

ಮನೆ ಮಾರಾಟಕ್ಕಿದೆ
20x30 ಅಳತೆಯ ಹೊಸ ಮನೆ ನಾರ್ಥ್ ಫೇಸಿಂಗ್ ಗ್ರೌಂಡ್ ಫ್ಲೋರ್ & ಫಸ್ಟ್ ಫ್ಲೋರ್ ಶ್ರೀರಾಂಪುರ ಸೆಕೆಂಡ್ ಸ್ಟೇಜ್ ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9141353309

ತಕ್ಷಣ ಬೇಕಾಗಿದ್ದಾರೆ
ವೆಜ್ ಹೋಟೆಲ್ ಕೆಲಸಕ್ಕೆ ದೋಸೆ ಪರಿಣಿತರು. ಸಪ್ಲೇಯರ್ಸ್ ತಕ್ಷಣ ಬೇಕಾಗಿದ್ದಾರೆ. ರೂಮ್ ವ್ಯವಸ್ಥೆ ಇದೆ.
7795518038
8884208814

HOUSE FOR SALE
2 BHK New Flat, East Facing, 1100 Sq.ft., 2nd Floor, Fully Furnished Jayalakshmipuram, V V Mohala, Mysuru - 85 Lakhs
33x40, NEW 3 BHK Duplex, W/F Site & N/F Door, Vijayanagar 4th Stage, RMP, Mysuru - 1.45 Cr. (Brokers excuse)
8660105902

ಕೆಲಸಕ್ಕೆ ಬೇಕಾಗಿದ್ದಾರೆ
NGO ಸಂಸ್ಥೆಯೊಂದರಲ್ಲಿ Telecalling ಮಾಡಲು 50 ಯುವತಿಯರು ಬೇಕಾಗಿದ್ದಾರೆ. (ಹೂಟಗಳ್ಳಿ ಸುತ್ತಮುತ್ತಲಿನ ಅಭ್ಯರ್ಥಿಗಳಿಗೆ ಮೊದಲ ಆಧ್ಯತೆ) ವಿದ್ಯಾಭ್ಯಾಸ: SSLC ಫೇಲ್ / ಪಾಸ್ / ITI / Any Degree. Contact:
7795123134

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ಮುಖ್ಯರಸ್ತೆಯಿಂದ ಕಂಚಮಳ್ಳಿ ಮುಖ್ಯ ರಸ್ತೆಯಲ್ಲಿ 19 ಗುಂಟೆ ಹಾಗೂ 32 ಗುಂಟೆ ಜಮೀನು ಮಾರಾಟಕ್ಕಿದೆ.
9945661696
8618848886

ಶ್ರೀ ರಾಘವೇಂದ್ರ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಪಂ.ಎಸ್.ಕೆ.ಪ್ರಶಾಂತ್ ಆಚಾರ್ಯ
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ ದಾಂಪತ್ಯ ಸಮಸ್ಯೆ, ನಾಗದೋಷ, ಕುಜ ದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲಭಾದೇ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ತಿಳಿಸುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ ಕಾಂಪ್ಲೆಕ್ಸ್, ಡಾ। ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ) ಮೈಸೂರು.
9740947045

ಮಳಿಗೆಗಳು ಬಾಡಿಗೆಗೆ ಇದೆ
ಸಂತೇಪೇಟೆ ರಸ್ತೆಯುಲ್ಲಿರುವ ಶ್ರೀಮತಿ ದೇವಿ ಸಾಕಮ್ಮ ಕಾಂಪ್ಲೆಕ್ಸ್‌ನ ನೆಲ ಅಂತಸ್ತಿನಲ್ಲಿ 3 ಮಳಿಗೆಗಳು ಹಾಗೂ ಮೊದಲ ಅಂತಸ್ತಿನಲ್ಲಿ 3 ಮಳಿಗೆಗಳು ಖಾಲಿ ಇದೆ. ಅಗಲ 9.9 ಅಡಿ, ಉದ್ದ 16.4 ಅಡಿ ಮಳಿಗೆಗಳು ಖಾಲಿ ಇರುತ್ತದೆ. ಸಂಪರ್ಕಿಸಿ:
ಕುಂಚಿಟಿಗರ ಸಂಘ (ರಿ), ದಿವಾನ್ಸ್ ರಸ್ತೆ, ಮೈಸೂರು.
ಕುಂಚಿಟಿಗರ ಸಂಘ (ರಿ)ದ ಪರವಾಗಿ
(ಎಂ.ಆರ್.ಯೋಗೀಶ) ಗೌ।ಕಾರ್ಯದರ್ಶಿ
0821-2422973 / 9035389047

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಚೆನ್ನಕೇಶವ ದೇವಾಲಯ ಸೇರ್ಪಡೆ ನಿರೀಕ್ಷೆ

ಸೋಮನಾಥಪುರದಲ್ಲಿ ಯುನೆಸ್ಕೋ ತಜ್ಞರ ಪರಿಶೀಲನೆ



ತಿ.ನರಸೀಪುರ, ಸೆ.16– ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ತಾಲೂಕಿನ ಸೋಮನಾಥಪುರದ ಚೆನ್ನಕೇಶವ ದೇವಾಲಯ ಸೇರ್ಪಡೆ ಸಾಧ್ಯತೆಯಿದ್ದು, ಟಿಯಾಂಗ್ ಕಿಯಾನ್ ಬೂನ್ ನೇತೃತ್ವದ ಯುನೆಸ್ಕೋ (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಆಯೋಗ) ತಜ್ಞರ ತಂಡ ಭೇಟಿ ನೀಡಿ, ಪರಿಶೀಲಿಸಿತು.

ಹೊಯ್ಸಳರ ಕಾಲದಲ್ಲಿ ದೇವಾಲಯ ವೇಸರ ಶೈಲಿಯಲ್ಲಿ ನಿರ್ಮಾಣವಾಗಿದ್ದು, ಇಲ್ಲಿನ ಶಿಲ್ಪಕಲೆ, ಗರ್ಭಗುಡಿ ಪ್ರಾಂಗಣ, ಕೆತ್ತನೆ ಕುಸುರಿ ಮತ್ತು ಅದ್ಭುತ ಕದಳಿ ಹಣ್ಣಿನ ಕೆತ್ತನೆಯನ್ನು ತಜ್ಞರ ತಂಡ ವೀಕ್ಷಿಸಿತು. ಟಿಯಾಂಗ್ ಕಿಯಾನ್ ಬೂನ್ ಅವರಿಗೆ ಇನ್ಫೋಸಿಸ್ ಫೌಂಡೇಶನ್‌ನ ಸುಧಾಮೂರ್ತಿ ಹಾಗೂ ಭಾರತೀಯ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ರಾಜ್ಯ ಪ್ರಾಚ್ಯ ವಸ್ತು ಅಧಿಕಾರಿಗಳು ದೇವಾಲಯದ ಶಿಲ್ಪಕಲೆ, ಐತಿಹ್ಯ ಹಾಗೂ ಹೊಯ್ಸಳರ ಕಾಲದ ಶಿಲ್ಪಕಲೆ, ಕುಸುರಿ ಕೆತ್ತನೆಗಳ ಬಗ್ಗೆ ವಿವರಿಸಿದರು.

ದೇವಾಲಯದಲ್ಲಿ ಬಳಪದ ಕಲ್ಲಿನಲ್ಲಿ ಕೆತ್ತಿರುವ ಅತ್ಯಂತ ಸೂಕ್ಷ್ಮ ಕೆತ್ತನೆಯ ಕಲಾ ನೈಪುಣ್ಯತೆ, ಮದನಿಕೆಯರ ಶಿಲ್ಪಗಳು, ನಾಟ್ಯ ಭಂಗಿಗಳು, ಮದನಿಕಾ ವಿಗ್ರಹಗಳು, ನಾಜೂಕಿನ ಕುಸುರಿ ಕೆಲಸಗಳನ್ನು ಅತ್ಯಂತ ಆಸಕ್ತಿಯಿಂದ ಗಮನಿಸಿದ ಟಿಯಾಂಗ್ ಕಿಯಾನ್ ಬೂನ್ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ಈ ದೇವಾಲಯವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಲಾಗುವುದು. ಉನ್ನತಮಟ್ಟದ ಸಮಿತಿ ನಿರ್ಧಾರ ಕೈಗೊಳ್ಳಲಿದೆ ಎಂದರು.

ಇದೇ ವೇಳೆ ಟಿಯಾಂಗ್ ಕಿಯಾನ್ ಬೂನ್, ದೇವಾಲಯವು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರುವುದರಿಂದ ಆಗುವ ಸಾಧಕ–ಬಾಧಕಗಳ ಬಗ್ಗೆ ಸ್ಥಳೀಯರೊಂದಿಗೆ ಸಂವಾದ ನಡೆಸಿದರು.

ರಾಜ್ಯ ಪುರಾತತ್ವ ಇಲಾಖೆ ಆಯುಕ್ತ ದೇವರಾಜ್ ಮಾತನಾಡಿ, ಯುನೆಸ್ಕೋ ತಜ್ಞರ ತಂಡ ಸೋಮನಾಥಪುರ ದೇವಾಲಯದ ಶಿಲ್ಪಕಲೆಗಳನ್ನು ವೀಕ್ಷಿಸಿ, ಯುನೆಸ್ಕೋ ತಜ್ಞರು ಸಂಸ್ಥೆಗೆ ವರದಿ ಸಲ್ಲಿಸುವರು. ಮುಂದಿನ ದಿನಗಳಲ್ಲಿ ಈ ದೇವಾಲಯ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆ ಯಾಗುವ ನಿರೀಕ್ಷೆಯಿದೆ. ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಈ ದೇಗುಲ ಸೇರಿದರೆ, ಮೂಲ ಸೌಕರ್ಯದೊಂದಿಗೆ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ ಎಂದು ತಿಳಿಸಿದರು.

ಸೋಮನಾಥಪುರ ಗ್ರಾಪಂ ಉಪಾಧ್ಯಕ್ಷ ಸಿದ್ದಪ್ಪ ಮಾತನಾಡಿದರು. ಭಾರತೀಯ ಪ್ರಾಚ್ಯ ವಸ್ತು ಸಂಗ್ರಹಾಲಯದ ಅಪರ ಮಹಾ ನಿರ್ದೇಶಕ ಜಾಹನ್ವಿಜ್ ಶರ್ಮಾ, ಎಎಸ್‌ಐ ನಿರ್ದೇಶಕ ಮದನ್ ಸಿಂಗ್ ಚೌಹಾಣ್, ಪ್ರಾದೇಶಿಕ ನಿರ್ದೇಶಕ ಡಾ.ಜಿ.

> **6** ಸೋಮನಾಥಪುರದ ಚನ್ನಕೇಶವ ದೇವಾಲಯ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಯಾದಲ್ಲಿ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಲಿದೆ. ನಾನಾ ದೇಶಗಳಿಂದ ಹಲವು ಪ್ರವಾಸಿಗರು ಇಲ್ಲಿಗೆ ಆಗಮಿಸುವರು. ಇದರಿಂದ ಇಲ್ಲಿನ ಜನರ ವ್ಯಾಪಾರ–ವಹಿವಾಟು ಹೆಚ್ಚಾಗಿ ಸ್ಥಳೀಯರು ಆರ್ಥಿಕವಾಗಿ ಸಬಲರಾಗಬಹುದು.
> –ಸುಧಾಮೂರ್ತಿ, ಇನ್ಫೋಸಿಸ್ ಫೌಂಡೇಶನ್ ಸಂಸ್ಥಾಪಕಿ.

ಮಹೇಶ್ವರಿ, ಎಎಸ್‌ಐ ಅಧಿಕಾರಿ ಬಿಪಿನ್ ಚಂದ್ರ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪುರಾತತ್ವ ಇಲಾಖೆ ಜಂಟಿ ನಿರ್ದೇಶಕಿ ಮಂಜುಳಾ, ತಹಸೀಲ್ದಾರ್ ಸಿ.ಜಿ.ಗೀತಾ, ಉಪ ತಹಸೀಲ್ದಾರ್ ಸುಬ್ರಹ್ಮಣ್ಯ, ತಾಪಂ ಇಓ ಸಿ.ಕೃಷ್ಣ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಗ್ರಾಪಂ ಅಧ್ಯಕ್ಷೆ ಅರ್ಚನಾ, ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಮಾಜಿ ಅಧ್ಯಕ್ಷ ಕಾಂತರಾಜು, ಅಶೋಕ, ಪಿಡಿಓ ಸಂತೋಷ್ ಕುಮಾರ್, ಕಾರ್ಯದರ್ಶಿ ಸುಧೀರ್, ಕಂದಾಯ ನಿರೀಕ್ಷಕ ಶ್ಯಾಮ, ಗ್ರಾಮಲೆಕ್ಕಿಗ ಆನಂದ, ಗಣೇಶ್, ಪ್ರದೀಪ, ಮಹದೇವಸ್ವಾಮಿ ಇನ್ನಿತರರಿದ್ದರು.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.35 ಕೋಟಿ ಸಂಗ್ರಹ

ನಂಜನಗೂಡು, ಸೆ.16– ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹುಂಡಿಯಲ್ಲಿ 1.35 ಕೋಟಿ ರೂ. ಸಂಗ್ರಹವಾಗಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.



ದೇವಾಲಯದ ದಾಸೋಹ ಭವನದಲ್ಲಿ ಶುಕ್ರವಾರ 34 ಹುಂಡಿಗಳ ಏಣಿಕೆ ಕಾರ್ಯ ನಡೆಯಿತು. ಈ ವೇಳೆ 1,35,58,975 ರೂ., 131 ಗ್ರಾಂ ಚಿನ್ನ, 4 ಕೆಜಿ 100 ಗ್ರಾಂ ಬೆಳ್ಳಿ, 35 ವಿದೇಶಿ ಕರೆನ್ಸಿ ದೊರೆತಿದೆ. ನಗರದ ಬ್ಯಾಂಕ್ ಆಫ್ ಬರೋಡಾ ಹಾಗೂ ದೇವಾಲಯದ ಸಿಬ್ಬಂದಿ, ನೂರಕ್ಕೂ ಹೆಚ್ಚು ಸ್ವಸಹಾಯ ಸಂಘದ ಮಹಿಳಾ ಸದಸ್ಯೆಯರು ಹುಂಡಿಯ ಹಣ ಎಣಿಕೆಯಲ್ಲಿ ಭಾಗಿಯಾಗಿದ್ದರು. ದೇವಾಲಯದ ಎಇಓ ವೆಂಕಟೇಶ್ ಪ್ರಸಾದ್, ದಿನೇಶ್, ಶ್ರೀವಿದ್ಯಾ ನಾಥೇಶ್ವರ, ಲೆಕ್ಕಾಧಿಕಾರಿ ಗುರು ಮಲ್ಲಯ್ಯ, ಬ್ಯಾಂಕ್ ಆಫ್ ಬರೋಡಾ ವ್ಯವಸ್ಥಾಪಕ ಟಿ.ಕೆ.ನಾಯಕ್, ಸಿಬ್ಬಂದಿ, ಸಂಘದವರು ದೇವಸ್ಥಾನದ ಸಿಬ್ಬಂದಿ ಉಪಸ್ಥಿತರಿದ್ದರು.

ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ

ಮಲ್ಕುಂಡಿ, ಸೆ.16– ಸಹಕಾರ ಸಂಘದಲ್ಲಿ ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಗ್ರಾಪಂ ಅಧ್ಯಕ್ಷ ಚಂದ್ರು ತಿಳಿಸಿದರು.

ಹುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘವು ಪ್ರತಿ ವರ್ಷವು ಲಾಭದಲ್ಲಿ ಮುನ್ನಡೆಯುತ್ತಿದ್ದು, ಕೊರೊನಾ ನಡುವೆಯೂ ಸಂಘವು 3.75 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭಾಂಶಕ್ಕಾಗಿ ನಿಗದಿತ ಸಮಯದಲ್ಲಿ ಸಾಲ ಮರುಪಾವತಿಸಿ. ಸಂಘದ ಅಭಿವೃದ್ಧಿಗಾಗಿ ಎಲ್ಲರ ಸಹಕಾರ ಮುಖ್ಯ ಎಂದರು.



ಸಂಘದ ಅಧ್ಯಕ್ಷ ಗುರುಮಲ್ಲಪ್ಪ, ಉಪಾಧ್ಯಕ್ಷ ಮಹದೇವನಾಯಕ, ನಿರ್ದೇಶಕರಾದ ಎಂ.ವಿ.ಶಿವಕುಮಾರ್, ಪಿಣ್ಣಪ್ಪ ಸಣ್ಣಮಾದಪ್ಪ ಪುಟ್ಟಸ್ವಾಮಿ, ರತ್ನಮ್ಮ, ತ್ಯಾಗರಾಜ್, ಬ್ಯಾಂಕ್ ಪ್ರತಿನಿಧಿ ಹೆಚ್.ಎಲ್.ಕೃಷ್ಣ ಸಿಇಓ ಹೆಚ್.ಎಸ್. ನಾಗರಾಜಮೂರ್ತಿ, ಗುಮಾಸ್ತ ಆರ್. ಮಹದೇವಸ್ವಾಮಿ ಸೇರಿದಂತೆ ಪ್ರಮುಖರಿದ್ದರು.

ಜಿಲ್ಲಾಧಿಕಾರಿ ನಡೆ ಹಳ್ಳಿಗಳ ಕಡೆಗೆ ಕಾರ್ಯಕ್ರಮ

ಹುಣಸೂರು, ಸೆ.16– ಕಂದಾಯ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮ ಸೆ.17ರಂದು ತಾಲೂಕಿನ ಬಿಳಿಕೆರೆ ಹೋಬಳಿಯ ಬೀಚನಹಳ್ಳಿ ಗ್ರಾಮದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಬಹುದು ಎಂದು ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಶಾ ಕಾರ್ಯಕರ್ತೆಯರಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ

ಹುಣಸೂರು, ಸೆ.16– ಸಮುದಾಯದ ಆರೋಗ್ಯ ಕಾಪಾಡುವಲ್ಲಿ ಆಶಾ ಕಾರ್ಯಕರ್ತರ ಪಾತ್ರ ಅಪಾರ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ್‌ಕುಮಾರ್ ತಿಳಿಸಿದರು.

ನಗರದ ಶಿಕ್ಷಕರ ಭವನದಲ್ಲಿ ಆರೋಗ್ಯ ಇಲಾಖೆ ಮತ್ತು ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್‌ನ ಸರಗೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆ, ಇಂದಿರಾ ಐವಿಎಫ್ ಸಹಯೋಗದೊಂದಿಗೆ ತಾಲೂಕಿನ ಆಶಾ ಕಾರ್ಯಕರ್ತೆಯರಿಗೆ ಆಯೋಜಿಸಿದ್ದ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು ನಾಗರಿಕ ಸಮಾಜದಲ್ಲಿ ಆರೋಗ್ಯ, ಶಿಕ್ಷಣ, ಆಹಾರ ಪ್ರಮುಖವಾಗಿದ್ದು, ಕಳೆದ ಕೋವಿಡ್ ಸಂದರ್ಭದಲ್ಲಿ ಆಶಾ ಕಾರ್ಯಕರ್ತರ ಸೇವೆ ಅನುಪಮವಾದುದು. ಹೀಗಾಗಿ ಆರೋಗ್ಯ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನದಲ್ಲಿ ನಿಮ್ಮ ಜವಾಬ್ದಾರಿ ಪ್ರಮುಖವಾದದು ಎಂದರು.



ಸರಗೂರು ಆಸ್ಪತ್ರೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್ ಮಾತನಾಡಿ, ಸಂತಾನ ಹೀನತೆಯಲ್ಲಿ ಹೆಣ್ಣು–ಗಂಡಿನ ಪಾತ್ರ ಸಮಾನವಾದುದು. ಸಂತಾನ ಹೀನತೆಯನ್ನು ಪ್ರಾಥಮಿಕ ಹಂತದಲ್ಲಿ ಗುರುತಿಸಿ ಜಾಗೃತಿ ಮೂಡಿಸಿ ಸೂಕ್ತ ಸಲಹೆ ನೀಡಿದಲ್ಲಿ ಬಂಜೆತನ ನಿವಾರಿಸಬಹುದು. ಪ್ರಸ್ತುತ ಪ್ರನಾಳ ಶಿಶು ಸೌಲಭ್ಯ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳಿದ್ದು, ಈ ಬಗ್ಗೆ ಆಶಾ ಕಾರ್ಯಕರ್ತರು ಸಮಗ್ರ ಮಾಹಿತಿ ಪಡೆದು ಅಗತ್ಯವುಳ್ಳವರಿಗೆ ಮಾಹಿತಿ ನೀಡಿ, ಅವರ ಅನುಮಾನಗಳನ್ನು ಪರಿಹರಿಸುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಹಿರಿಯ ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ, ತಾಲೂಕು ಆಶಾ ಮೆಂಟರ್ ಸರಿತಾ ಮಾತನಾಡಿದರು. ಯೋಜನೆಯ ವ್ಯವಸ್ಥಾಪಕ ಕೃಷ್ಣ, ಆರೋಗ್ಯ ಕಾರ್ಯಕರ್ತರಾದ ಪ್ರದೀಪ, ಮಾದಯ್ಯ ಸೇರಿದಂತೆ ತಾಲೂಕಿನ 215 ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಪ್ರಧಾನಿ ಮೋದಿ ಹುಟ್ಟುಹಬ್ಬ: ವಿವಿಧ ಸೇವಾ ಕಾರ್ಯ ಕೈಗೊಳ್ಳಿ

- ವರುಣಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ಮನವಿ
- ನೂತನ ನಾಮ ನಿರ್ದೇಶಿತರಿಗೆ ಸನ್ಮಾನ



ತಿ.ನರಸೀಪುರ, ಸೆ.16– ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ವಿವಿಧ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಪ್ರಧಾನಿಯವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ಮನವಿ ಮಾಡಿದರು.

ವರುಣಾ ಕ್ಷೇತ್ರದ ಹಿರಿಯ ಬಿಜೆಪಿ ಮುಖಂಡರನ್ನು ಸರ್ಕಾರ ವಿವಿಧ ಸಮಿತಿಗಳಲ್ಲಿ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿದ ಹಿನ್ನೆಲೆಯಲ್ಲಿ ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನೂತನ ಸದಸ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆಯಲ್ಲಿ 17 ರಿಂದ ಅ.2ರವರೆಗೆ ಪಕ್ಷ ವಿವಿಧ ಸೇವಾ ಕಾರ್ಯ ಮಾಡುವಂತೆ ಆದೇಶ ನೀಡಿದೆ. ಸ್ವಚ್ಛತಾ ಕಾರ್ಯ, ರಕ್ತದಾನ ಶಿಬಿರ ಹಾಗೂ ಕಲ್ಯಾಣಿಗಳ ಜೀರ್ಣೋದ್ಧಾರ ಮಾಡುವ ಜೊತೆಗೆ ಅ.2ರ ಗಾಂಧಿ ಜಯಂತಿ ಯಂದು ಕಾರ್ಯಕರ್ತರೆಲ್ಲರೂ ಖಾದಿ ಬಟ್ಟೆ ಧರಿಸುವಂತೆ ಅವರು ಮನವಿ ಮಾಡಿದರು.

ಪಕ್ಷದ ಹಿರಿಯ ಮುಖಂಡರನ್ನು ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿದೆ. ಸದಸ್ಯರು ಪಕ್ಷ ನೀಡಿರುವ ಅವಕಾಶ ಸದುಪಯೋಗಪಡಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ. ಮಹದೇವಯ್ಯ ಮಾತನಾಡಿ, ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿ ಅಧಿಕಾರ ನೀಡುವ ಏಕೈಕ ಪಕ್ಷ ಬಿಜೆಪಿ. ಪಕ್ಷದಲ್ಲಿ ಸೇವೆಗೆ ತಕ್ಕ ಪ್ರತಿಫಲ ದೊರೆಯಲಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಅನೇಕ ಜನಪರ ಕೆಲಸ ಮಾಡುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ಸರ್ಕಾರಗಳು ಜಾರಿಗೆ ತಂದಿರುವ ಜನೋಪಯೋಗಿ ಕಾರ್ಯಕ್ರಮಗಳ ಬಗ್ಗೆ ನೂತನ ಸದಸ್ಯರು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಮುಂದಿನ ದಿನಗಳಲ್ಲಿ ಪಕ್ಷದ ಅಭಿವೃದ್ಧಿ ಜೊತೆಗೆ, ಬಲವರ್ಧನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ನಿಟ್ಟಿನಲ್ಲಿ ಶ್ರಮಿಸಬೇಕು ಎಂದರು.

ಇದೇ ವೇಳೆ ನೂತನ ಪುರಸಭಾ ಸದಸ್ಯರಾದ ಕೆ.ಗಣೇಶ್, ಚಿಕ್ಕ ಮಹದೇವ, ಸರ್ವಮಂಗಳಾ, ಭೂ ನ್ಯಾಯ ಮಂಡಳಿ ಸದಸ್ಯ ಶ್ರೀಧರ್, ತಾಪಂ ಕೆಡಿಪಿ ಸದಸ್ಯ ಎಂ.ಮಿಥುನ್, ನರಸಿಂಹಮೂರ್ತಿ, ಆರಾಧನಾ ಸಮಿತಿ ಸದಸ್ಯ ಹುಣಸೂರು ರಾಜಪ್ಪ, ಸಾರ್ವಜನಿಕ ಆಸ್ಪತ್ರೆ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಭೈರಾಪುರ ಬಾಲು ಅವರನ್ನು ಸನ್ಮಾನಿಸಲಾಯಿತು. ತಾಪಂ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗುನಾಯಕ, ಗರ್ಗೇಶ್ವರಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಆನಂದ ರಾಜು, ಎಸ್‌ಸಿ ಮೋರ್ಚಾ ಅಧ್ಯಕ್ಷ ಗಿರಿಧರ್, ಸೊಸ್ಲೆ ಶಿವಕುಮಾರ್, ಕ್ಷೇತ್ರ ಮಾಜಿ ಅಧ್ಯಕ್ಷ ಎ.ಎನ್.ಶಿವಯ್ಯ, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಹಾಜರಿದ್ದರು.

ರೈತರಲ್ಲಿ ಕ್ಷಮೆ ಕೇಳಿದ ಕಳಲೆ ಗ್ರಾಪಂ ಕಾರ್ಯದರ್ಶಿ

ಪ್ರತಿಭಟನೆ ಕೈ ಬಿಡುವಂತೆ ಮನವಿ

ನಂಜನಗೂಡು, ಸೆ.16– ಗ್ರಾಪಂ ಭ್ರಷ್ಟಾಚಾರ ಪ್ರಶ್ನಿಸಿದ್ದಕ್ಕಾಗಿ ರೈತ ಮುಖಂಡನ ಮೇಲೆ ಸುಳ್ಳು ದೂರು ದಾಖಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳಲೆ ಗ್ರಾಪಂ ಕಾರ್ಯದರ್ಶಿ ವಿದ್ಯಾಧರ್ ರೈತ ಸಂಘಟನೆ ಕ್ಷಮೆ ಕೋರಿ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದ್ದಾರೆ.



ಕೆಲ ದಿನಗಳ ಹಿಂದೆ ತಾಲೂಕಿನ ಕಳಲೆ ಗ್ರಾಪಂ ಅಭಿವೃದ್ಧಿ ವಿಚಾರವಾಗಿ ರೈತ ಮುಖಂಡರೊಬ್ಬರು ಗ್ರಾಪಂ ಕಾರ್ಯದರ್ಶಿ ವಿದ್ಯಾಧರ್ ಅವರನ್ನು ಪ್ರಶ್ನಿಸಿದರು. ಈ ವೇಳೆ ಕಾರ್ಯದರ್ಶಿ ರೈತ ಮುಖಂಡನನ್ನು ನಿಂದಿಸಿ, ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ರೈತ ಮುಖಂಡರು ಸೆ.20ರಂದು ಕಳಲೆ ಗ್ರಾಪಂ ಎದುರು ಪ್ರತಿಭಟನೆ ಹಮ್ಮಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಕಳಲೆ ಗ್ರಾಪಂ ಕಾರ್ಯದರ್ಶಿ ವಿದ್ಯಾಧರ್ ನಗರದ ತಾಪಂನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಗ್ರಾಪಂನಲ್ಲಿ ರೈತ ಮುಖಂಡ ಕಾರ್ತಿಕ್ ಅವರೊಂದಿಗೆ ನಾನು ಉದ್ವೇಗದಿಂದ ಮಾತನಾಡಿದ್ದೇನೆ. ಇದರಿಂದ ನಾನು ಪೊಲೀಸ್ ಠಾಣೆಗೆ ಹೋಗಬೇಕಾಯಿತು. ನಂತರ ನನಗೆ ನನ್ನ ತಪ್ಪಿನ ಅರಿವಾಗಿದೆ. ಆದ್ದರಿಂದ ನಾನು ರೈತ ಬಾಂಧವರಲ್ಲಿ ಹಾಗೂ ರೈತ ಸಂಘ ಮತ್ತು ಹಸಿರು ಸೇನೆ ಪದಾಧಿಕಾರಿಗಳಲ್ಲಿ ಕ್ಷಮೆ ಕೇಳುತ್ತೇನೆ. ಸೆ.20ರಂದು ಕಳಲೆ ಗ್ರಾಪಂನಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆ ಕೈಬಿಡಬೇಕು ಎಂದು ರೈತ ಸಂಘದ ಮುಖಂಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದರು.

ಇಂದು ವಿದ್ಯುತ್ ಅದಾಲತ್

ಹುಣಸೂರು, ಸೆ.16– ತಾಲೂಕಿನ ಯಮಗುಂಬ ಗ್ರಾಮದಲ್ಲಿ ಸೆ.17 ರಂದು ವಿದ್ಯುತ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸುತ್ತಮುತ್ತಲ ಗ್ರಾಮಸ್ಥರು ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ಸಹಾಯಕ ಕಾರ್ಯಪಾಲ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.24, ವಾರ್ಷಿಕ ಮಹಾಸಭೆ

ನಂಜನಗೂಡು, ಸೆ.16– ತಾಲೂಕಿನ ತಗಡೂರು ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಸೆ.24ರಂದು ಗ್ರಾಮದ ಜನತಾ ಶಾಲೆಯಲ್ಲಿ ಸಂಘದ ಅಧ್ಯಕ್ಷ ಗುರುಮಲ್ಲೇಶ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಿಇಓ ಸಿ.ಡಿ.ಮಹದೇವಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನಾ ಸಮಾರಂಭ ಮುಂದೂಡಿಕೆ

ಹೆಚ್.ಡಿ.ಕೋಟೆ, ಸೆ.16– ಇದೇ ತಿಂಗಳ 20 ರಂದು ಆಯೋಜಿಸಿದ್ದ ಜೆಡಿಎಸ್ ಮುಖಂಡ, ಸಮಾಜ ಸೇವಕ ಕೆ.ಎಂ.ಕೃಷ್ಣನಾಯಕ ಅವರ ಅಭಿನಂದನಾ ಸಮಾರಂಭ ಮುಂದೂಡಲಾಗಿದೆ ಎಂದು ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಎಂ.ಕೃಷ್ಣನಾಯಕ ಅವರು ಕೊರೊನಾ ಸಂದರ್ಭ ಕ್ಷೇತ್ರದ ಜನತೆಗೆ ಆಹಾರ, ಔಷಧಿ ಕಿಟ್, ಪಟ್ಟಣದ ಆಸ್ಪತ್ರೆಗೆ ಆಂಬುಲೆನ್ಸ್ ವಿತರಣೆ ಸೇರಿದಂತೆ ಇನ್ನಿತರ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಸೆ.20ರಂದು ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದೇವು. ಆದರೆ ಕೃಷ್ಣನಾಯಕರ ತಾಯಿ ನಿಧನರಾದ ಹಿನ್ನಲೆಯಲ್ಲಿ ಅಭಿನಂದನಾ ಸಮಾರಂಭವನ್ನು ಮುಂದೂಡಲಾಗಿದೆ ಎಂದರು.

ಕೋಟೆಯಲ್ಲಿ ಕೃಷ್ಣನಾಯಕ ಅವರು ತೆರೆದಿರುವ ಅಪ್ಪಾಜಿ ಕ್ಯಾಂಟಿನ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸರಗೂರಿನಲ್ಲೂ ಅಪ್ಪಾಜಿ ಕ್ಯಾಂಟೀನ್ ತೆರೆಯುವಂತೆ ಬೇಡಿಕೆ ಬಂದಿದ್ದು, ಅಲ್ಲಿಯೂ ಕ್ಯಾಂಟೀನ್ ಪ್ರಾರಂಭಿಸಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕ್ಯಾಂಟೀನ್ ಉದ್ಘಾಟಿಸಿ ಶುಭ ಹಾರೈಸಲಿ ದ್ದಾರೆ ಎಂದರು.

ಗೋಷ್ಠಿಯಲ್ಲಿ ಮುಖಂಡರಾದ ಶಂಭುಗೌಡ, ಯತೀಶ್, ರಘು, ಶಿವಮಲ್ಲಪ್ಪ, ಶಿವಕುಮಾರ್, ಜಿತೇಂದ್ರ, ಕಾಳಪ್ಪ, ಶಿವಯ್ಯ ಇದ್ದರು.

ಗೌತಮ್ ಅದಾನಿ ಈಗ ವಿಶ್ವದ 2ನೇ ಅತ್ಯಂತ ಶ್ರೀಮಂತ ವ್ಯಕ್ತಿ



ವಾಷಿಂಗ್ಟನ್: ಭಾರತದ ಕೈಗಾರಿಕೋದ್ಯಮಿ, ಅದಾನಿ ಗ್ರೂಪ್‌ನ ಅಧ್ಯಕ್ಷ ಗೌತಮ್ ಅದಾನಿ ಅವರು ಅಮೆಜಾನ್‌ನ ಮುಖ್ಯಸ್ಥ ಜೆಫ್ ಬೆಜೋಸ್ ಅವರನ್ನು ಹಿಂದಿಕ್ಕಿ ಇದೀಗ ವಿಶ್ವದ 2ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ.

ಅಮೆರಿಕದ ನಿಯತಕಾಲಿಕೆ ಫೋರ್ಬ್ಸ್ ಪ್ರಕಾರ, ಟೆಸ್ಲಾ ಸಿಇಒ ಎಲೋನ್ ಮಸ್ಕ್ ಅವರು 273.5 ಬಿಲಿಯನ್ ಡಾಲರ್ (ಸುಮಾರು 21 ಲಕ್ಷ ಕೋಟಿ ರೂ.) ನಿವ್ವಳ ಆಸ್ತಿ ಹೊಂದಿದ್ದು, ವಿಶ್ವದ ಶ್ರೀಮಂತ ವ್ಯಕ್ತಿಯ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿಯೇ ಉಳಿದುಕೊಂಡಿದ್ದಾರೆ. ಗೌತಮ್ ಅದಾನಿ ಅವರು ಪ್ರಸ್ತುತ 154.7 ಬಿಲಿಯನ್ ಡಾಲರ್(12.33 ಲಕ್ಷ ಕೋಟಿ ರೂ.) ಆಸ್ತಿಯನ್ನು ಹೊಂದಿದ್ದು, ವಿಶ್ವದ 2ನೇ ಶ್ರೀಮಂತ ವ್ಯಕ್ತಿಯೆನಿಸಿಕೊಂಡಿದ್ದಾರೆ.

ಕಳೆದ ತಿಂಗಳಷ್ಟೇ ಅದಾನಿ ಅವರು ಲೂಯಿ ವಿಟಾನ್‌ನ ಬರ್ನಾರ್ಡ್ ಅರ್ನಾಲ್ಟ್ ಅವರನ್ನು ಹಿಂದಿಕ್ಕಿ ವಿಶ್ವದ 3ನೇ ಶ್ರೀಮಂತ ವ್ಯಕ್ತಿಯಾಗಿ ಹೊರಹೊಮ್ಮಿದ್ದರು. ಅರ್ನಾಲ್ಟ್ ಈಗ ಅವರ ಕುಟುಂಬದ ಒಟ್ಟು ನಿವ್ವಳ ಮೌಲ್ಯ 153.5 ಬಿಲಿಯನ್ ಡಾಲರ್(12.24 ಲಕ್ಷ ಕೋಟಿ ರೂ.) ಇದ್ದು, 3ನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ. ಬೆಜೋಸ್ ಅವರ ಆಸ್ತಿ 149.7 ಬಿಲಿನ್ ಡಾಲರ್‌ಗೆ(11.93 ಲಕ್ಷ ಕೋಟಿ ರೂ.) ಕುಸಿತವಾಗಿದ್ದು, 4ನೇ ಸ್ಥಾನದಲ್ಲಿದ್ದಾರೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮುಖ್ಯಸ್ಥ ಮುಖೇಶ್ ಅಂಬಾನಿ ಅವರು 92 ಬಿಲಿಯನ್ ಡಾಲರ್(7.33 ಲಕ್ಷ ಕೋಟಿ ರೂ.) ಆಸ್ತಿ ಹೊಂದಿದ್ದು, ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ 8ನೇ ಸ್ಥಾನದಲ್ಲಿದ್ದಾರೆ.

ವಿದೇಶ ಪ್ರವಾಸ



ಟಿ.ಆರ್.ವಿಜಯ ಎ.ಮಂಜುನಾಥ್ (ಪಾತ್ರೆ ಮಂಜು) ನಂಜನಗೂಡು

20.09.2022 ಮಂಗಳವಾರ ವಿದೇಶ ಪ್ರವಾಸಕ್ಕೆ ತೆರಳುತ್ತಿರುವ ಇವರ ಪ್ರಯಾಣ ಸುಖಕರವಾಗಿರಲೆಂದು ಹಾರೈಸುವರು.



ಟಿ.ಆರ್.ಶಿವಕುಮಾರ್
ಅಧ್ಯಕ್ಷರು ಬಿ.ಸಿ.ಸಿ.ಎಸ್. ಹಾಗೂ ನಿರ್ದೇಶಕರು ಬೆಂಗಳೂರು ಮತ್ತು ಬಸವ ಗೃಹ ನಿರ್ಮಾಣ ಮಂಡಳಿ, ಅಧ್ಯಕ್ಷರು ಹಾಗೂ ನಿರ್ದೇಶಕರು, ಮೈಸೂರು ಜಿಲ್ಲೆ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ರತೀಶ್ ಕುಮಾರ್

ಇವರು ದಿ. 07.09.2022 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 17.09.2022 ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸ್ವಗೃಹ ಬಾಬುರಾಯನಕೊಪ್ಪಲು ಗ್ರಾಮ ಶ್ರೀರಂಗಪಟ್ಟಣ ತಾ॥ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ದುಃಖತಪ್ತರು: ತಂದೆ, ತಾಯಿ: ಸಾವಿತ್ರಮ್ಮ ಮತ್ತು ಚಲುವರಾಜು ಪತ್ನಿ: ಶ್ರೀಮತಿ ಧನಲಕ್ಷ್ಮಿ, ಅಣ್ಣ ತಮ್ಮಂದಿರು, ಹಾಗೂ ಕುಟುಂಬವರ್ಗ

ಸಾರ್ವಜನಿಕರ ಗಮನಕ್ಕೆ

ಬೆಂಗಳೂರು ನಗರ, ಗಂಗಾ ನಗರದ ಸಿಬಿಐಆರ್‌ಬಿಐ ಕಾಲನಿ, 1ನೇ ಮೇನ್, ಕ್ರಿಯೇಟಿವ್ ವಿಲ್ಲಾ ನಂ.44/5, ನಂ.203 ಇಲ್ಲಿ ವಾಸವಾಗಿರುವ ಶ್ರೀ.ಕೆ.ಗೋಪಾಲಕೃಷ್ಣ ಕೆದ್ಲಾಯ ಮತ್ತು ಅವರ ಮಕ್ಕಳು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾಗಿದ್ದು ಅವರುಗಳು ನಮ್ಮ ಕಕ್ಷಿದಾರರುಗಳಿಗೆ ಮಾರಾಟ ಮಾಡಲು ಉದ್ದೇಶಿಸಿರುವುದು ಸರಿಯಷ್ಟೆ.

ಈ ಕೆಳಗೆ ಕಾಣಿಸಿರುವ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ತರಹದ ಹಕ್ಕು, ಒಡೆತನ, ಹೊಣೆಗಾರಿಕೆ, ಸ್ವಾಧೀನ, ಅಥವಾ ಆಸಕ್ತಿ ಇದ್ದಲ್ಲಿ ಕೆಳಗೆ ಕಾಣಿಸಿರುವ ವಿಳಾಸಕ್ಕೆ ದಾಖಲಾತಿಗಳ ಸಮೇತ ತಕರಾರನ್ನು ಬರವಣಿಗೆ ಮೂಲಕ ಈ ನೋಟಿಸಿನಿಂದ 15 ದಿವಸಗಳೊಳಗಾಗಿ ತಿಳಿಸತಕ್ಕದ್ದು, ಒಂದು ವೇಳೆ ಯಾವುದೇ ತಕರಾರು ಅಥವಾ ಹಕ್ಕಿನ ಬಗ್ಗೆ ಮಾಹಿತಿ ಬಾರದೆ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಕ್ರಯಪತ್ರದ ಮೂಲಕ ನೋಂದಣಿ ಮಾಡಿಕೊಂಡು ಮುಂದುವರೆಯುತ್ತಾರೆಂದು ತಿಳುವಳಿಕೆ ನೀಡುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಮ್ಮಣ್ಣಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.56 ರ ವಿಸ್ತೀರ್ಣ 3.24 ಗುಂಟೆ ಮತ್ತು 16.00 ಗುಂಟೆ ಖರಾಬು ಒಟ್ಟು ವಿಸ್ತೀರ್ಣ 4.00 ಎಕರೆ ಜಮೀನಿಗೆ ಚೆಕ್ಕುಬಂಧಿ:

ಪೂರ್ವಕ್ಕೆ : ಬೋರಯ್ಯನ ಸಿದ್ದೇಗೌಡನಿಗೆ ಸೇರಿದ ಜಮೀನು (ಹಾಲಿ ಇಂದಾವರ ಬಡಾವಣೆ ಸರ್ವೆ ನಂ. 10 ಮತ್ತು 11) ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಶ್ರೀ ಕೆ. ಗೋಪಾಲಕೃಷ್ಣ ಕೆದ್ಲಾಯರವರಿಗೆ ಸೇರಿದ ಜಮೀನು ದಕ್ಷಿಣಕ್ಕೆ: ಜಮೀನು ಸರ್ವೆ ನಂ.23.

ವಕೀಲರ ವಿಳಾಸ:
ಶ್ರೀ ಪಿ.ಕೆ.ಪೊನ್ನಯ್ಯ, ವಕೀಲರು
ನಂ.1662/1ಎ, 1ನೇ ಫ್ಲೋರ್ ರಾಧಮಾಧವ ಕನೆಕ್ಟ್, ವಾತ್ಸಲ್ಯ ಆಸ್ಪತ್ರೆ ಪಕ್ಕ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು-570004.

ಶ್ರೀ ಶಾಲಿವಾಹನ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ.,

#2561/ಡಿ-12, 2ನೇ ಕ್ರಾಸ್, ಆದಿಪಂಪ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು – 570002
ಫೋನ್ : 2412988

ಮೇಲ್ಕಂಡ ಸಹಕಾರ ಸಂಘದ 2021–22ನೇ ಸಾಲಿನ 19ನೇ ಸರ್ವ ಸದಸ್ಯರ ಸಭೆಯು ದಿನಾಂಕ 18.09.2022ರಂದು ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಮೈಸೂರು ನಗರದ ಹೆಬ್ಬಾಳ್ 1ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಶ್ರೀ ಸಿದ್ದಾಪ್ಪಾಜಿ ದೇವಸ್ಥಾನದ ಕುಂಬಾರ ಸಮುದಾಯ ಭವನದಲ್ಲಿ ಜರುಗುವುದು. ಸದಸ್ಯರೆಲ್ಲರೂ ಸಕಾಲದಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇನೆ.

ಸಹಿ/– ಕೆ.ಪಿ.ವೆಂಕಟೇಶ್, ಅಧ್ಯಕ್ಷರು
ಸಹಿ/– ಜಿ.ನಿರ್ಮಲ ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ರಾಮಲಿಂಗ ಚೌಡೇಶ್ವರಿ ವೀವರ್ಸ್ ಕೋ-ಆಪರೇಟಿವ್ ಸೊಸೈಟಿ ಲಿ.

ನಂ.79, ಕೆ.ಟಿ.ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು

ಮೇಲ್ಕಂಡ ಸೊಸೈಟಿಯ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಸ್.ರವಿನಾಥ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 18.09.2022ನೇ ಭಾನುವಾರ ಸಂಜೆ: 4.00 ಘಂಟೆಗೆ ಕೆ.ಟಿ.ರಸ್ತೆಯಲ್ಲಿರುವ ದೇವಾಂಗ ಭವನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಸವಿನಯ ಪ್ರಾರ್ಥನೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/–ಎಸ್.ನಂಜುಂಡಯ್ಯ, ವೇತನಾ ಕಾರ್ಯದರ್ಶಿ

ವಿಶೇಷ ಸೂಚನೆ: ಸದಸ್ಯರು ತಮ್ಮ ವಿಳಾಸ ಬದಲಾವಣೆ ಆಗಿದ್ದರೆ ನೂತನ ವಿಳಾಸವನ್ನು ತಿಳಿಸಬೇಕಾಗಿ ಕೋರಲಾಗಿದೆ.

ಎಲ್ಲರಿಗೂ ನನ್ನ ಗೌರವ ಪೂರ್ವಕವಾದ ನಮಸ್ಕಾರಗಳು..



ಕೆ. ಕೆಂಪೇಗೌಡರು
ಮಾಜಿ ಶಾಸಕರು, ಪಾಂಡವಪುರ ಕ್ಷೇತ್ರ
ನಿಧನ: 08/09/2022

ದಿನಾಂಕ 08/09/2022 ಗುರುವಾರ ದಂದು ನನ್ನ ಮಾವನವರಾದ ಕೆ. ಕೆಂಪೇಗೌಡರು, ಮಾಜಿ ಶಾಸಕರು ಪಾಂಡವಪುರ ಕ್ಷೇತ್ರ ಇವರು ದೈವಾಧೀನರಾಗಿರುವುದು ತಮಗೆ ತಿಳಿದ ವಿಚಾರವಾಗಿದೆ ಆದಾಗ್ಯೂ ಮತ್ತೊಮ್ಮೆ ತಿಳಿಸಲು ವಿಷಾದಿಸುತ್ತೇನೆ.

ಇವರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 18/09/2022 ಭಾನುವಾರ ಬೆಳಿಗ್ಗೆ 11-00 ಗಂಟೆಗೆ ಚಿನಕುರಳಿ ಗ್ರಾಮದ ತೋಟದ ಮನೆಯ ಹತ್ತಿರ ನಡೆಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಇದನ್ನೆ ಆಹ್ವಾನ ಪತ್ರಿಕೆ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ತಮ್ಮಲ್ಲಿ ಗೌರವ ಪೂರ್ವಕವಾಗಿ ವಿನಂತಿಸುತ್ತೇನೆ.

ವಂದನೆಗಳೊಂದಿಗೆ. ಇಂತಿ,
ಡಾ. ವೈ. ಪಿ. ಚಂದ್ರಶೇಖರ.
ಶ್ರೀಮತಿ ಸಿ. ಕೆ. ಶಾಂತ ಚಂದ್ರಶೇಖರ ಮತ್ತು ಮಕ್ಕಳು
ಮೊ: 9900119917

ಜಿಲ್ಲಾ ಪಂಚಾಯತ್ ಕಾರ್ಯಾಲಯ

ಜಿಲ್ಲಾ ಆಡಳಿತ ಭವನ, ನೆಲ ಮಹಡಿ, ಚಾಮರಾಜನಗರ ಜಿಲ್ಲೆ–571313
ಇ–ಮೇಲ್: ceochanagar@gmail.com ದೂರವಾಣಿ ಸಂಖ್ಯೆ: 08226–224013 ಫ್ಯಾಕ್ಸ್ ಸಂಖ್ಯೆ: 08226–224014

ಸಂ: ಜಿಪಂಚಾ:ಆಡಳಿತ(2):02:2022–23 ದಿನಾಂಕ: 14–09–2022

ಚಾಮರಾಜನಗರ ಜಿಲ್ಲಾ ಪಂಚಾಯಿತಿ ಕಛೇರಿಯ ಉಪಯೋಗಕ್ಕಾಗಿ ಲೇಖನ ಹಾಗೂ ಇತರೆ ಸಾಮಾಗ್ರಿಗಳನ್ನು ಟೆಂಡರ್ ಮೂಲಕ ಪಡೆಯುವ ಬಗ್ಗೆ

ಚಾಮರಾಜನಗರ ಜಿಲ್ಲಾ ಪಂಚಾಯಿತಿ ಕಛೇರಿ ಉಪಯೋಗಕ್ಕಾಗಿ ಲೇಖನ ಮತ್ತು ಇತರೆ ಸಾಮಾಗ್ರಿಗಳನ್ನು ಟೆಂಡರ್ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮಗಳು 2000 ರ ಪ್ರಕಾರ ಸಂಸ್ಥೆಗಳ ಮೂಲಕ 2022–23ನೇ ಸಾಲಿಗೆ ಪಡೆಯಲು ಉದ್ದೇಶಿಸಲಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	ಸಂ:ಜಿಪಂಚಾ:ಆಡಳಿತ(2):02:2022–23 ದಿನಾಂಕ: 15–09–2022
2	ಟೆಂಡರ್ ಫಾರಂ ಸಲ್ಲಿಸುವ ದಿನಾಂಕ	15–09–2022
3	ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ	30–09–2022 ರಂದು ಸಂಜೆ 4–00 ಗಂಟೆಗೆ
4	ಟೆಂಡರ್ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಪಂಚಾಯತ್ ಕಛೇರಿ, ಕೊಠಡಿ ಸಂಖ್ಯೆ: 04, 01–10–2022 ರ ಬೆಳಿಗ್ಗೆ 11–00 ಗಂಟೆಗೆ
5	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ	ರೂ. 20,000/–
6	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:	ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ. ದೂರವಾಣಿ ಸಂಖ್ಯೆ: 08226–224015
7	ಅವಶ್ಯಕವಿರುವ ಲೇಖನ ಹಾಗೂ ಇತರೆ ಸಾಮಾಗ್ರಿಗಳ ವಿವರ	ಪ್ರತ್ಯೇಕ ಪಟ್ಟಿ ಲಗತ್ತಿಸಿದ್ದು, ಪ್ರತಿಯೊಂದು ಸಾಮಾಗ್ರಿಗಳಿಗೂ ದರವನ್ನು ನಮೂದಿಸಬೇಕು.

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಚಾಮರಾಜನಗರ

ವಾಸಾಸಂಇ:ಚಾನಗರ:303:2022–23

ಸ್ಥಾಪನೆ:1923

ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು
ದೂರವಾಣಿ: 0821–2442864 ಮೊಬೈಲ್ ಸಂ: 9972039899

98ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರುಗಳೇ,ಈ ಬ್ಯಾಂಕಿನ 2021–22ನೇ ಸಾಲಿನ 98ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 18.09.2022ರಂದು ಭಾನುವಾರ ಬೆಳಗ್ಗೆ 10.00 ಗಂಟೆಗೆ ಸರಿಯಾಗಿ ಮೈಸೂರು ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ.

ನಮ್ಮ ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಎನ್.ಶ್ರೀನಿವಾಸ ಬಿ.ಕಾಂ, ಎಲ್‌ಎಲ್‌ಬಿ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ.

ಈಗಾಗಲೇ ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪ್ರಕಟಣೆಯು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ತಮ್ಮ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತಂದು ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ : 15.09.2022 ಸಹಿ/– ಹೆಚ್.ಎಸ್.ವೀಣಾ ಪ್ರಭಾರ ವ್ಯವಸ್ಥಾಪಕರು

ಶ್ರೀ.ಎನ್.ಶ್ರೀನಿವಾಸ–ಅಧ್ಯಕ್ಷರು, ಶ್ರೀ.ಆರ್.ಅನಂತರಾಮು–ಉಪಾಧ್ಯಕ್ಷರು,
ನಿರ್ದೇಶಕರುಗಳಾದ : ಪ್ರೊ. ಪಿ.ವಿ.ನರಹರಿ, ಶ್ರೀ.ಕೆ.ಜಿ.ಸತೀಶ್, ಶ್ರೀಮತಿ.ಎಂ.ಎ.ಹೇಮಲತ, ಶ್ರೀ.ಟಿ.ಎಸ್.ರವಿಶಂಕರ್, ಶ್ರೀ.ಎಸ್.ಎನ್.ಜಗದೀಶ್, ಶ್ರೀಮತಿ.ಸುಜಾತವೆಂಕಟರಾಜು, ಡಾ.ಕೆ.ವಿ.ಲಕ್ಷ್ಮೀದೇವಿ, ಡಾ. ಸುಜಾತ.ಎಸ್.ರಾವ್, ಶ್ರೀಮತಿ. ಸಿ.ಕಮಲಮ್ಮ, ಶ್ರೀ.ಎಂ.ಎಸ್.ರಾಜಾರಾಂ,
ವೃತ್ತಿಪರ ನಿರ್ದೇಶಕರಾದ: ಶ್ರೀ.ಟಿ.ಎನ್.ಸುಬ್ರಹ್ಮಣ್ಯ, ಶ್ರೀ.ಎಂ.ಆರ್.ಗೋವಿಂದರಾಜು

ವಿಶೇಷ ಸೂಚನೆ: ಬ್ಯಾಂಕಿನ 2021–22ನೇ ಸಾಲಿನ ಲಾಭ–ನಷ್ಟದ ತಃಖ್ತೆ, ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ವೆಬ್ ಸೈಟ್ gcbmys.com ನಲ್ಲಿ ಸಹ ಪರಿವೀಕ್ಷಿಸಲು ಲಭ್ಯವಿರುತ್ತದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಯಡಿಯಾಲ, ನಂಜನಗೂಡು ತಾಲ್ಲೂಕು

ಸನ್ಮಾನ್ಯ ಸಹಕಾರಿ ಬಂಧುಗಳೇ,
ಮೇಲ್ಕಂಡ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿ: 24.09.2022ನೇ ಶನಿವಾರ ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಆವರಣದಲ್ಲಿ ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀಮಾನ್ ಬಿ.ಎಸ್.ಮಹದೇವಪ್ಪನವರು ಅಧ್ಯಕ್ಷತೆ ವಹಿಸುವರು. ಸಂಘದ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.
(ಸರ್ಕಾರದ ಆದೇಶದ ಪ್ರಕಾರ ಸಂಘದ ಬೈಲಾ ತಿದ್ದುಪಡಿಯಾಗಿದ್ದು ಈಗಿನ ಷೇರು ಹಣ 500 ರೂ. ಆಗಿರುತ್ತದೆ. ಸದಸ್ಯರ ಷೇರು ಖಾತೆಯಲ್ಲಿ ಕಡಿಮೆ ಷೇರು ಹಣ ಇರುವವರು ಬಾಕಿ ಹಣವನ್ನು 3 ತಿಂಗಳೊಳಗೆ ಕಟ್ಟತಕ್ಕದ್ದು, ಇಲ್ಲವಾದಲ್ಲಿ ನಿಮ್ಮ ಷೇರು ಹಣವನ್ನು ಅಮಾನತ್ತು ಖಾತೆಯಲ್ಲಿ ಇಡಲಾಗುತ್ತದೆ.)

ಕಾರ್ಯಕಾರಿ ಮಂಡಳಿಯ ಅಪ್ಪಣೆಯ ಮೇರೆಗೆ, ಸಹಿ/–ಶ್ರೀ ಹೆಚ್.ಡಿ.ಶಿವಕುಮಾರ್,
ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹೆಡಿಯಾಲ ಪಿ.ಎ.ಸಿ.ಎಸ್.ಲಿ.,

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಆಲನಹಳ್ಳಿ, ನೇತಾಜಿನಗರ, ಸಿ.ಎ.ಸೈಟ್, ಮೈಸೂರು–570028

2021-2022 ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯರೆ,
ಈ ಮೂಲಕ ಸರ್ವ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, **ದಿನಾಂಕ: 18–09–2022 ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ 2021–2022** ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಅಧ್ಯಕ್ಷರಾದ ಶ್ರೀ ಟಿ.ಎನ್.ನಾಗೇಶ್, ಉಪಾಧ್ಯಕ್ಷರಾದ ಶ್ರೀ ಮರೀಗೌಡ, ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಆಲನಹಳ್ಳಿ, ನೇತಾಜಿನಗರ, ಸಿ.ಎ.ಸೈಟ್, ಮೈಸೂರು ರವರ ಅಧ್ಯಕ್ಷತೆಯಲ್ಲಿ **4ನೇ ಹಂತದ ಬಡಾವಣೆ ದಾರಿಪುರ ಗ್ರಾಮದ ಸಂಘದ ಜಮೀನಿನಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಆದುದರಿಂದ ಸದಸ್ಯರು ತಪ್ಪದೆ ಸಭೆಯಲ್ಲಿ ಭಾಗವಹಿಸಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುವಂತೆ ಸಹಕರಿಸಲು ಕೋರಲಾಗಿದೆ. ಆದುದರಿಂದ ದಯಮಾಡಿ ಎಲ್ಲರು ಈ ಸಭೆಗೆ ತಪ್ಪದೆ ಬೆಳಿಗ್ಗೆ 11.00 ಗಂಟೆಗೆ ಹಾಜರಾಗಬೇಕಾಗಿ ಕೋರಲಾಗಿದೆ.

ದಿನಾಂಕ: 29–08–2022
ಸ್ಥಳ: ಮೈಸೂರು ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸಹಿ/–	ಸಹಿ/–	ಸಹಿ/–
(ಟಿ.ಎನ್.ನಾಗೇಶ್)	(ಮರೀಗೌಡ)	(ಎಂ.ರಮ್ಯ)
ಅಧ್ಯಕ್ಷರು	ಉಪಾಧ್ಯಕ್ಷರು	ಕಾರ್ಯದರ್ಶಿ

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

"ಸಹಕಾರ ಸಂಕೀರ್ಣ" ಸಹಕಾರ ಭವನ ಚಾಮರಾಜ ಜೋಡಿ ರಸ್ತೆ, ಮೈಸೂರು – 570004
ದೂರವಾಣಿ ಸಂಖ್ಯೆ : 4192145/9008033838 Email: info@mahilabank.in Website: www.mahilabank.in

ಆಹ್ವಾನ ಪತ್ರಿಕೆ

ಬ್ಯಾಂಕಿನ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿ: 18.09.2022ನೇ ಭಾನುವಾರ ಬೆಳಿಗ್ಗೆ 10.30ಗಂಟೆಗೆ ಬ್ಯಾಂಕಿನ ಪ್ರಧಾನ ಕಛೇರಿಯಾದ ನಂ.9,'ಕೆ' ಬ್ಲಾಕ್, ಆದಿಚುಂಚನಗಿರಿ ರಸ್ತೆ, ಅಶೋಕಪುರಂ ಪೋಲೀಸ್ ಸ್ಟೇಷನ್ ಹಿಂಭಾಗ, ಕುವೆಂಪುನಗರ, ಮೈಸೂರು –570023ರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಸುಶೀಲಾ ನಂಜಪ್ಪರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದ್ದು. ಬ್ಯಾಂಕಿನ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಒಳಗೊಂಡ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದೆ. ವರದಿ ಪುಸ್ತಕ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ.

ಮಾನ್ಯ ಸದಸ್ಯರು ಮಹಾಸಭೆಗೆ ಬರುವಾಗ ಬ್ಯಾಂಕಿನಿಂದ ನೀವು ಪಡೆದಿರುವ ಭಾವಚಿತ್ರವಿರುವ ಷೇರು ಪುಸ್ತಕ ಹಾಗೂ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ. ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸಹಿ/– ಎನ್.ಸುಮಾ ಬಿ.ಕಾಂ, ವ್ಯವಸ್ಥಾಪಕರು

ವಿಶೇಷ ಸೂಚನೆ :
1. ದಿ.18.09.2022 ರಂದು ಬ್ಯಾಂಕಿನ ಮಹಾಸಭೆ ನಡೆಯುವ ಪ್ರಯುಕ್ತ ದಿ:19.09.2022ನೇ ಸೋಮವಾರ ಬ್ಯಾಂಕಿಗೆ ರಜೆ ಘೋಷಿಸಲಾಗಿದೆ.
2. ವಾರ್ಷಿಕ ಮಹಾಸಭೆಯ ದಿನದಂದು ಬ್ಯಾಂಕಿನ ಸದಸ್ಯರಿಗೆ ಸಹಿತಿಂಡಿ ವಿತರಿಸುವ ಏರ್ಪಾಡು ಇರುತ್ತದೆ. ದಿ.18–09–2022 ರಂದು ಮಾತ್ರ ಬೆಳಿಗ್ಗೆ 10.30 ರಿಂದ 4.00 ಗಂಟೆಯವರೆಗೆ ವಿತರಿಸಲಾಗುವುದು. ನಂತರ ಬ್ಯಾಂಕಿನಲ್ಲಿ ವಿತರಿಸುವ ಏರ್ಪಾಡು ಇರುವುದಿಲ್ಲ. ಮಾನ್ಯ ಸದಸ್ಯರು ಸಹಕರಿಸಬೇಕಾಗಿ ಆಡಳಿತ ಮಂಡಳಿಯು ವಿನಂತಿಸುತ್ತದೆ.
3.ಮಾನ್ಯ ಸದಸ್ಯರು ಮಹಾಸಭೆಯಲ್ಲಿ ತಪ್ಪದೇ ಬ್ಯಾಂಕಿನ ನಿಗಧಿತ ರಿಜಿಸ್ಟರ್‌ನಲ್ಲಿ ತಮ್ಮ ಹಾಜರಾತಿಯನ್ನು ಸಹಿ ಮಾಡುವ ಮೂಲಕ ದಾಖಲಿಸಲು ಕೋರಿದೆ.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.

ತಿ. ನರಸೀಪುರ ತಾಲೂಕು, ಮೈಸೂರು ಜಿಲ್ಲೆ

2021-22 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ,

ಮಾನ್ಯ ಸಹಕಾರಿ ಬಂಧುಗಳೇ ,
ಮೇಲ್ಕಂಡ ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 20–09–2022 ರ ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ, ಸ್ಥಳ: ಟಿ.ಎ.ಪಿ.ಸಿ. ಎಂ. ಎಸ್, ರೈತ ಭವನ ಆವರಣ ತಿ. ನರಸೀಪುರದಲ್ಲಿ ಅಧ್ಯಕ್ಷರಾದ ಶ್ರೀ ಮಲ್ಲಣ್ಣನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ಅಂಚೆ ಮೂಲಕ ಸರ್ವ ಸದಸ್ಯರಿಗೆ ಆಹ್ವಾನ ಪತ್ರಿಕೆಯನ್ನು ಕಳಿಸಲಾಗಿದೆ, ಮಾನ್ಯ ಸರ್ವ ಸದಸ್ಯರುಗಳು ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಎಂದು ಪರಿಗಣಿಸಿ ಸಭೆಗೆ ಆಗಮಿಸಬೇಕಾಗಿ ಕೋರುತ್ತೇವೆ , ಮಾಸ್ಕನ್ನು ಕಡ್ಡಾಯವಾಗಿ ಧರಿಸಬೇಕು–ಆರೋಗ್ಯದಿಂದಿರಿ, .

ಕಾರ್ಯಕಾರಿ ಮಂಡಳಿ ಅಪ್ಪಣೆಯ ಮೇರೆಗೆ
ಸಹಿ/– ರಾಜಪ್ಪ, ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

ಕುಂಚಿಟಿಗರ ಸಂಘ (ರಿ)



(ಧರ್ಮಪರಾಯಿಣಿ ಶ್ರೀಮತಿ ಆಲಮ್ಮನವರ ಛತ್ರ)
ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570001
ದೂ: 9035389047

ಸರ್ವಸದಸ್ಯರ ಮಹಾಸಭೆಗೆ ಆಹ್ವಾನ ಪತ್ರಿಕೆ

ಮೈಸೂರು ಕುಂಚಿಟಿಗರ ಸಂಘ(ರಿ)ದ ಸರ್ವಸದಸ್ಯರ ಮಹಾಸಭೆಯು **ದಿನಾಂಕ: 30.01.2022** ರಂದು ನಡೆಸಲು ತೀರ್ಮಾನಿಸಿ ಈಗಾಗಲೇ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿರುತ್ತದೆ. ಆದರೆ ಕೊರೊನಾ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಸಭೆ–ಸಮಾರಂಭಗಳನ್ನು ನಡೆಸಲು ಅವಕಾಶ ಇರಲಿಲ್ಲದ ಕಾರಣ **ದಿನಾಂಕ: 30.01.2022** ರ ಮಹಾಸಭೆಯನ್ನು ಮುಂದೂಡಲಾಗಿತ್ತು. ಆದಕಾರಣ ಮುಂದೂಡಿದ **ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ: 18.09.2022** ರ **ಭಾನುವಾರ ಬೆಳಗ್ಗೆ 10.30 ಗಂಟೆಗೆ ಕುಂಚಿಟಿಗರ ಸಂಘದ** ಅಧ್ಯಕ್ಷರಾದ ಶ್ರೀ.ಎಂ.ಪಿ. ನಾಗರಾಜರವರ ಅಧ್ಯಕ್ಷತೆಯಲ್ಲಿ **ಧರ್ಮಪರಾಯಿಣಿ ಶ್ರೀಮತಿ ಆಲಮ್ಮನವರ ಛತ್ರದ ಆವರಣದಲ್ಲಿ** ನಡೆಸಲು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ ಮಾನ್ಯ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಮಹಾಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕಾಗಿ ಕೋರುತ್ತೇವೆ.

ಸ್ಥಳ: ಮೈಸೂರು. ಕಾರ್ಯಕಾರಿ ಪರಿಷತ್ತಿನ ಅಪ್ಪಣೆ ಮೇರೆಗೆ
ದಿನಾಂಕ: 16.09.2022 ಸಹಿ/– ಶ್ರೀ. ಎಂ.ಆರ್. ಯೋಗೀಶ, ಗೌರವ ಕಾರ್ಯದರ್ಶಿ

ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ

#48, 2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜಯನಗರ,
ಮೈಸೂರು–570014. ದೂರವಾಣಿ : 2567755, 6364021414
Email : saptharshimys@gmail.com

25ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೇ,
ನಮ್ಮ ಸಹಕಾರಿಯ 2021–22ನೇ ಸಾಲಿನ ಮಹಾಸಭೆಯನ್ನು **ದಿನಾಂಕ 18.09.2022ನೇ ಭಾನುವಾರ ಬೆಳಗ್ಗೆ 10.30 ಗಂಟೆಗೆ** ಸರಿಯಾಗಿ **ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ** ಸಹಕಾರಿಯ ಅಧ್ಯಕ್ಷರಾದ **ಶ್ರೀ ಎನ್.ನಾಗಚಂದ್ರ** ಇವರ ಘನ ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹಾಸಭೆ ನಡೆಸಲು ತೀರ್ಮಾನಿಸಿರುತ್ತದೆ. ಈಗಾಗಲೇ ಪ್ರತಿಯೊಬ್ಬ ಸದಸ್ಯರಿಗೂ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದ್ದು, ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಹಾಸಭೆಗೆ ಭಾಗವಹಿಸಲು ಕೋರಲಾಗಿದೆ.

ವಿಶೇಷ ಸೂಚನೆ: 1) ಸಿಹಿ ಪೊಟ್ಟಣವನ್ನು ದಿನಾಂಕ 18.09.2022ರ ವಾರ್ಷಿಕ ಮಹಾಸಭೆಯ ದಿನ ಮಾತ್ರ ವಿತರಿಸಲಾಗುವುದು.
2) ದಿನಾಂಕ 19.09.2022ನೇ ಸೋಮವಾರದಂದು ಸಹಕಾರಿಗೆ ರಜೆ ಘೋಷಿಸಲಾಗಿದೆ.

ದಿನಾಂಕ : 17.09.2022 ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸ್ಥಳ: ಮೈಸೂರು ಸಹಿ/– ಹೆಚ್.ಎ.ಪುರುಷೋತ್ತಮ